ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಆ/G. 6431 /12-13
(PSRG)
ಪ್ರಅ/PR/982/12-13.

ಆಯುಕ್ತರವರ ಕಛೇರಿ
ಎನ್.ಆರ್. ವೃತ್ತ, ಬೆಂಗಳೂರು-02
ದಿನಾಂಕ: 09.11.2012
15

ಸುತ್ತೋಲೆ

ವಿಷಯ:- ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಕತ್ತರಿಸಿದ ಭಾಗಗಳನ್ನು ದುರಸ್ಥಿಗೊಳಿಸುವುದು ಮತ್ತು ಪಾಲಿಕೆ ಆಸ್ತಿಗಳ ನಿರ್ವಹಣೆ ಬಗ್ಗೆ.

****

ಪಾಲಿಕೆಯ 8 ವಲಯಗಳಲ್ಲಿ ಆಯಾಯ ಉಪವಿಭಾಗ ಕಛೇರಿಯಿಂದ ಖಾಸಗಿ ಕಟ್ಟಡಗಳಿಗೆ ನೀರು ಸರಬರಾಜು, ಒಳಚರಂಡಿ ಮತ್ತು ವಿದ್ಯುತ್ ಸಂಪರ್ಕಕ್ಕಾಗಿ ರಸ್ತೆ ಕತ್ತರಿಸಲು ಅನುಮತಿ ನೀಡುತ್ತಿರುವುದು ಸರಿಯಷ್ಟೆ. ಆದರೆ ಈ ತರಹ ರಸ್ತೆ ಕತ್ತರಿಸಿದ ಭಾಗಗಳನ್ನು ಸಮರ್ಪಕವಾಗಿ ಮತ್ತು ತುರ್ತಾಗಿ ದುರಸ್ಥಿಗೊಳಿಸಿ ಮೇಲ್ಮೈಯನ್ನು ಯಥಾ ಸ್ಥಿತಿಗೆ ತರುವಲ್ಲಿ ವಿಳಂಭವಾಗುತ್ತಿದ್ದು ಸಾರ್ವಜನಿಕರಿಗೆ ಹಾಗೂ ಸುಗಮ ವಾಹನ ಸಂಚಾರಕ್ಕೆ ಅನಾನುಕೂಲವಾಗುತ್ತಿರುವುದು ಕಂಡುಬಂದಿರುತ್ತದೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ರಸ್ತೆ ಕತ್ತರಿಸಿದ ಭಾಗಗಳನ್ನು ಆದಷ್ಟು ಶೀಘ್ರ ವಿಶಿಷ್ಟ ವಿವರಣೆಯಂತೆ (As per IRC: 98-1997) ದುರಸ್ಥಿಗೊಳಿಸಲು ಕ್ರಮ ಕೈಗೊಳ್ಳುವಂತೆ **ವಲಯ ಜಂಟಿ/ಅಪರ ಆಯುಕ್ತರುಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದೆ.** ಈ ಸಂಬಂಧ ವಾರ್ಡ್‌ವಾರು ರಸ್ತೆ ಕತ್ತರಿಸಲು ಅನುಮತಿ ನೀಡಿ ರಸ್ತೆ ಶುಲ್ಕ ವಸೂಲು ಮಾಡಿರುವ ಶುಲ್ಕದಲ್ಲಿ ವಾರ್ಡ್‌ವಾರು ರಸ್ತೆ ಕತ್ತರಿಸಿದ ಭಾಗಗಳನ್ನು ಸರಿಪಡಿಸುವ ಸಲುವಾಗಿ ವಿನಿಯೋಗಿಸಲು ಅಗತ್ಯ ಕ್ರಮ ಕೈಗೊಳ್ಳುವುದು. ಈ ಪ್ರಕ್ರಿಯೆಗೆ ಅವಶ್ಯಕವಿರುವ ಆಡಳಿತಾತ್ಮಕ ಅನುಮೋದನೆಯನ್ನು ರಸ್ತೆ ಕತ್ತರಿಸಲು ಅನುಮತಿ ನೀಡುವಲ್ಲಿ ವಸೂಲಾಗುವ ಮೊತ್ತವನ್ನು ಮೀರದಂತೆ ನೀಡುವುದು. ವಲಯ ಕಾಮಗಾರಿ ಇಲಾಖೆ ಅಧಿಕಾರಿಗಳು ರಸ್ತೆ ಕತ್ತರಿಸಿದ ಭಾಗಗಳನ್ನು ವಿಶಿಷ್ಟ ವಿವರಣೆಯಂತೆ (As per IRC: 98-1997) ದುರಸ್ಥಿಗೊಳಿಸಲು ಅಗತ್ಯ ಕ್ರಮ ವಹಿಸುವುದು.

ಇದರ ಜೊತೆಗೆ ವಾರ್ಡ್ ಅನುದಾನದಲ್ಲಿ (POW) ತುರ್ತು ಕಾಮಗಾರಿಗಳಿಗೆಂದು ಮೀಸಲಿರಿಸಿರುವ ಅನುಧಾನದಲ್ಲಿ ಸಹ ರಸ್ತೆ ಗುಂಡಿಗಳನ್ನು ಮುಚ್ಚಲು ಹಾಗೂ ಪಾಲಿಕೆ ಕಟ್ಟಡಗಳ ನಿರ್ವಹಣೆಗೆ ಬಳಸಿಕೊಂಡು ಎಲ್ಲಾ ಕಟ್ಟಡಗಳನ್ನು ಸುಸ್ಥಿಯಲ್ಲಿಡಬೇಕೆಂದು ಸೂಚಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ವಿಶೇಷ ಆಯುಕ್ತರು(ಯೋಜನೆ)/ಅಪರ ಆಯುಕ್ತರು(ಯೋಜನೆ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಎಲ್ಲಾ ಜಂಟಿ/ಅಪರ ಆಯುಕ್ತರು ರವರಿಗೆ ಸೂಕ್ತ ಕ್ರಮಕ್ಕಾಗಿ.
4. ಪ್ರಧಾನ ಅಭಿಯಂತರರವರ ಮಾಹಿತಿಗೆ ಮತ್ತು ಸೂಕ್ತ ಕ್ರಮಕ್ಕಾಗಿ.
5. ಎಲ್ಲಾ ಮುಖ್ಯ ಅಭಿಯಂತರರುಗಳಿಗೆ ಸೂಕ್ತ ಕ್ರಮಕ್ಕಾಗಿ.
6. ಮುಖ್ಯ ಲೆಕ್ಕಾಧಿಕಾರಿಗಳು/ವಲಯ ರವರಿಗೆ ಸೂಕ್ತ ಕ್ರಮಕ್ಕಾಗಿ/ಮುಖ್ಯಲೆಕ್ಕ ಪರಿಶೋಧಕರು ರವರ ಮಾಹಿತಿಗಾಗಿ ಕಳುಹಿಸಿದೆ.
7. ಕೌನ್ಸಿಲ್ ಕಾರ್ಯದರ್ಶಿ ರವರಿಗೆ ಸೂಕ್ತ ಕ್ರಮಕ್ಕಾಗಿ.

'Certified Copy'
K madhu kumar 20/3/14
ಪ್ರಧಾನ ಅಭಿಯಂತರರ ತಾಂತ್ರಿಕ ಸಹಾಯಕರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು – 560 002

ಸಂಖ್ಯೆ: ಹೆನಿನಯೋ/ಜೆ.ಡಿ(ಉ)/ಡಿಎಮ್3/ಪಿಆರ್/320/2015-16 ದಿನಾಂಕ: 0A-09-2015

ಸುತ್ತೋಲೆ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಟ್ಟಡಗಳಿಗೆ ಪರವಾನಗಿ ನೀಡುವಾಗ ವಿಧಿಸುವ ನೆಲಬಾಡಿಗೆ ಶುಲ್ಕ, ಲೈಸೆನ್ಸ್ ಶುಲ್ಕ ಮತ್ತು ನಕ್ಷೆಗಳ ಪ್ರತಿಗಳ ಶುಲ್ಕಗಳನ್ನು ಹಾಗೂ ಇತರೆ ಶುಲ್ಕಗಳನ್ನು ಸಂಬಂಧಿಸಿದ ಸ್ವತ್ತಿನ ಚಾಲ್ತಿ ಮಾರ್ಗಸೂಚಿ ದರಗಳಿಗೆ ಅನುಗುಣವಾಗಿ ಪಾವತಿಸಿಕೊಳ್ಳುವ ಬಗ್ಗೆ.

ಉಲ್ಲೇಖ:
1. ಪಾಲಿಕೆಯ ಸುತ್ತೋಲೆಯ ಸಂಖ್ಯೆ: ಜೆಡಿಟಿಪಿ/ ಸಿ2/ ಪಿಆರ್/ 54/ 07-08, ದಿನಾಂಕ: 18-12-2007.
2. ಪಾಲಿಕೆಯ ಸುತ್ತೋಲೆ ಸಂಖ್ಯೆ: ಜೆಡಿಟಿಪಿ/ ಸಿ2/ ಪಿಆರ್/ 54/ 07-08, ದಿನಾಂಕ: 26-02-2008.
3. ಪಾಲಿಕೆಯ ಮಾನ್ಯ ಆಡಳಿತಗಾರರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಕೈಗೊಂಡ ನಿರ್ಣಯದ ವಿಷಯದ ಸಂಖ್ಯೆ: 167/2015-16, ದಿನಾಂಕ: 25-08-2015

****

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಬಗೆಯ ಕಟ್ಟಡಗಳ ನಿರ್ಮಾಣಕ್ಕೆ ನಕ್ಷೆಗಳನ್ನು ಅನುಮೋದಿಸುವಾಗ ವಿಧಿಸಬಹುದಾದ ಶುಲ್ಕಗಳನ್ನು ಉಲ್ಲೇಖ (1) ಮತ್ತು (2) ರಲ್ಲಿನ ಸುತ್ತೋಲೆಗಳಲ್ಲಿ ನಿಗಧಿಪಡಿಸಲಾದ ದರಗಳಂತೆ ಇದುವರೆವಿಗೂ ಪಾವತಿಸಿಕೊಳ್ಳಲಾಗುತ್ತಿತ್ತು.

ಉಲ್ಲೇಖ (1) ಮತ್ತು (2) ರ ಸುತ್ತೋಲೆಗಳ ಶುಲ್ಕಗಳನ್ನು 2007-08 ನೇ ಸಾಲಿನಲ್ಲಿ ಪರಿಷ್ಕರಿಸಿ ನಿಗಧಿಪಡಿಸಲಾಗಿದ್ದು, ಕಳೆದ ಸುಮಾರು 8 ವರ್ಷಗಳ ಅವಧಿಯಲ್ಲಿ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಮಾರ್ಗಸೂಚಿ ದರಗಳು (Guidance Value), ಲೋಕೋಪಯೋಗಿ ಇಲಾಖೆಯ ದರಪಟ್ಟಿಯಲ್ಲಿನ ದರಗಳನ್ನು ಸರ್ಕಾರದಿಂದ ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತಿರುತ್ತದೆ ಮತ್ತು ಅಂದಿನಿಂದ ಇಂದಿನವರೆವಿಗೂ ದೈನಂದಿನ ಬದುಕಿನ ಸಾಮಾನ್ಯ ದರಗಳು, ಬೆಲೆಗಳು ಮತ್ತು ಇತರೇ ಸೇವೆಗಳ ದರಗಳಲ್ಲಿಯೂ ಸಹ ಎಲ್ಲಾ ಹಂತಗಳಲ್ಲಿಯೂ ಸುಮಾರು ಪಟ್ಟು ಹೆಚ್ಚಳವಾಗಿರುತ್ತದೆ. ವಿವಿಧ ನಾಗರೀಕ ಸೇವೆಗಳನ್ನು ನೀಡಲು ಪಾಲಿಕೆಯು ಭರಿಸುತ್ತಿರುವ ವೆಚ್ಚಗಳೂ ಸಹ ಪ್ರತೀ ವರ್ಷ ಗಣನೀಯವಾಗಿ ಹೆಚ್ಚಳಗೊಂಡಿವೆ. ಇದರಿಂದ ಪಾಲಿಕೆಯ ಆದಾಯಕ್ಕೆ ಹೋಲಿಸಿದಲ್ಲಿ ವೆಚ್ಚದ ಪ್ರಮಾಣ ದಿನೇ ದಿನೇ ಹೆಚ್ಚಳವಾಗುತ್ತಿದ್ದು, ಈ ವ್ಯತ್ಯಾಸ ಸಮತೋಲನಕ್ಕಾಗಿ ಪಾಲಿಕೆಯ ವಿವಿಧ ಮೂಲಗಳ ಆರ್ಥಿಕ ಸಂಪನ್ಮೂಲಗಳನ್ನು ವೈಜ್ಞಾನಿಕವಾಗಿ ಕ್ರೂಢೀಕರಿಸುವುದು ಪಾಲಿಕೆಯ ಪ್ರಸ್ತುತ ಆದ್ಯತೆಯಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಪ್ರಸ್ತುತ ಉಲ್ಲೇಖ (3) ರ ಮಾನ್ಯ ಆಡಳಿತಗಾರರ ನಿರ್ಣಯದಲ್ಲಿ ಉಲ್ಲೇಖ (1) ಮತ್ತು (2) ರ ಸುತ್ತೋಲೆಗಳಲ್ಲಿ ವಸತಿ / ವಸತಿಯೇತರ ಕಟ್ಟಡಗಳಿಗೆ ಲೈಸೆನ್ಸ್ (ಪರವಾನಗಿ) ಮತ್ತು ಪ್ರಾರಂಭಿಕ ಪ್ರಮಾಣಪತ್ರ ನೀಡುವಾಗ ವಿಧಿಸುತ್ತಿರುವ ಶುಲ್ಕಗಳು ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ ನೀಡುವಾಗ ವಿಧಿಸುತ್ತಿರುವ ದಂಡ ಶುಲ್ಕಗಳ ದರಗಳನ್ನು ಸಂಬಂಧಿಸಿದ ಸ್ವತ್ತಿನ ಚಾಲ್ತಿಯಲ್ಲಿರುವ ಮಾರ್ಗಸೂಚಿ ದರದ ಶೇಕಡಾವಾರು ಪ್ರಮಾಣದಲ್ಲಿ ಪಾವತಿಸಿಕೊಳ್ಳಲು ನಿರ್ಣಯ ಕೈಗೊಂಡಿರುತ್ತಾರೆ.

ಆದುದರಿಂದ, ಉಲ್ಲೇಖ (1) ಮತ್ತು (2) ರ ಪಾಲಿಕೆ ಸುತ್ತೋಲೆಗಳನ್ನು ಹಿಂಪಡೆಯಲಾಗಿದ್ದು, ಉಲ್ಲೇಖ (3) ರ ಮಾನ್ಯ ಆಡಳಿತಗಾರರ ನಿರ್ಣಯದಲ್ಲಿ ನಿಗಧಿಪಡಿಸಲಾದಂತೆ ಕಟ್ಟಡ ನಕ್ಷೆ ಮಂಜೂರಾತಿ ಮತ್ತು ಪ್ರಾರಂಭಿಕ ಪ್ರಮಾಣಪತ್ರ ಶುಲ್ಕಗಳ ದರಗಳನ್ನು **ಅನುಬಂಧ – 1** ಹಾಗೂ ಸ್ವಾಧೀನಾನುಭವ ಪ್ರಮಾಣಪತ್ರ ನೀಡುವಾಗ ವಿಧಿಸುವ ದಂಡ ಶುಲ್ಕಗಳ ವಿವರಗಳನ್ನು **ಅನುಬಂಧ – 2** ರಲ್ಲಿ ನಮೂದಿಸಲಾಗಿದ್ದು, ಇದರಂತೆ ಅನ್ವಯಿಸುವ ಪ್ರಕರಣಗಳಿಗೆ ಶುಲ್ಕಗಳನ್ನು ಪಾವತಿಸಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ೞ

ಅನುಬಂಧ - 1

ಕ್ರಸಂ	ಶುಲ್ಕಗಳ ವಿವರ (ಕಟ್ಟಡದ ಒಟ್ಟು ನಿರ್ಮಾಣ ವಿಸ್ತೀರ್ಣಕ್ಕೆ)	ನಿವೇಶನ / ಸ್ವತ್ತಿಗೆ ಚಾಲ್ತಿಯಲ್ಲಿರುವ ಮಾರ್ಗಸೂಚಿ ದರ* ಗಳಂತೆ ಪಾವತಿಸಿಕೊಳ್ಳಬೇಕಾದ ಶುಲ್ಕಗಳ ದರ ಪ್ರತೀ ಚ.ಮೀ.ಗೆ, (*ಮಾರ್ಗಸೂಚಿ ದರದ ಶೇಕಡಾವಾರು ಪ್ರಮಾಣ)		
		ವಸತಿ	ವಸತಿಯೇತರ / ವಾಣಿಜ್ಯ	ಕೈಗಾರಿಕೆ
1	2	3	4	5
I. ನಕ್ಷೆ ಮಂಜೂರಾತಿ ಹಂತ				
1	ಪರಿಶೀಲನಾ ಶುಲ್ಕ	0.009%	0.014%	-
2	ನೆಲಬಾಡಿಗೆ	0.09%	0.22%	-
3	ಪರವಾನಗಿ ಶುಲ್ಕ	0.18%	0.28%	0.17%
II. ಪ್ರಾರಂಭಿಕ ಪ್ರಮಾಣಪತ್ರ ಹಂತ				
4	ಪ್ರಾರಂಭಿಕ ಪ್ರಮಾಣಪತ್ರ ಶುಲ್ಕ	0.11%	0.18%	0.18%

ಸೂಚನೆ: *"ಮಾರ್ಗಸೂಚಿ ದರ "ಅಂದರೆ (ಶುಲ್ಕಗಳ ಲೆಕ್ಕಾಚಾರದ ಉದ್ದೇಶಕ್ಕಾಗಿ)

1) ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಸೆಕ್ಷನ್ 45 (ಬಿ) ಅಡಿಯಲ್ಲಿ ನಿರ್ದಿಷ್ಟ ನಿವೇಶನ / ಸ್ವತ್ತಿಗೆ ನಿಗಧಿಪಡಿಸಲಾದ ಹಾಲಿ ಚಾಲ್ತಿಯಲ್ಲಿರುವ ಚ.ಮೀ. ಒಂದರ ಮಾರ್ಗಸೂಚಿ ದರ.
2) ದರ ನಿಗಧಿಪಡಿಸುವಲ್ಲಿ ಇರುವ ವಿಶೇಷ ಸೂಚನೆಗಳನ್ನು ಅಳವಡಿಸಿ ದರ ಪರಿಗಣಿಸುವುದು.
3) ಒಂದು ವೇಳೆ ನಿವೇಶನದ ಮಾರ್ಗಸೂಚಿ ದರ ಚ.ಮೀ. ಒಂದಕ್ಕೆ ರೂ. **50,000/-** ಗಳಿಗಿಂತ ಕಡಿಮೆ ಬಂದಲ್ಲಿ ಕನಿಷ್ಠ ರೂ. **50,000/-** ಗಳನ್ನು ಚ.ಮೀ. ಒಂದರ ಸ್ವತ್ತಿನ ಮಾರ್ಗಸೂಚಿ ದರವನ್ನಾಗಿ ಪರಿಗಣಿಸಿ ಅದರನ್ವಯ ಶುಲ್ಕ ಲೆಕ್ಕಾಚಾರ ಮಾಡತಕ್ಕದ್ದು.

ವಿಶೇಷ ಸೂಚನೆ:

1. ನಿವೇಶನ / ಸ್ವತ್ತಿನ ಮೌಲ್ಯ ನಿರ್ಧರಣೆಗೆ ಸಂಬಂಧಿಸಿದಂತೆ ಸರ್ಕಾರದ ಅಧಿಸೂಚನೆಯಲ್ಲಿನ ಬೆಂಗಳೂರು ನಗರದ ಜಿಲ್ಲಾ ಉಪನೊಂದಣಿ ಕಛೇರಿಗಳ ವ್ಯಾಪ್ತಿಗೆ ಅನ್ವಯಿಸುವ ವಿಶೇಷ ಸೂಚನೆಗಳನ್ನು ಪಾಲಿಸುವುದು.
2. ಶುಲ್ಕ ಲೆಕ್ಕಾಚಾರಕ್ಕೆ ಸಂಬಂಧಿಸಿದಂತೆ, ನೊಂದಣಿ ಮತ್ತು ಮುದ್ರಾಂಕ ಇಲಾಖೆಯು ಬೆಂಗಳೂರು ನಗರ ಜಿಲ್ಲಾ ಉಪನೊಂದಣಿ ಕಛೇರಿಗಳ ವ್ಯಾಪ್ತಿಯಲ್ಲಿ ಕಾಲಕಾಲಕ್ಕೆ ಪರಿಷ್ಕರಿಸುವ ಅಧಿಸೂಚನೆಯಲ್ಲಿನ ಮಾರ್ಗಸೂಚಿ ದರಗಳು ಹಾಗೂ ವಿಶೇಷ ಸೂಚನೆಗಳನ್ನು ಅಳವಡಿಸಿಕೊಳ್ಳತಕ್ಕದ್ದು.

ಅನುಬಂಧ - 2

ಸ್ವಾಧೀನಾನುಭವ ಪ್ರಮಾಣಪತ್ರ ಹಂತ

ಕ್ರಮ ಸಂಖ್ಯೆ	ದಂಡ ಶುಲ್ಕದ ವಿವರಗಳು (ಕಟ್ಟಡ ನಿರ್ಮಾಣ ವಿಸ್ತೀರ್ಣಕ್ಕೆ)	ನಿವೇಶನ / ಸ್ವತ್ತಿಗೆ ಚಾಲ್ತಿಯಲ್ಲಿರುವ ಮಾರ್ಗಸೂಚಿ ದರ* ಗಳಂತೆ ಪಾವತಿಸಿಕೊಳ್ಳಬೇಕಾದ ದಂಡ ಶುಲ್ಕಗಳ ದರ ಪ್ರತೀ ಚ.ಮೀ.ಗೆ, (*ಮಾರ್ಗಸೂಚಿ ದರದ ಶೇಕಡಾವಾರು ಪ್ರಮಾಣ)	
		ವಲಯ ನಿಯಮಾವಳಿ / ಕಟ್ಟಡ ಉಪವಿಧಿಗಳಲ್ಲಿ ಅನುಮತಿಸಬಹುದಾದ ಮಿತಿಯೊಳಗಿನ ಉಲ್ಲಂಘನೆಗಳು (ಮಂಜೂರಾತಿ ನಕ್ಷೆಗೆ) (ಪ್ರತಿ ಚ.ಮೀ. ಗೆ)	ವಲಯ ನಿಯಮಾವಳಿ / ಕಟ್ಟಡ ಉಪವಿಧಿಗಳಲ್ಲಿ ಅನುಮತಿಸಬಹುದಾದ ಮಿತಿಗಿಂತ ಶೇ. 5 ರಷ್ಟು ಮೀರದ ಉಲ್ಲಂಘನೆಗಳು (ಪ್ರತಿ ಚ.ಮೀ. ಗೆ)
1	2	3	4
1	ಏಕ ವಸತಿ ಘಟಕ	0.55%	2.20%

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

1	2	3	4
2	**ವಸತಿ ಸಮುಚ್ಚಯ**		
	ಎ) 2 ರಿಂದ 10 ಘಟಕಗಳು	3.30%	6.60%
	ಬಿ) 11 ರಿಂದ 50 ಘಟಕಗಳು	4.40%	7.70%
	ಸಿ) 51 ರಿಂದ 200 ಘಟಕಗಳು	5.50%	8.80%
	ಡಿ) 200 ಘಟಕಗಳಿಗಿಂತ ಮೇಲ್ಪಟ್ಟು	6.60%	11.00%
3	**ವಾಣಿಜ್ಯ ಕಟ್ಟಡಗಳು**		
	ಎ) ಕಟ್ಟಡದ ಒಟ್ಟು ವಿಸ್ತೀರ್ಣ 750 ಚ.ಮೀ. ವರೆಗೆ	4.40%	6.60%
	ಎ) ಕಟ್ಟಡದ ಒಟ್ಟು ವಿಸ್ತೀರ್ಣ 750 ಚ.ಮೀ.ಗಿಂತ ಮೇಲ್ಪಟ್ಟು	6.60%	11.00%
4	**ಕೈಗಾರಿಕಾ ಕಟ್ಟಡಗಳು**		
	ಎ) ಕಟ್ಟಡದ ಒಟ್ಟು ವಿಸ್ತೀರ್ಣ 750 ಚ.ಮೀ. ವರೆಗೆ	4.40%	6.60%
	ಬಿ) ಕಟ್ಟಡದ ಒಟ್ಟು ವಿಸ್ತೀರ್ಣ 750 ಚ.ಮೀ.ಗಿಂತ ಮೇಲ್ಪಟ್ಟು	4.40%	8.80%
5	**ಇತರೇ ಕಟ್ಟಡಗಳು (ಧಾರ್ಮಿಕ ಕಟ್ಟಡಗಳನ್ನು ಹೊರತುಪಡಿಸಿ)**		
	ಎ) ಕಟ್ಟಡದ ಒಟ್ಟು ವಿಸ್ತೀರ್ಣ 750 ಚ.ಮೀ. ವರೆಗೆ	2.20%	5.50%
	ಬಿ) ಕಟ್ಟಡದ ಒಟ್ಟು ವಿಸ್ತೀರ್ಣ 750 ಚ.ಮೀ.ಗಿಂತ ಮೇಲ್ಪಟ್ಟು	3.30%	6.60%
6	ಅನುಮತಿಸಬಹುದಾದ ನಡುಜಾಗಗಳ ಮಿತಿಯಲ್ಲಿ ತಳ ಅಂತಸ್ತನ್ನು ಮಂಜೂರಾದ ನಕ್ಷೆಗಿಂತ ಹೆಚ್ಚುವರಿ ಯಾಗಿ ನಿರ್ಮಿಸಿರುವುದಕ್ಕೆ	6.60%	11.00%
		ವಸತಿ	**ವಸತಿಯೇತರ**
7	ಮೆಜನೈನ್ ಅಂತಸ್ತಿನಲ್ಲಿ ಅನುಮತಿಸಬಹುದಾದ ಮಿತಿಗಿಂತ ಹೆಚ್ಚುವರಿಯಾಗಿ ನಿರ್ಮಿಸಿರುವ ಕಟ್ಟಡದ ವಿಸ್ತೀರ್ಣಕ್ಕೆ (ಉಲ್ಲಂಘನೆಯ ವಿಸ್ತೀರ್ಣವು ಶೇ. 5 ರ ಮಿತಿಯೊಳಗೆ ಇದ್ದಲ್ಲಿ)	8.80%	17.60%
8	ಮೇಲ್ಛಾವಣಿ ಅಂತಸ್ತಿನಲ್ಲಿ ಹೆಚ್ಚುವರಿಯಾಗಿ ನಿರ್ಮಿಸಿರುವ ಕಟ್ಟಡದ ಒಟ್ಟಾರೆ ಉಲ್ಲಂಘನೆಯ ವಿಸ್ತೀರ್ಣವು ಸಕ್ರಮಗೊಳಿಸ ಬಹುದಾದ ಶೇ. 5 ರ ಮಿತಿಯೊಳಗೆ ಇದ್ದಲ್ಲಿ (ಅನುಮತಿಸಬಹುದಾದ ಮೇಲ್ಛಾವಣಿ ವಿಸ್ತೀರ್ಣದ ಶೇ. 15 ರ ಮಿತಿ)	8.80%	17.60%
9	ಮಂಜೂರಾದ ನಕ್ಷೆಗೆ ಹೆಚ್ಚುವರಿಯಾಗಿ ತೆರೆದ ಬಾಲ್ಕನಿಯನ್ನು ನಿರ್ಮಿಸಿರುವುದಕ್ಕೆ (ಮಂಜೂರಾದ ನಕ್ಷೆಗಿಂತ ಶೇ 25% ರಷ್ಟು ಗರಿಷ್ಠ ಮಿತಿಯಲ್ಲಿದ್ದಲ್ಲಿ)	6.60%	9.90%

1	2	3	4
10	ಪ್ರಾರಂಭಿಕ ಪ್ರಮಾಣಪತ್ರ ಪಡೆಯದೇ ಕಟ್ಟಡದ ಕಾಮಗಾರಿಯನ್ನು ನಿರ್ವಹಿಸಿರುವ ಕಟ್ಟಡದ ಭಾಗಕ್ಕೆ	0.11%	0.22%
11	ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆಯದೇ ವಲಯ ನಿಯಮಾವಳಿ / ಉಪವಿಧಿಗಳ ಮಿತಿಯೊಳಗೆ ಕಟ್ಟಡದ ಕಾಮಗಾರಿಯನ್ನು ನಿರ್ವಹಿಸಿರುವ ಕಟ್ಟಡದ ಭಾಗಕ್ಕೆ	0.17%	0.33%
12	ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯದೇ ಉಪಯೋಗಿಸುತ್ತಿರುವ ಕಟ್ಟಡದಭಾಗಕ್ಕೆ (ಸ್ವಾಧೀನಗೊಂಡಿರುವ ಕಟ್ಟಡದ ವಿಸ್ತೀರ್ಣಕ್ಕೆ)	0.11%	0.22%

ಸೂಚನೆ: *"ಮಾರ್ಗಸೂಚಿ ದರ "ಅಂದರೆ (ಶುಲ್ಕಗಳ ಲೆಕ್ಕಾಚಾರದ ಉದ್ದೇಶಕ್ಕಾಗಿ)

1) ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಸೆಕ್ಷನ್ 45 (ಬಿ) ಅಡಿಯಲ್ಲಿ ನಿರ್ದಿಷ್ಟ ನಿವೇಶನ / ಸ್ವತ್ತಿಗೆ ನಿಗಧಿಪಡಿಸಲಾದ ಹಾಲಿ ಚಾಲ್ತಿಯಲ್ಲಿರುವ ಚ.ಮೀ. ಒಂದರ ಮಾರ್ಗಸೂಚಿ ದರ.
2) ದರ ನಿಗಧಿಪಡಿಸುವಲ್ಲಿ ಇರುವ ವಿಶೇಷ ಸೂಚನೆಗಳನ್ನು ಅಳವಡಿಸಿ ದರ ಪರಿಗಣಿಸುವುದು.
3) **ಒಂದು ವೇಳೆ ನಿವೇಶನದ ಮಾರ್ಗಸೂಚಿ ದರ ಚ.ಮೀ. ಒಂದಕ್ಕೆ ರೂ. 50,000/- ಗಳಿಗಿಂತ ಕಡಿಮೆ ಬಂದಲ್ಲಿ ಕನಿಷ್ಠ ರೂ. 50,000/- ಗಳನ್ನು ಚ.ಮೀ. ಒಂದರ ಸ್ವತ್ತಿನ ಮಾರ್ಗಸೂಚಿ ದರವನ್ನಾಗಿ ಪರಿಗಣಿಸಿ ಅದರನ್ವಯ ಶುಲ್ಕ ಲೆಕ್ಕಾಚಾರ ಮಾಡತಕ್ಕದ್ದು.**

ವಿಶೇಷ ಸೂಚನೆ:

1. ನಿವೇಶನ / ಸ್ವತ್ತಿನ ಮೌಲ್ಯ ನಿರ್ಧರಣೆಗೆ ಸಂಬಂಧಿಸಿದಂತೆ ಸರ್ಕಾರದ ಅಧಿಸೂಚನೆಯಲ್ಲಿನ ಬೆಂಗಳೂರು ನಗರದ ಜಿಲ್ಲಾ ಉಪನೊಂದಣಿ ಕಛೇರಿಗಳ ವ್ಯಾಪ್ತಿಗೆ ಅನ್ವಯಿಸುವ ವಿಶೇಷ ಸೂಚನೆಗಳನ್ನು ಪಾಲಿಸುವುದು.
2. ಶುಲ್ಕ ಲೆಕ್ಕಾಚಾರಕ್ಕೆ ಸಂಬಂಧಿಸಿದಂತೆ, ನೊಂದಣಿ ಮತ್ತು ಮುದ್ರಾಂಕ ಇಲಾಖೆಯು ಬೆಂಗಳೂರು ನಗರ ಜಿಲ್ಲಾ ಉಪನೊಂದಣಿ ಕಛೇರಿಗಳ ವ್ಯಾಪ್ತಿಯಲ್ಲಿ ಕಾಲಕಾಲಕ್ಕೆ ಪರಿಷ್ಕರಿಸುವ ಅಧಿಸೂಚನೆಯಲ್ಲಿನ ಮಾರ್ಗಸೂಚಿ ದರಗಳು ಹಾಗೂ ವಿಶೇಷ ಸೂಚನೆಗಳನ್ನು ಅಳವಡಿಸಿಕೊಳ್ಳತಕ್ಕದ್ದು.

ಮುಂದುವರೆದು, ದೃಢೀಕರಿಸಿದ ನಕ್ಷೆಗಳ ಪ್ರತಿಗಳು, ಮಂಜೂರಾತಿ ನಕ್ಷೆಗಳ ಪ್ರತಿಗಳು ಮತ್ತು ಕಾಂಪೌಂಡ್ ಗೋಡೆ ಶುಲ್ಕಗಳನ್ನು ಉಲ್ಲೇಖ (1) ರಲ್ಲಿ ನಿಗದಿಪಡಿಸಲಾಗಿದ್ದಂತೆ, ಈ ಕೆಳಕಂಡ **ಅನುಬಂಧ – 3** ರಲ್ಲಿ ನಮೂದಿಸಿರುವ ದರಗಳಂತೆ ಪಾವತಿಸಿಕೊಳ್ಳಲು ಸೂಚಿಸಿದೆ.

ಅನುಬಂಧ – 3

ಕ್ರಮ ಸಂಖ್ಯೆ	ಶುಲ್ಕಗಳ ವಿವರ	ಪ್ರಮಾಣ	ಶುಲ್ಕದ ದರ (ರೂ.ಗಳಲ್ಲಿ)
1	<u>ದೃಢೀಕರಿಸಿದ ನಕ್ಷೆಗಳ ಪ್ರತಿಗಳು</u>		
	ಎ) ತಳ, ನೆಲ ಮತ್ತು ಮೇಲಿನ ಮೂರು ಅಂತಸ್ತುವರೆಗಿನ ವಸತಿ ಕಟ್ಟಡಗಳ ಪ್ರತಿ ನಕ್ಷೆಗಳ ಪ್ರತಿಯೊಂದಕ್ಕೆ	ಪ್ರತಿ ಪ್ರತಿಗೆ	50.00
	ಬಿ) ಬಹುಮಹಡಿ ವಸತಿ ಕಟ್ಟಡಗಳ ನಕ್ಷೆಗಳ ಪ್ರತಿಗೆ ಪ್ರತಿ ಪ್ರತಿಗೆ	ಪ್ರತಿ ಪ್ರತಿಗೆ	100.00
	ಸಿ) ವಸತಿಯೇತರ ಕಟ್ಟಡಗಳ ನಕ್ಷೆಗಳ ಪ್ರತಿಗೆ ಪ್ರತಿ ಪ್ರತಿಗೆ	ಪ್ರತಿ ಪ್ರತಿಗೆ	100.00

1	2	3	4
2	**ನಕ್ಷೆಗಳ ಪ್ರತಿ** 1. ವಸತಿ ಮೊದಲ 5 ಪ್ರತಿಯವರೆಗೆ 6ನೇ ಯ ಹಾಗೂ ತದನಂತರದ ಪ್ರತಿಗಳಿಗೆ **2. ವಸತಿ ಸಮುಚ್ಚಯ ಹಾಗೂ ವಸತಿಯೇತರ ಕಟ್ಟಡಗಳಿಗೆ** 1. ಮೊದಲ 5 ಪ್ರತಿಯವರೆಗೆ 6ನೇಯ ಹಾಗೂ ತದನಂತರದ ಪ್ರತಿಗಳಿಗೆ ತಲಾ	 ಪ್ರತಿ ಪ್ರತಿಗೆ ಪ್ರತಿ ಪ್ರತಿಗೆ ಪ್ರತಿ ಪ್ರತಿಗೆ ಪ್ರತಿ ಪ್ರತಿಗೆ	 100.00 200.00 400.00 600.00
3	**ಕಾಂಪೌಂಡ್ ಗೋಡೆ ನಿರ್ಮಿಸಲು ಶುಲ್ಕ**	ಪ್ರತಿ ಮೀಟರ್‌ಗೆ	10.00

ಈ ಸುತ್ತೋಲೆ ಜಾರಿಗೊಂಡಿರುವ ದಿನಾಂಕದಿಂದ ಕಟ್ಟಡ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ನೀಡುವಾಗ ಮೇಲ್ಕಂಡ ದರಗಳನ್ನು ಅನ್ವಯಿಸಿ ಶುಲ್ಕ ಪಾವತಿ ಸೂಚನಾ ಪತ್ರಗಳನ್ನು ನೀಡಿ ಶುಲ್ಕಗಳನ್ನು ತತ್‌ಕ್ಷಣದಿಂದ ಹಾಗೂ ಮುಂದಿನ ಆದೇಶದವರೆಗೆ ಪಾವತಿಸಿಕೊಳ್ಳಲು ಆದೇಶಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು ಅವಗಾನೆಗೆ ಸಲ್ಲಿಸಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಆಯುಕ್ತರವರ ಆಪ್ತ ಶಾಖೆಗೆ ಕಳುಹಿಸಿದೆ.
3. ವಿಶೇಷ ಆಯುಕ್ತರು (ಯೋಜನೆಗಳು / ಹಣಕಾಸು) ರವರ ಮಾಹಿತಿಗಾಗಿ
4. ಪ್ರಧಾನ ಅಭಿಯಂತರರು ರವರ ಮಾಹಿತಿಗಾಗಿ
5. ಅಪರ ನಿರ್ದೇಶಕರು (ನಗರ ಯೋಜನೆ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
6. ಮುಖ್ಯಸ್ಥರು, ಕಾನೂನು ಕೋಶ ರವರ ಮಾಹಿತಿಗಾಗಿ.
7. ಜಂಟಿ ಆಯುಕ್ತರು ಪೂರ್ವ / ಪಶ್ಚಿಮ / ದಕ್ಷಿಣ/ ಬ್ಯಾಟರಾಯನಪುರ / ಮಹದೇವಪುರ / ದಾಸರಹಳ್ಳಿ / ರಾಜರಾಜೇಶ್ವರಿ ನಗರ/ ಬೊಮ್ಮನಹಳ್ಳಿ, ರವರ ಮಾಹಿತಿಗಾಗಿ
8. ಎಲ್ಲಾ ಮುಖ್ಯ ಅಭಿಯಂತರರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
9. ಜಂಟಿ ನಿರ್ದೇಶಕರು ನಗರ ಯೋಜನೆ, (ಉತ್ತರ ಮತ್ತು ದಕ್ಷಿಣ) ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
10. ಎಲ್ಲಾ ಕಾರ್ಯಪಾಲಕ ಅಭಿಯಂತರರು ರವರ ಮಾಹಿತಿಗಾಗಿ,
11. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
12. ಸಹಾಯಕ ನಿರ್ದೇಶಕರು (ನಗರ ಯೋಜನೆ) ಪೂರ್ವ / ಪಶ್ಚಿಮ / ದಕ್ಷಿಣ/ ಬ್ಯಾಟರಾಯನಪುರ / ಮಹದೇವಪುರ / ದಾಸರಹಳ್ಳಿ / ರಾಜರಾಜೇಶ್ವರಿ ನಗರ/ ಬೊಮ್ಮನಹಳ್ಳಿ, ರವರ ಮಾಹಿತಿಗಾಗಿ
13. ಎಲ್ಲಾ ಸಹಾಯಕ ನಿರ್ದೇಶಕರು (ನಗರ ಯೋಜನೆ) / ಸುವರ್ಣ ಪರವಾನಗಿ ರವರ ಮುಂದಿನ ಕ್ರಮಕ್ಕಾಗಿ
14. ಕಛೇರಿ ಕಡತಕ್ಕೆ.

(3)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ರವರ ಕಛೇರಿ, ನರಸಿಂಹರಾಜ ವೃತ್ತ, ಬೆಂಗಳೂರು – 560 002.

ಸಂಖ್ಯೆ: ಬಿ12(1)/ಪಿಆರ್/223/2010-11

ದಿನಾಂಕ: 06-10-2016
20-10-2016

ಕಛೇರಿ ಆದೇಶ

ವಿಷಯ:- ಪಾಲಿಕೆಯ ವ್ಯಾಪ್ತಿಯಲ್ಲಿ ನಿರ್ಮಾಣಗೊಳ್ಳುವ ಕಟ್ಟಡಗಳ ಉಲ್ಲಂಘನೆ, ಸುರಕ್ಷತೆ, ಗುಣಮಟ್ಟದ ಮೇಲ್ವಿಚಾರಣೆ ಕೈಗೊಂಡು ಮಾಸಿಕ ವರದಿಗಳನ್ನು ಸಲ್ಲಿಸುವ ಕುರಿತು.

ಉಲ್ಲೇಖ:- 1. ಸರ್ಕಾರದ ಅಧಿಸೂಚನೆ ಸಂಖ್ಯೆ. UDD 286 MNY 2003, Dt. 26-02-2004.
2. ಪಾಲಿಕೆಯ ಕಛೇರಿ ಆದೇಶ ಸಂಖ್ಯೆ. ಬಿ12(1)/ಪಿಆರ್/223/2010-11, ದಿನಾಂಕ: 29-06-2015.
3. ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976 ರ ಸೆಕ್ಷನ್ 321 (1), (2), (3) ಮತ್ತು ಸೆಕ್ಷನ್ 462

****

ಸರ್ಕಾರದ ಉಲ್ಲೇಖ (1) ರ ಅಧಿಸೂಚನೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಸೆಕ್ಷನ್ 14, 15, 18, 24, 35(2), 46 ಮತ್ತು 47 ರಡಿಯಲ್ಲಿ ಯೋಜನಾ ಪ್ರಾಧಿಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗೆ ಅಧಿಕಾರ ನಿಯೋಗ ಮಾಡಲಾಗಿರುತ್ತದೆ. ಕಟ್ಟಡ ನಿರ್ಮಾಣಗಳು ಮತ್ತು ಅವುಗಳ ನಿಯಂತ್ರಣವು ಪಾಲಿಕೆಯ ಕರ್ತವ್ಯವಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿಯಮಾವಳಿಗಳಿಗೆ ವಿರುದ್ಧವಾಗಿ ಅಗತ್ಯ ಸುರಕ್ಷತೆ, ಗುಣಮಟ್ಟ, ಕಾಪಾಡಿಕೊಳ್ಳದೇ ಕಟ್ಟಡ ನಿರ್ಮಾಣಗಳನ್ನು ಕೈಗೊಳ್ಳುತ್ತಿರುವುದರಿಂದ, ಇತ್ತೀಚಿಗೆ ಬೆಳ್ಳಂದೂರು ಪ್ರದೇಶದಲ್ಲಿ ನಿರ್ಮಾಣ ಹಂತದಲ್ಲಿದ್ದ ಕಟ್ಟಡ ಕುಸಿದು ಪ್ರಾಣಹಾನಿ ಸಂಭವಿಸಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸುವ ಅಥವಾ ಅನಧಿಕೃತವಾಗಿ ನಿರ್ಮಿಸುವ ಕಟ್ಟಡ ನಿರ್ಮಾಣದ ಉಲ್ಲಂಘನೆಗಳನ್ನು ತಡೆಯುವ ನಿಟ್ಟಿನಲ್ಲಿ ಕಛೇರಿ ಆದೇಶ ಸಂಖ್ಯೆ. ಬಿ12(1)/ಪಿಆರ್/223/2010-11, ದಿನಾಂಕ: 29-10-2011 ರಂದು ಉಪವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮತ್ತು ವಿಭಾಗಗಳ ಕಾರ್ಯಪಾಲಕ ಅಭಿಯಂತರರಿಗೆ ಅಧಿಕಾರ ಪ್ರತ್ಯಾಯೋಜನೆ ನೀಡಲಾಗಿತ್ತು. ನಂತರ ಉಲ್ಲೇಖ (2) ರ ಸುತ್ತೋಲೆಯಲ್ಲಿ ಅನಧಿಕೃತ / ಉಲ್ಲಂಘಿತ ನಿರ್ಮಾಣಗಳ ಬಗ್ಗೆ ಕ್ರಮ ಕೈಗೊಳ್ಳಲು ಈ ಕೆಳಕಂಡಂತೆ ಆದೇಶಿಸಲಾಗಿದೆ.

" ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ 64 ಉಪವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರುಗಳು ಅವರವರ ಕಛೇರಿ ವ್ಯಾಪ್ತಿಯಲ್ಲಿ ಮಂಜೂರಾತಿ ನಕ್ಷೆಗೆ ವಿರುದ್ಧವಾಗಿ / ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ವಿವರಗಳು, ನೀಡಲಾದ ನೋಟೀಸ್ ವಿವರಗಳು ಹಾಗೂ ಕೈಗೊಂಡ ಕ್ರಮಗಳ ವಿವರಗಳನ್ನೊಳಗೊಂಡ ಪ್ರತ್ಯೇಕ ವಹಿಯನ್ನು (Register) ಕಡ್ಡಾಯವಾಗಿ ನಿರ್ವಹಿಸತಕ್ಕದ್ದು ಮತ್ತು ಸದರಿ ಅಂಕಿ ಅಂಶಗಳು ಹಾಗೂ ನೀಡಲಾದ ನೋಟೀಸ್ ಪ್ರತಿಗಳೊಂದಿಗೆ ಪ್ರತಿ ವಾರದ ಅಂತ್ಯದಲ್ಲಿ ಅಂದರೆ, ಶನಿವಾರದಂದು ಸಂಬಂಧಪಟ್ಟ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಿಗೆ ತಪ್ಪದೇ ಸಲ್ಲಿಸತಕ್ಕದ್ದು. ಸಂಬಂಧಿಸಿದ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರವರುಗಳು ಅವರವರ ವ್ಯಾಪ್ತಿಯಲ್ಲಿನ ಉಪವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಗಳಿಂದ ಸ್ವೀಕರಿಸಲ್ಪಟ್ಟ ಅಂಕಿ ಅಂಶಗಳನ್ನು ಹಾಗೂ ನೀಡಲಾದ ನೋಟೀಸ್‌ನ ಪ್ರತಿಗಳೊಂದಿಗೆ 15 ದಿನಗಳಿಗೊಮ್ಮೆ ಪ್ರಧಾನ ಅಭಿಯಂತರರು ರವರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಈ ಆದೇಶ ಜಾರಿಗೊಂಡ ನಂತರವೂ ಮಂಜೂರಾತಿ ನಕ್ಷೆಗೆ ವಿರುದ್ಧವಾಗಿ / ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ಪ್ರಕರಣಗಳು ಕಂಡುಬಂದರೆ ಅಂತಹ ನಿರ್ಮಾಣಗಳನ್ನು ತಡೆಯುವಲ್ಲಿ ಹಾಗೂ ಅಂತಹ ನಿರ್ಮಾಣಗಳ ಅಂಕಿ ಅಂಶಗಳ ವಿವರಗಳನ್ನು ಕಾರ್ಯನಿರ್ವಾಹಕ ಅಭಿಯಂತರರುಗಳಿಗೆ ನೀಡಲು ವಿಫಲರಾಗುವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರುಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ರೀತಿಯ ಕಟ್ಟು ನಿಟ್ಟಿನ ಶಿಸ್ತುಕ್ರಮಗಳನ್ನು ಜರುಗಿಸಲಾಗುವುದು. "

PA / AS discuss

3902/16-17
24-10-16

21/10/16

ಸದರಿ ಉಲ್ಲೇಖ (2) ರ ಕಛೇರಿ ಆದೇಶ ಮುಂದುವರೆದಂತೆ ಕಟ್ಟಡ ನಿರ್ಮಾಣದ ಸುರಕ್ಷತೆ ಮತ್ತು ಗುಣಮಟ್ಟವನ್ನು ಮಾಲೀಕರು / ನಿರ್ಮಾಣದಾರರು ಕಾಪಾಡಿಕೊಂಡಿರುವ ಬಗ್ಗೆ ಖಾತರಿಪಡಿಸಿಕೊಳ್ಳಲು ಈ ಕೆಳಕಂಡ ಸೂಚನೆಗಳನ್ನು ನೀಡಲಾಗಿದೆ.

ಕಟ್ಟಡ ನಿರ್ಮಾಣದ ಮೇಲ್ವಿಚಾರಣೆಗೆ ಮಾಲೀಕರು / ನಿರ್ಮಾಣದಾರರಿಂದ ನಿಯೋಜನೆಗೊಳಪಡುವ ವಾಸ್ತುಶಿಲ್ಪಿ / ಇಂಜಿನಿಯರ್ ರವರು ಕಟ್ಟಡ ನಿರ್ಮಾಣವು ಮಂಜೂರಾದ ನಕ್ಷೆಯಂತೆ ಅಗತ್ಯ ಸುರಕ್ಷತಾ ಕ್ರಮಗಳನ್ನು ಪಾಲಿಸಿ, ಬೈಲಾಗಳನುಸಾರ ಕಟ್ಟಡ ನಿರ್ಮಾಣದ ಮೇಲ್ವಿಚಾರಣೆ ಕೈಗೊಳ್ಳಬೇಕಾಗಿರುತ್ತದೆ. ಕಟ್ಟಡ ನಿರ್ಮಾಣವು ಅನ್ವಯವಾಗುವ ಭಾರತೀಯ ಮಾನಕಗಳಿಗನುಸಾರ ಕೈಗೊಂಡಿರುವ ಬಗ್ಗೆ ಮತ್ತು ಕಟ್ಟಡದ ತಳಪಾಯವು IS:1904-1986 ಗೆ ಅನುಸಾರ ವಿನ್ಯಾಸಗೊಂಡು ನಿರ್ಮಾಣ ಕಾರ್ಯ ಕೈಗೊಂಡಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು ಕಟ್ಟಡದ ಮೇಲ್ವಿಚಾರಣೆಯಲ್ಲಿರುವ ವಾಸ್ತುಶಿಲ್ಪಿ / ಇಂಜಿನಿಯರ್ ರವರ ಜವಾಬ್ದಾರಿಯಾಗಿರುತ್ತದೆ. ಮುಂದುವರೆದು, ಕಟ್ಟಡ ನಿರ್ಮಾಣದ ಪ್ರಮುಖ ಹಂತಗಳಲ್ಲಿ ಪ್ರಗತಿ ವರದಿಯನ್ನು ಪಾಲಿಕೆಗೆ ಸಲ್ಲಿಸಿ, ಸೂಚನೆ ಪಡೆದ ನಂತರವೇ ಕಾಮಗಾರಿ ಮುಂದುವರೆಸಬೇಕಾಗಿರುತ್ತದೆ. ಉಲ್ಲಂಘನೆಗಳು / ವ್ಯತಿರಿಕ್ತ ನಿರ್ಮಾಣವನ್ನು ಪಾಲಿಕೆಯ ಗಮನಕ್ಕೆ ತರುವುದು ಕಟ್ಟಡ ಉಪವಿಧಿ Schedule – IV, ಉಪವಿಧಿ – ಜಿ, ಹೆಚ್ ಮತ್ತು ಐ ರಂತೆ ಕಟ್ಟಡದ ಮೇಲ್ವಿಚಾರಣೆಯಲ್ಲಿರುವ ನೊಂದಾಯಿತ ವಾಸ್ತುಶಿಲ್ಪಿ / ಇಂಜಿನಿಯರ್ / ಸ್ಟ್ರಕ್ಚರಲ್ ಇಂಜಿನಿಯರ್ ರವರುಗಳ ಜವಾಬ್ದಾರಿಯಾಗಿರುತ್ತದೆ.

ಮಾಲೀಕರು / ನಿರ್ಮಾಣದಾರರು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುವ ಬಗ್ಗೆ ಕಟ್ಟಡದ ನಿರ್ಮಾಣ ಹಂತದಲ್ಲಿ ಪರಿಶೀಲಿಸಿ ಖಾತರಿಪಡಿಸಿಕೊಳ್ಳಲು ಮತ್ತು ಸಂಬಂಧಿಸಿದ ದಾಖಲೆಗಳ ಪ್ರತಿಗಳನ್ನು ನಿರ್ವಹಿಸಲು ಎಲ್ಲಾ ಉಪವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಿಗೆ ಸೂಚಿಸಿದೆ.

<u>ಪ್ರಾಮುಖ್ಯ ಸೂಚನೆಗಳು</u>

1) ಕಟ್ಟಡ ನಿರ್ಮಾಣ ಸ್ಥಳದ ಮಣ್ಣಿನ Safe Bearing Capacity ಆಧಾರದ ಮೇಲೆ ತಳಪಾಯ ವಿನ್ಯಾಸ ಮಾಡಿರುವುದು.
2) ಕಟ್ಟಡದ ತಳಪಾಯಕ್ಕಾಗಿ / ತಳ ಮಹಡಿಗಳಿಗಾಗಿ ಮಣ್ಣು ಅಗೆಯುವಾಗ ಭೂ ಕುಸಿತ ತಡೆಯಲು ಅಗತ್ಯವಾಗಿ ಬೇಕಾದ Strutting and Shoring / Piles / Diaghpram Wall ಅಳವಡಿಸುವುದು. ಇತ್ಯಾದಿ ಅಗತ್ಯ ಇಂಜಿನಿಯರಿಂಗ್ ಕ್ರಮಗಳನ್ನು ಕೈಗೊಂಡಿರುವುದು.
3) ತಳ ಮಹಡಿ / ತಳ ಪಾಯಕ್ಕೆ ಮಣ್ಣು ಅಗೆಯುವಾಗ ಬರುವ ಅಂತರ್ಜಲ / ಮಳೆ ನೀರು ಶೇಖರಣೆಯಾಗದಂತೆ ತ್ವರಿತವಾಗಿ ಹೊರಹಾಕಲು ಪಂಪಿಂಗ್ ವ್ಯವಸ್ಥೆ ಅಳವಡಿಸಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
4) ತಳ ಮಹಡಿ / ತಳಪಾಯಕ್ಕೆ ಮಣ್ಣು ಅಗೆತದಿಂದಾಗಿ ಅಂಚಿನಲ್ಲಿ ಭೂಮಿ ಕುಸಿಯದಂತೆ ಹಾಗೂ ಅಕ್ಕಪಕ್ಕದ ಆಸ್ತಿ / ಕಟ್ಟಡಕ್ಕೆ ಹಾನಿಯಾಗದಂತೆ ಕನಿಷ್ಠ 2.00 ಮೀ. ಅಂತರ ಕಾಯ್ದಿರಿಸಕೊಳ್ಳತಕ್ಕದ್ದು. ಬಂಡೆ ಒಡೆಯಬೇಕಾದ ಸನ್ನಿವೇಶದಲ್ಲಿ ಸಂಬಂಧಿಸಿದವರಿಂದ ಅನುಮತಿ ಪಡೆದು ಸುತ್ತಲಿನ ಹಾಲಿ ಕಟ್ಟಡಗಳಿಗೆ ಹಾನಿಯಾಗದಂತಹ ಕಾರ್ಯವಿಧಾನ ಅಳವಡಿಸಿ ನಿರ್ಮಾಣ ಕೈಗೊಂಡಿರುವ ಬಗ್ಗೆ ಪರಿಶೀಲಿಸುವುದು.
5) ಕಟ್ಟಡ ನಿರ್ಮಾಣಕ್ಕೆ ಬಳಸುವ ಕಟ್ಟಡ ಸಾಮಾಗ್ರಿಗಳ ಪ್ರಯೋಗಾಲಯದ ನಿರ್ದಿಷ್ಟ ಪರೀಕ್ಷೆಗಳಿಗೆ ಒಳಪಡಿಸಿ ಗುಣಮಟ್ಟ ಕಾಯ್ದಿಕೊಂಡಿರುವ ಬಗ್ಗೆ ಪರಿಶೀಲಿಸುವುದು.
6) ಕಟ್ಟಡ ನಿರ್ಮಾಣದ ಪ್ರಮುಖ ಹಂತಗಳಲ್ಲಿ ನಿರ್ದಿಷ್ಟ ಬ್ಯಾಚ್‌ಗಳ ಕಾಂಕ್ರೀಟ್ ಮತ್ತು ಸ್ಟೀಲ್‌ನ ಸಾಮರ್ಥ್ಯವನ್ನು ಪ್ರಯೋಗಾಲಯದ ಪರೀಕ್ಷೆಗೊಳಪಡಿಸಿ ಸುರಕ್ಷತೆಯ ಮಿತಿಯಲ್ಲಿರುವ ಬಗ್ಗೆ ಖಾತರಿಪಡಿಸಿಕೊಂಡಿರುವ ಮಾದರಿಗಳನ್ನು ಪರಿಶೀಲಿಸುವುದು.
7) ಕಟ್ಟಡ ನಿರ್ಮಾಣದ ಗುಣಮಟ್ಟದ ಖಾತರಿಗಾಗಿ ಕೈಗೊಂಡ ಮೇಲ್ಕಂಡ ಎಲ್ಲಾ ಪರೀಕ್ಷೆಗಳ (Test Reports) ದಾಖಲೆಗಳು ಮತ್ತು ವರದಿಗಳನ್ನು ವಹಿಯಲ್ಲಿ ನಿರ್ವಹಿಸಿರುವ ಬಗ್ಗೆ ಪರಿಶೀಲಿಸುವುದು.
8) ಕಾರ್ಮಿಕರ ಭದ್ರತೆ, ಸುರಕ್ಷತೆ ಮತ್ತು ಸ್ವಚ್ಛ ವಾತಾವರಣದಲ್ಲಿ ಕಾರ್ಯ ನಿರ್ವಹಿಸಲು ಬೇಕಾದ ಎಲ್ಲಾ ಸೌಕರ್ಯಗಳನ್ನು ಕಲ್ಪಿಸಿರುವ ಬಗ್ಗೆ ಪರಿಶೀಲಿಸುವುದು.
9) ನಿಯಮಾನುಸಾರ ನಿರ್ದಿಷ್ಟ ಕಾಲಾವಧಿಯಲ್ಲಿ ಪಡೆಯಬೇಕಾದ ಪ್ರಾರಂಭಿಕ ಪ್ರಮಾಣಪತ್ರ, ಸ್ವಾಧೀನಾನುಭವ ಪ್ರಮಾಣಪತ್ರವನ್ನು ಹಾಗೂ ಇತರೇ ಇಲಾಖೆಗಳಿಂದ ಅಗತ್ಯವಾಗಿ ಪಡೆಯಬೇಕಾದ ನಿರಾಕ್ಷೇಪಣಾ ಪತ್ರ / ಸಮ್ಮತಿ ಪತ್ರ / ತೀರುವಳಿ ಪತ್ರಗಳ ನಿಬಂಧನೆಗಳನ್ನು ಪಾಲಿಸಿರುವ ಬಗ್ಗೆ ಪರಿಶೀಲಿಸುವುದು

(3)

ಈಗಾಗಲೇ ಉಲ್ಲೇಖ (2) ರ ಕಛೇರಿ ಆದೇಶದಲ್ಲಿ ನೀಡಲಾದ ಸೂಚನೆಗಳನ್ನು ಪಾಲಿಸಿರುವ ಬಗ್ಗೆ ಈವರೆವಿಗೂ ವರದಿಗಳು ಸ್ವೀಕೃತಗೊಂಡಿರುವುದಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿ ಸದರಿ ಕಛೇರಿ ಆದೇಶದಲ್ಲಿ ನೀಡಿರುವ ಸೂಚನೆಗಳನ್ನು ಪಾಲಿಸಲು ಆದೇಶಿಸಲಾಗಿದೆ. ಮುಂದುವರೆದು ವಾರಂತ್ಯಕ್ಕೆ ಮತ್ತು ಪಾಕ್ಷಿಕ ಸಲ್ಲಿಸಬೇಕಾದ ವರದಿಗಳನ್ನು ಈ ಕೆಳಕಂಡ ನಮೂನೆಯಲ್ಲಿ ಸಲ್ಲಿಸಲು ಸೂಚಿಸಿದೆ.

ನಮೂನೆ

ಉಪ – ವಿಭಾಗ (ಹೆಸರು) ____________

ಕ್ರಸಂ	ಕಟ್ಟಡ ಮಾಲೀಕರ / ನಿರ್ಮಾಣದಾರರ ಹೆಸರು & ವಿಳಾಸ	ಸ್ವತ್ತಿನ ವಿಳಾಸ	ವಾರ್ಡ್ ಸಂಖ್ಯೆ	ನಕ್ಷೆ ಮಂಜೂರಾತಿ ಸಂಖ್ಯೆ	ನಿರ್ಮಾಣ ಹಂತ	ಕೆ.ಎಂ.ಸಿ ಕಾಯ್ದೆ 321(1), (2) ರಂತೆ ಕ್ರಮವಹಿಸಿದ ವಿವರ	ಕೆ.ಎಂ.ಸಿ ಕಾಯ್ದೆ 321(3), ರಂತೆ ಕ್ರಮವಹಿಸಿದ ವಿವರ	ಕೆ.ಎಂ.ಸಿ ಕಾಯ್ದೆ 462 ರಂತೆ ಕ್ರಮವಹಿಸಿದ ವಿವರ	ಷರಾ
1	2	3	4	5	6	7	8	9	10
1.									

ಕಟ್ಟಡದ ಮಾಲೀಕರು / ನಿರ್ಮಾಣದಾರರು ಅನಧಿಕೃತವಾಗಿ ಅಥವಾ ಮಂಜೂರಾತಿ ನಕ್ಷೆಗೆ ವಿರುದ್ಧವಾಗಿ / ಕಟ್ಟಡ ಉಪವಿಧಿಗಳು / ಗುಣಮಟ್ಟ ಮತ್ತು ಸುರಕ್ಷತೆಗೆ ಸಂಬಂಧಿಸಿದ ಭಾರತೀಯ ಮಾನಕಗಳನ್ನು ಪಾಲಿಸದೇ ಕಟ್ಟಡ ನಿರ್ಮಾಣ ಕೈಗೊಂಡಿದ್ದಲ್ಲಿ ಕಾಲಕಾಲಕ್ಕೆ ಪರಿಶೀಲನೆ ಮಾಡಿ ನಿಯಮಾನುಸಾರ ಕ್ರಮಕೈಗೊಳ್ಳುವುದು ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರ ಜವಬ್ದಾರಿಯಾಗಿರುತ್ತದೆ. ಇಂತಹ ನಿರ್ಮಾಣಗಳ ವಿರುದ್ಧ ಕೆ.ಎಂ.ಸಿ ಕಾಯ್ದೆ 1976 ಅವಕಾಶಗಳಂತೆ ಕ್ರಮ ಕೈಗೊಂಡ ವಾರಾಂತ್ಯದ ಮತ್ತು ಪಾಕ್ಷಿಕ ವರದಿಯನ್ನು ಮೇಲ್ಕಂಡ ನಮೂನೆಯಲ್ಲಿ ಪ್ರಧಾನ ಅಭಿಯಂತರರು ರವರಿಗೆ ಸಲ್ಲಿಸುವುದು. ಈ ಸೂಚನೆಗಳನ್ನು ಪಾಲಿಸದೇ ಇರುವ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರ ವಿರುದ್ಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 76-FFF ಮತ್ತು ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ ಸೆಕ್ಷನ್ 321-B ರಡಿಯಲ್ಲಿ ಕರ್ತವ್ಯ ಲೋಪವನ್ನು ಪರಿಗಣಿಸಿ ಕಟ್ಟು ನಿಟ್ಟಿನ ಕಾನೂನು ಕ್ರಮ ಜರುಗಿಸಲಾಗುವುದು.

ಈ ಆದೇಶವನ್ನು ತಕ್ಷಣದಿಂದ ಜಾರಿಗೆ ತರಲಾಗಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು,

1. ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ಆಡಳಿತಗಾರರ ಆಪ್ತ ಶಾಖೆಗೆ ಕಳುಹಿಸಲಾಗಿದೆ.
2. ಮಾನ್ಯ ಉಪ ಮಹಾಪೌರರು ರವರ ಅವಗಾಹನೆಗೆ ತರಲು ಆಡಳಿತಗಾರರ ಆಪ್ತ ಶಾಖೆಗೆ ಕಳುಹಿಸಲಾಗಿದೆ.
3. ವಿಶೇಷ ಆಯುಕರು (ಯೋಜನೆಗಳು) ಇವರ ಮಾಹಿತಿಗಾಗಿ ಕಳುಹಿಸಿದೆ.
4. ಪ್ರಧಾನ ಅಭಿಯಂತರರು ಇವರ ಮಾಹಿತಿಗಾಗಿ ಕಳುಹಿಸಿದೆ.
5. ಎಲ್ಲಾ ವಲಯದ ಮುಖ್ಯ ಅಭಿಯಂತರರು ರವರ ಮಾಹಿತಿಗಾಗಿ ಕಳುಹಿಸಿದೆ.
6. ಅಪರ / ಜಂಟಿ ಆಯುಕರು (ಪಶ್ಚಿಮ / ದಕ್ಷಿಣ / ಪೂರ್ವ / ಯಲಹಂಕ / ದಾಸರಹಳ್ಳಿ / ಮಹದೇವಪುರ / ರಾಜರಾಜೇಶ್ವರಿನಗರ / ಬೊಮ್ಮನಹಳ್ಳಿ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7. ಹೆಚ್ಚುವರಿ ನಿರ್ದೇಶಕರು (ನಗರ ಯೋಜನೆ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ / ದಕ್ಷಿಣ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಉಪ ನಿರ್ದೇಶಕರು (ನಗರ ಯೋಜನೆ – ಉತ್ತರ / ದಕ್ಷಿಣ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಸಹಾಯಕ ನಿರ್ದೇಶಕರು (ಕೇಂದ್ರ ಕಛೇರಿ / ಪಶ್ಚಿನ / ದಕ್ಷಿಣ / ಪೂರ್ವ / ಯಲಹಂಕ / ದಾಸರಹಳ್ಳಿ / ಮಹದೇವಪುರ / ರಾಜರಾಜೇಶ್ವರಿನಗರ / ಬೊಮ್ಮನಹಳ್ಳಿ ವಲಯ) ರವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ವಲಯದ ಎಲ್ಲಾ ಕಾರ್ಯಪಾಲಕ ಅಭಿಯಂತರರು ರವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
12. ಎಲ್ಲಾ ಉಪ ವಿಭಾಗಗಳ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
13. ಸಲಹೆಗಾರರು (ಮಾಹಿತಿ ತಂತ್ರಜ್ಞಾನ) ರವರ ಮಾಹಿತಿಗಾಗಿ ಹಾಗೂ ಸದರಿ ಸುತ್ತೋಲೆಯನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಲು ಕ್ರಮ ಕೈಗೊಳ್ಳ ಸೂಚಿಸಲಾಗಿದೆ.
14. ಕಛೇರಿ ಪ್ರತಿ

(4)

A-14

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಆಯುಕ್ತರು/ಪಿ.ಎ.ಸಿ ಆರ್/ಜಿ/5235/2015-16

ಆಯುಕ್ತರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು, ದಿನಾಂಕ: 07-08-2015

ಸುತ್ತೋಲೆ

ವಿಷಯ:- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತ/ಕಾನೂನು ಬಾಹಿರ ಕಟ್ಟಡಗಳ ನಿರ್ಮಾಣ ತಡೆಯುವ ಬಗ್ಗೆ.

ಉಲ್ಲೇಖ:- 1. ಆಯುಕ್ತರ ಸುತ್ತೋಲೆ ಸಂಖ್ಯೆ:ಬಿ12(6)ಪಿಆರ್/ 56 /2010-11 ದಿನಾಂಕ:07/07/2010.
2. ಆಯುಕ್ತರ ಕಛೇರಿ ಆದೇಶ ಸಂಖ್ಯೆ:ಬಿ12(1)ಪಿಆರ್/223/2010-11 ದಿನಾಂಕ:29/06/2015
3. ರಿಟ್ ಮೇಲ್ಮನವಿ ಸಂಖ್ಯೆ:1800/2008ರ ತೀರ್ಪು ದಿನಾಂಕ:01/12/2008.

* * * * *

1. ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತ ಹಾಗೂ ಕಟ್ಟಡ ಉಪವಿಧಿ ಹಾಗೂ ನಕ್ಷೆ ಮಂಜೂರಾತಿ ಉಲ್ಲಂಘಿಸಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ಮಾಲೀಕರ ವಿರುದ್ಧ ಕೆಎಂಸಿ ಕಾಯ್ದೆ ಕಲಂ 321 (1) (2) ಮತ್ತು (3)ರಡಿಯಲ್ಲಿ ಕ್ರಮ ಜರುಗಿಸುತ್ತಿರುವುದು ಸರಿಯಷ್ಟೆ. ಮುಂದುವರೆದು ಸದರಿ ಕ್ರಮದ ವಿರುದ್ಧ ಕಟ್ಟಡಗಳ ಮಾಲೀಕರು ಮಾನ್ಯ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸಿ ತಡೆಯಾಜ್ಞೆ ಪಡೆದು ಕಟ್ಟಡ ನಿರ್ಮಾಣ ಮುಂದುವರೆಸುತ್ತಿರುವುದು ಗಮನಾರ್ಹ ಸಂಗತಿಯಾಗಿರುತ್ತದೆ.

2. ಪಾಲಿಕೆಯು ಅನಧಿಕೃತ ಹಾಗೂ ನಕ್ಷೆ ಮಂಜೂರಾತಿ ಉಲ್ಲಂಘಿಸಿದ ಕಟ್ಟಡಗಳ ವಿರುದ್ಧ ಸಕಾಲದಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸಲು ಹಾಗೂ ಅನಧಿಕೃತ ಕಟ್ಟಡ ನಿರ್ಮಾಣಗಳನ್ನು ತಡೆಯುವ/ನಿಯಂತ್ರಿಸುವ ನಿಟ್ಟಿನಲ್ಲಿ ಹಲವಾರು ಸುತ್ತೋಲೆಗಳು ಹಾಗೂ ಕಛೇರಿ ಆದೇಶಗಳನ್ನು ಉಲ್ಲೇಖ (1) ಮತ್ತು (2)ರಂತೆ ಹೊರಡಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆ. ಅಲ್ಲದೆ ನ್ಯಾಯಾಲಯ ಪ್ರಕರಣಗಳಲ್ಲಿ ಕೂಡಲೇ ಕಂಡಿಕೆವಾರು ಉತ್ತರ ಹಾಗೂ ದಾಖಲೆಗಳನ್ನು ಸಲ್ಲಿಸಿ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ಕ್ರಮವಹಿಸಲು ತಿಳಿಸಲಾಗಿರುತ್ತದೆ.

3. ಪಾಲಿಕೆಯು ಎಲ್ಲಾ ರೀತಿಯಲ್ಲಿಯೂ ಕ್ರಮ ಜರುಗಿಸುತ್ತಿರುವಾಗಲೂ ಕೂಡ ಅನಧಿಕೃತ/ನಕ್ಷೆ ಮಂಜೂರಾತಿ ಉಲ್ಲಂಘನೆ ಕಟ್ಟಡಗಳ ನಿರ್ಮಾಣವನ್ನು ನಿಯಂತ್ರಿಸಲು ಪರಿಣಾಮಕಾರಿಯಾಗಿ ಕ್ರಮಕೈಗೊಳ್ಳಲು ಸಾಧ್ಯವಾಗುತ್ತಿಲ್ಲ.

4. ಈ ಹಿನ್ನೆಲೆಯಲ್ಲಿ ಕೆಳಕಂಡ ಮೂರು ಕ್ರಮಗಳನ್ನು ಇಂತಹ ಎಲ್ಲಾ ಪ್ರಕರಣಗಳಲ್ಲಿ ತೆಗೆದುಕೊಳ್ಳಲು ಉಪ ವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರುಗಳಿಗೆ ಸೂಚಿಸಿದೆ. ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಟ್ಟಡಗಳ ತಳಪಾಯ ತೋಡುವ ಹಂತದಿಂದಲೂ ಕಟ್ಟಡಗಳ ನಿರ್ಮಾಣದ ಬಗ್ಗೆ ಗಮನಹರಿಸಿ ಕಾಲಕಾಲಕ್ಕೆ ಕಟ್ಟಡದ ಹಂತಗಳ ಬಗ್ಗೆ ಕಛೇರಿ ಕಡತದಲ್ಲಿ ನಮೂದಿಸತಕ್ಕದ್ದು.

ಕ್ರಮ 1 : ಒಂದು ವೇಳೆ ಕಟ್ಟಡ ನಕ್ಷೆ ಮಂಜೂರಾತಿ ಉಲ್ಲಂಘಿಸಿರುವುದು ಕಂಡುಬಂದ ತಕ್ಷಣವೇ ತ್ವರಿತವಾಗಿ ಕೆಎಂಸಿ ಕಾಯ್ದೆ ಕಲಂ 321(1) (2) ಮತ್ತು (3) ಅನುಸಾರ ಕ್ರಮ ಜರುಗಿಸುವುದು. ಈ ಸಂಬಂಧ ಅನುಸರಿಸಬೇಕಾದ ಕಾರ್ಯವಿಧಾನವನ್ನು ಅನುಬಂಧ-1ರಲ್ಲಿ ತಿಳಿಸಿದೆ. ಕಲಂ 321(1)(2)(3)ರಡಿ ನೀಡಬೇಕಾದ ನೋಟೀಸುಗಳ ನಮೂನೆಗಳನ್ನು ಅನುಬಂಧ-2 ರಿಂದ 4ರಲ್ಲಿ ಲಗತ್ತಿಸಿದೆ.

ಸದರಿ ನೋಟೀಸ್‌ಗಳನ್ನು ನಿರ್ಮಾಣದ ಮೇಲೆ ಅಂಟಿಸಿ ಜಾರಿ ಮಾಡುವುದು. ಅದರಲ್ಲಿ ಸದರಿ ನಿರ್ಮಾಣದಲ್ಲಿ ಮಂಜೂರಾತಿ ನಕ್ಷೆ ಉಲ್ಲಂಘಿಸಲಾಗಿದೆ ಹಾಗೂ ಈ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕೆ.ಎಂ.ಸಿ. ಕಾಯ್ದೆ ಕಲಂ ಕಲಂ 321ರ ಪ್ರಕಾರ ಕ್ರಮ ಜರುಗಿಸಲಾಗಿದೆಯೆಂದು ತಿಳಿಸುವುದು.

ಕ್ರಮ 2: ಅಂತಹ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಹಾಗೂ ನೀರು ಮತ್ತು ಒಳಚರಂಡಿ ತಾತ್ಕಾಲಿಕ ಸಂಪರ್ಕಗಳನ್ನು ಕಡಿತಗೊಳಿಸುವಂತೆ/ಶಾಶ್ವತ ಸಂಪರ್ಕ ನೀಡದಂತೆ ಸಂಬಂಧಪಟ್ಟ ಪ್ರಾಧಿಕಾರಗಳಾದ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಹಾಗೂ ಬೆಂಗಳೂರು ನೀರು ಹಾಗೂ ಒಳಚರಂಡಿ ಮಂಡಳಿಗೆ ಪತ್ರ ಬರೆಯತಕ್ಕದ್ದು.

ನಕ್ಷೆ ಮಂಜೂರಾತಿಯನ್ನು ಉಲ್ಲಂಘಿಸಿ/ಅನಧಿಕೃತವಾಗಿ ನಿರ್ಮಿಸಲ್ಪಟ್ಟ ಕಟ್ಟಡಗಳಿಗೆ ಈಗಾಗಲೇ ವಿದ್ಯುತ್ ಸಂಪರ್ಕ ಹಾಗೂ ನೀರು ಮತ್ತು ಒಳಚರಂಡಿ ಸಂಪರ್ಕವನ್ನು ಒದಗಿಸಲು ಕಡ್ಡಾಯವಾಗಿ ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯತಕ್ಕದ್ದು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯವು ರಿಟ್‌ಅರ್ಜಿ ಸಂಖ್ಯೆ:11578/2008ರ ಆದೇಶದಲ್ಲಿ ಉಲ್ಲೇಖಿಸಿದ ಅಂಶಗಳನ್ನು ಎತ್ತಿಹಿಡಿಯುತ್ತಾ ಮತ್ತು ರಿಟ್ ಮೇಲ್ಮನವಿ ಸಂಖ್ಯೆ:1800/2008ರ ಪ್ರಕರಣಗಳಲ್ಲಿ "In the circumstances, this Court is of the opinion, till the case is decided by the Karnataka Appellate Tribunal and till the occupancy certificate is obtained by the 2nd Respondent, the respondent No.3 and 4 shall not provide water and electicity to the 2nd respondent. On production of occupancy certificate by the 2nd respondent, 3rd and 4th respondent shall provide electricity and water connextion to the premises of the 2nd respondent. With the above observation, the writ petition is disposed of." ಎಂದು ಆದೇಶಿಸಲಾಗಿರುತ್ತದೆ. ಆದುದರಿಂದ ಕಡ್ಡಾಯವಾಗಿ ಸ್ವಾಧೀನಾನುಭವ ಪ್ರಮಾಣಪತ್ರವಿಲ್ಲದೆ ರಸ್ತೆ ಅಗೆತಕ್ಕೆ/ಮೂಲಭೂತ ಸೌಕರ್ಯ ಒದಗಿಸಬಾರದೆಂದು ಆದೇಶಿಸಿದೆ. ಅವರಿಗೆ ಬರೆಯಬೇಕಾದ ಪತ್ರಗಳ ನಮೂನೆ ಅನುಬಂಧ-5ರಲ್ಲಿ ನೀಡಿದೆ.

ಕ್ರಮ 3 : ಅನಧಿಕೃತ ಕಟ್ಟಡ ಹಾಗೂ ನಕ್ಷೆ ಮಂಜೂರಾತಿ ಉಲ್ಲಂಘನೆಯಾಗಿರುವ ಕಟ್ಟಡಗಳ ನಕ್ಷೆ ವಿನ್ಯಾಸಗಾರರು, ಅಭಿಯಂತರರು ಹಾಗೂ ಮೇಲ್ವಿಚಾರಕರ ವಿರುದ್ಧ ಅನುಬಂಧ-IV – ಬಿ.ಬಿ.ಎಂ.ಪಿ. ಕಟ್ಟಡಗಳ ಉಪವಿಧಿಗಳು 2003ರ ಉಪವಿಧಿ 8(i)ರ ಪ್ರಕಾರ ಮಂಜೂರಾತಿ ನಕ್ಷೆ ಉಲ್ಲಂಘಿಸಿ ನಿರ್ಮಾಣ ಮಾಡದಿರಲು ಅವರೂ ಜವಾಬ್ದಾರರಾಗಿರುತ್ತಾರೆ. ಆದ್ದರಿಂದ ಕಟ್ಟಡದ ವಿನ್ಯಾಸಗಾರರಿಗೆ, ಅಭಿಯಂತರರಿಗೆ ಹಾಗೂ ಮೇಲ್ವಿಚಾರಕರಿಗೆ ಉಪವಿಧಿ 7.1ರಡಿ ಪ್ರಥಮವಾಗಿ ತಿಳುವಳಿಕೆ ನೋಟೀಸು (ನಮೂನೆ ಅನುಬಂಧ-6ರಂತೆ) ನೀಡುವುದು. ಎರಡನೆಯದಾಗಿ ಅವರುಗಳಿಗೆ ಎಚ್ಚರಿಕೆ ನೀಡುವುದು (ನಮೂನೆ ಅನುಬಂಧ-7ರಲ್ಲಿದ್ದಂತೆ) ಹಾಗೂ ಮೂರನೆಯದಾಗಿ ಅವರ ನೋಂದಣಿಯನ್ನು ರದ್ದುಪಡಿಸಲು ಕ್ರಮಕೈಗೊಳ್ಳತಕ್ಕದ್ದು (ನಮೂನೆ ಅನುಬಂಧ-8ರಲ್ಲಿದ್ದಂತೆ).

5. ಮೇಲಿನಂತೆ 3 ಕ್ರಮಗಳನ್ನು ಜರುಗಿಸಲು ಎಲ್ಲಾ ವಾರ್ಡ್‌ಗಳ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಿಗೆ ಸೂಚಿಸಿದೆ. ಮೇಲಿನಂತೆ ಕ್ರಮ ಜರುಗಿಸಿರುವುದನ್ನು ಸಂಬಂಧಪಟ್ಟ ಎಲ್ಲಾ ಮೇಲಾಧಿಕಾರಿಗಳು ಮೇಲ್ವಿಚಾರಣೆ ಮಾಡುವುದು.

ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು: ಮಾನ್ಯ ಆಡಳಿತಗಾರರ ಅವಗಾಹನೆಗೆ ಸಲ್ಲಿಸಿದೆ.
: ವಿಶೇಷ ಆಯುಕ್ತರು (ಯೋಜನೆ)/ಅಪರ ಆಯುಕ್ತರು (ಆಡಳಿತ)ರವರಿಗೆ ಕಳುಹಿಸಿದೆ.
: ಅಪರ/ಜಂಟಿ ಆಯುಕ್ತರು (ಪಶ್ಚಿಮ/ದಕ್ಷಿಣ/ಪೂರ್ವ/ಯಲಹಂಕ/ದಾಸರಹಳ್ಳಿ/ಮಹದೇವಪುರ/ರಾಜರಾಜೇಶ್ವರಿನಗರ/ಬೊಮ್ಮನಹಳ್ಳಿ ವಲಯ) ರವರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
: ಪ್ರಧಾನ ಅಭಿಯಂತರರು ಹಾಗೂ ಎಲ್ಲಾ ವಲಯದ ಮುಖ್ಯ ಅಭಿಯಂತರರಿಗೆ ಕಳುಹಿಸುತ್ತಾ ಅಧೀನ ಕಾರ್ಯಪಾಲಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು/ಸಹಾಯಕ/ಕಿರಿಯ ಅಭಿಯಂತರರಿಗೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಕ್ರಮವಹಿಸುವುದು.
: ಉಪ ಆಯುಕ್ತರು (ಕಂದಾಯ) ರವರ ಮಾಹಿತಿಗಾಗಿ ಸಲ್ಲಿಸಿದೆ.
: ಪಾಲಿಕೆಯ ಎಲ್ಲಾ ವಕೀಲರಿಗೆ, ಕಳುಹಿಸುತ್ತಾ ಪ್ರಕರಣಗಳಲ್ಲಿ ಕೂಡಲೇ ಸುತ್ತೋಲೆಯ ವಿಷಯದಲ್ಲಿ ಕ್ರಮಕೈಗೊಳ್ಳಲು ತಿಳಿಸಲಾಗಿದೆ.
: ಕಾನೂನು ಕೋಶದ ಮುಖ್ಯಸ್ಥರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
: ಕಛೇರಿ ಪ್ರತಿ.

(5)

ಅನುಬಂಧ-01

<u>ಕೆಎಂಸಿ ಕಾಯ್ದೆ ಕಲಂ 321ರ ಅಡಿಯಲ್ಲಿ ಕ್ರಮಕೈಗೊಳ್ಳಲು ಅನುಸರಿಸಬೇಕಾದ ಅವಶ್ಯಕ ಕಾರ್ಯವಿಧಾನ</u>

1. ಸಂಬಂಧಪಟ್ಟ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಕೆಎಂಸಿ ಕಾಯ್ದೆಯಂತೆ ಆಯುಕ್ತರಲ್ಲಿ ನಿಹಿತವಾದ ಅಧಿಕಾರವನ್ನು ಕಲಂ 66 ಮತ್ತು 67ರಡಿಯಲ್ಲಿ ಅಧಿಕಾರ ಪ್ರತ್ಯಾಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವುದಾಗಿ ಕಛೇರಿ ಟಿಪ್ಪಣಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸತಕ್ಕದ್ದು. (ಕಟ್ಟಡ ಮಂಜೂರಾತಿ ನಕ್ಷೆಯು ಕಛೇರಿ ಕಡತದಲ್ಲಿದ್ದಲ್ಲಿ ಪರಿಶೀಲಿಸುವುದು ಇಲ್ಲವಾದಲ್ಲಿ ಕೆಎಂಸಿ ಕಾಯ್ದೆ ಕಲಂ 308ರಡಿ ನೋಟೀಸು ನೀಡಿ ಕಟ್ಟಡ ಮಾಲೀಕರಿಂದ ದಾಖಲೆಗಳು ಹಾಗೂ ನಕ್ಷೆ ಮಂಜೂರಾತಿ ಪ್ರತಿಯನ್ನು ಪಡೆಯತಕ್ಕದ್ದು.)
   ಸ್ವತ್ತಿನ ಮಾಲೀಕರು ಕಟ್ಟಡ ಕಾಮಗಾರಿ ಪ್ರಾರಂಭಿಸಿ ತಳಪಾಯ/ಕಂಬ ಅಥವಾ ಗೋಡೆಯ ಫುಟಿಂಗ್ ಹಾಕಿದ ಹಂತದಲ್ಲಿ ಕಟ್ಟಡ ಉಪವಿಧಿ ಷೆಡ್ಯೂಲ್ 6ರ ನಮೂನೆಯಲ್ಲಿ ಸಂಬಂದಪಟ್ಟ ಕಾಮಗಾರಿ ಕಛೇರಿಗೆ ಮಾಹಿತಿ ನೀಡತಕ್ಕದ್ದು.
2. ಕಟ್ಟಡ ನಕ್ಷೆ ಪರವಾನಿಗೆಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು (-----) ಉಪ ವಿಭಾಗ/ಸಹಾಯಕ ನಿರ್ದೇಶಕರು/ಜಂಟಿ ನಿರ್ದೇಶಕರು/ಅಪರ ನಿರ್ದೇಶಕರು ನಗರ ಯೋಜನೆ (---) ವಲಯ ಎಲ್‌ಪಿ ಸಂಖ್ಯೆ:--------- ದಿನಾಂಕ:------ ರಂತೆ ----- ವಲಯದ---ವಾರ್ಡ್‌ನ ಸ್ವತ್ತಿನ ಸಂಖ್ಯೆ:----- ರಲ್ಲಿ ------- ಮಹಡಿಗಳ ವಾಸದ/ವಾಣಿಜ್ಯ ಕಟ್ಟಡ ನಿರ್ಮಿಸಲು ಮಂಜೂರಾತಿ ನಕ್ಷೆ ಪಡೆದಿರುವುದನ್ನು ಪರಿಶೀಲಿಸಿರುವ ಬಗ್ಗೆ ಕಛೇರಿ ಕಡತದ ಟಿಪ್ಪಣಿಯಲ್ಲಿ ನಮೂದಿಸತಕ್ಕದ್ದು.
   ಕಟ್ಟಡ ಮಾಲೀಕರು ನೀಡಿದ ಮಾಹಿತಿ ಆಧಾರ ಅಥವಾ ದೂರಿನ ಮೇಲೆ ಅಥವಾ ಸ್ವಯಂ ಪ್ರೇರಣೆಯಿಂದ ಸ್ವತ್ತಿನ ಪರಿಶೀಲನೆ ಮಾಡಿದ ದಿನಾಂಕ ----- ಸಮಯ ---- ನಮೂದಿಸತಕ್ಕದ್ದು. ಕಟ್ಟಡದ ತಳಪಾಯ ಪರಿಶೀಲಿಸಿ, ಮಣ್ಣಿನ ಮಾದರಿಯನುಸಾರ ತಳಪಾಯ/ಫುಟಿಂಗ್ ಹಾಕಿರುವುದನ್ನು ಹಾಗೂ ಸೆಟ್‌ಬ್ಯಾಕ್ ಬಿಟ್ಟಿರುವುದನ್ನು ಪರಿಶೀಸಿಲಿಸಿದ ನಂತರ ನಿಯಮಾನುಸಾರ ಕ್ರಮಬದ್ಧವಾಗಿದ್ದಲ್ಲಿ ಪ್ರಾರಂಭಿಕ ಪ್ರಮಾಣ ಪತ್ರ ನೀಡತಕ್ಕದ್ದು.
3. ಕಟ್ಟಡದ ಹಂತಗಳ ನಿರ್ಮಾಣವನ್ನು ಪರಿಶೀಲಿಸಿ ಕಡತದ ಟಿಪ್ಪಣಿಯಲ್ಲಿ ದಿನ ದಿನಾಂಕ ಮತ್ತು ಕಟ್ಟಡದ ಹಂತವನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಒಂದು ವೇಳೆ <u>ಪರಿಶೀಲನಾ ಸಮಯದಲ್ಲಿ ಮಂಜೂರಾತಿ ನಕ್ಷೆ ಉಲ್ಲಂಘನೆ ಕಂಡುಬಂದಲ್ಲಿ ವರದಿಯೊಂದಿಗೆ ಛಾಯಚಿತ್ರಗಳನ್ನು ಪಡೆಯುವುದು ಹಾಗೂ ಉಲ್ಲಂಘನೆ ಭಾಗವನ್ನು ಸರಿಪಡಿಸಿ ನಕ್ಷೆ ಮಂಜೂರಾತಿಯಂತೆ ಕಟ್ಟಡ ನಿರ್ಮಾಣ ಮಾಡಲು ಸೂಚಿಸುವುದು.</u>
4. ನಕ್ಷೆ ಮಂಜೂರಾತಿ ಉಲ್ಲಂಘನೆಯನ್ನು ಸರಿಪಡಿಸಿಕೊಳ್ಳದಿದ್ದಲ್ಲಿ ಕಟ್ಟಡವನ್ನು ಪರಿಶೀಲಿಸಿ ಕಟ್ಟಡದ ವ್ಯತಿರಿಕ್ತ ಭಾಗಗಳ ವಿವರಗಳುಳ್ಳ ಪಟ್ಟಿಯೊಂದಿಗೆ ಪರಿಶೀಲನಾ ವರದಿ ತಯಾರಿಸಿ ಮಹಜರ್ ಮಾಡುವುದು.
5. ಕ್ರಮ ಸಂಖ್ಯೆ 4ರಂತೆ ಕ್ರಮಕೈಗೊಂಡಿರುವ ಬಗ್ಗೆ ಸಂಪೂರ್ಣ ವರದಿಯನ್ನು ಕಛೇರಿಯಲ್ಲಿ ನಿರ್ವಹಿಸಿದ ಕಡತದಲ್ಲಿ ಸದರಿ ಉಲ್ಲಂಘನೆಯ ಬಗ್ಗೆ ಸ್ಪಷ್ಟವಾಗಿ ವಿವರಿಸಿ ಕೆಎಂಸಿ ಕಾಯ್ದೆ ಕಲಂ 321(1)ರಡಿ ತಾತ್ಕಾಲಿಕ ಆದೇಶವನ್ನು ಅನುಬಂಧ-2ರ ನಮೂನೆಯಂತೆ ಹೊರಡಿಸತಕ್ಕದ್ದು. ಸದರಿ ಆದೇಶದ ಪ್ರತಿಯನ್ನು ಪ್ರತ್ಯೇಕವಾಗಿ ಕೆಎಂಸಿ ಕಾಯ್ದೆ ಕಲಂ 321(2)ರೊಂದಿಗೆ ಅಂದರೆ ಕಲಂ (1)ರ ತಾತ್ಕಾಲಿಕ ಆದೇಶ ಹಾಗೂ ಕಲಂ 321(2)ರ ನೋಟೀಸು ಇವೆರಡನ್ನು ಒಟ್ಟಿಗೆ ಕಟ್ಟಡ ಮಾಲೀಕರಿಗೆ ಜಾರಿ ಮಾಡತಕ್ಕದ್ದು. (ಕೆಎಂಸಿ ಕಾಯ್ದೆ ಕಲಂ 321(1), (2) ಹಾಗೂ (3)ರ ನಮೂನೆಗಳನ್ನು ಲಗತ್ತಿಸಿದೆ)

ಆಯುಕ್ತರು
ಬೆಂಗಳೂರು ಮಹಾನಗರ ಪಾಲಿಕೆ

ಅನುಬಂಧ-2

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ/ಕಾರ್ಯಪಾಲಕ

ಸಂಖ್ಯೆ:

ಅಭಿಯಂತರರ ಕಛೇರಿ ---------

ದಿನಾಂಕ: ----------------

<u>ಕರ್ನಾಟಕ ಮುನ್ಸಿಪಾಲ್ ಕಾರ್ಪೋರೇಶನ್ ಕಾಯ್ದೆ 1976 ರ ಕಲಂ 321(1) ರ ಪ್ರಕಾರ ಹೊರಡಿಸಿರುವ ತಾತ್ಕಾಲಿಕ ಆದೇಶ</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ -------- ವಲಯದ ವಾರ್ಡ್ ಸಂಖ್ಯೆ:----------------- ಶ್ರೀ---- -------- ಆದ ತಾವು ತಮ್ಮ ನಿವೇಶನದಲ್ಲಿ ವಾಸದ ಕಟ್ಟಡ ನಿರ್ಮಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನೆ ವಿಭಾಗ ---------------/ಸಹಾಯಕ ಕಾರ್ಯಪಾಲಕ ಅಭಿಯಂತರರು. ---------- ಉಪವಿಭಾಗರವರಿಂದ ಎಲ್.ಪಿ. ಸಂಖ್ಯೆ:---------- ದಿನಾಂಕ----------ರಂದು ಮಹಡಿ + ---------- ಮಹಡಿಗೆ ವಸತಿ/ವಾಣಿಜ್ಯ/ಭಾಗಶಃ ವಾಣಿಜ್ಯ ಉದ್ದೇಶಕ್ಕಾಗಿ ನಕ್ಷೆ ಮಂಜೂರಾತಿ ಪಡೆದಿರುತ್ತೀರಿ.

ಸಹಾಯಕ ಅಭಿಯಂತರ ವರದಿ ಹಾಗೂ ನಿಮ್ಮ/ನಿಮ್ಮ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ನಡೆಸಿದ ಸ್ಥಳ ಪರಿಶೀಲನೆ ವರದಿ ಹಾಗೂ ಮಹಜರ್ ನಕ್ಷೆ ಪ್ರಕಾರ ಸ್ವತ್ತಿನ ಸಂಖ್ಯೆ:--------------------ಇಲ್ಲಿ ತಾವು ನಿರ್ಮಿಸುತ್ತಿರುವ/ನಿರ್ಮಿಸಿರುವ ಕಟ್ಟಡವು ಮಂಜೂರಾದ ನಕ್ಷೆಗೆ ವ್ಯತಿರಿಕ್ತವಾಗಿ ಕರ್ನಾಟಕ ಮುನ್ಸಿಪಾಲ್ ಕಾರ್ಪೋರೇಶನ್ ಕಾಯ್ದೆ 1976 ರ ನಿಯಮ ಮತ್ತು ಬೈಲಾಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡುತ್ತಿರುವುದು ನಮಗೆ ಮನಃ ಪೂರ್ತಿಯಾಗಿ ದೃಢಪಟ್ಟಿರುತ್ತದೆ. ಹಾಗೂ ಮಂಜೂರಾತಿ ನಕ್ಷೆಗೆ ಸಂಬಂಧಿಸಿದಂತೆ ಕಟ್ಟಡ ನಿರ್ಮಾಣದಲ್ಲಿ ಕೆಳಗಿನ ವ್ಯತ್ಯಾಸಗಳು ಕಂಡುಬಂದಿರುತ್ತವೆ.

<u>ಮಂಜೂರಾತಿ ನಕ್ಷೆಯೊಂದಿಗೆ ಕಟ್ಟಡದ ವಾಸ್ತವ ಅಳತೆಗಳ ವ್ಯತ್ಯಾಸದ ವಿವರ</u>

ವಿವರಗಳು	ಮಂಜೂರಾತಿ ನಕ್ಷೆ ಪ್ರಕಾರ (ಮೀ.ಗಳಲ್ಲಿ)	ಕಟ್ಟಡದ ವಾಸ್ತವ ಅಳತೆ (ಮೀ.ಗಳಲ್ಲಿ)	ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿರುವ ನಿರ್ಮಾಣ	ಶೇಕಡಾವಾರು ವ್ಯತಿರಿಕ್ತ ನಿರ್ಮಾಣ	ಷರಾ
<u>ನಡುಜಾಗ</u> 1) ಬಲಭಾಗ 2) ಎಡಭಾಗ 3) ಮುಂಭಾಗ 4) ಹಿಂಭಾಗ					
ನೆಲ ವಿಸ್ತೀರ್ಣ ಅನುಪಾತ (FAR)					
ಆವರಿಸುವಿಕೆ (Coverage)					
ಕಟ್ಟಡದ ಎತ್ತರ					

(ಮಂಜೂರಾತಿ ನಕ್ಷೆಗೆ ವ್ಯತಿರಿಕ್ತ ಭಾಗಗಳನ್ನು ತೋರಿಸುವ ನಕ್ಷೆಯನ್ನು ಲಗತ್ತಿಸುವುದು)

ಇದರಿಂದ, ಕಟ್ಟಡದ ಮಾಲೀಕರು ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುತ್ತಾರೆ ಮತ್ತು ಕರ್ನಾಟಕ [illegible] 1976ರ ಅಡಿಯಲಿ ರಚಿತವಾಗಿರುವ ನಿಯಾಮಾವಳಿಗಳನ್ನು ಉಲ್ಲಂಘಿಸಿರುವುದರಿಂದ,

ಅನುಬಂಧ-3

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:

ಸಹಾಯಕ ಕಾರ್ಯನಿರ್ವಾಹಕ/ಕಾರ್ಯಪಾಲಕ
ಅಭಿಯಂತರರ ಕಛೇರಿ ----------
ದಿನಾಂಕ: ----------------

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ರ ಕಲಂ 321(2)ರ ಪ್ರಕಾರ ಹೊರಡಿಸಿದ ಕಾರಣ ಕೇಳುವ ನೋಟೀಸ್

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ------ ವಲಯದ ವಾರ್ಡ್ ಸಂಖ್ಯೆ: ---- ಸ್ವತ್ತಿನ/ಪಿ.ಐ.ಡಿ ಸಂಖ್ಯೆ: - --------------- ಬೆಂಗಳೂರು, ಇಲ್ಲಿ ಸ್ವತ್ತಿನಲ್ಲಿ ಕಟ್ಟಡ ನಿರ್ಮಿಸಲು ಪಾಲಿಕೆಯಿಂದ ಕಟ್ಟಡ ನಕ್ಷೆ ಮಂಜೂರಾತಿಯನ್ನು ಸುವರ್ಣ ಪರವಾನಿಗೆ/ವಸತಿ/ವಾಣಿಜ್ಯ/ಭಾಗಶಃ ವಾಣಿಜ್ಯ/ವಸತಿ ಕಟ್ಟಡ ನಿರ್ಮಿಸಲು --------- ವಲಯ ನಗರ ಯೋಜನೆ ಕಛೇರಿ ಸಂಖ್ಯೆ: ----------------------------, ದಿನಾಂಕ: ----------ರಂತೆ ------ ಮಹಡಿಯ ವಸತಿ/ವಾಣಿಜ್ಯ ಉದ್ದೇಶಕ್ಕಾಗಿ ನಕ್ಷೆ ಮಂಜೂರಾತಿ ಪಡೆದು ಕಟ್ಟಡ ನಿರ್ಮಿಸುತ್ತಿರುತ್ತೀರಿ.

ಮೇಲ್ಕಂಡಂತೆ ಕಟ್ಟಡ ನಕ್ಷೆ ಮಂಜೂರಾತಿ ಪಡೆದು ತಾವು ಸ್ವತ್ತಿನಲ್ಲಿ ಮಂಜೂರಾತಿ ನಕ್ಷೆ ಹಾಗೂ ಪಾಲಿಕೆಯ ಕಟ್ಟಡ ಉಪವಿಧಿಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿರುವುದು ಈ ಕಛೇರಿಯಿಂದ ದಿನಾಂಕ:--------- ರಂದು ನಡೆಸಿದ ಸ್ಥಳ ಪರಿಶೀಲನೆ ಮತ್ತು ಕಟ್ಟಡದ ಅಳತೆಯಿಂದ ದೃಢಪಟ್ಟಂತೆ ಈ ಕಛೇರಿಯ ತಾತ್ಕಾಲಿಕ ಆದೇಶ ಸಂಖ್ಯೆ:---------- ದಿನಾಂಕ:------ ರಂದು ಹೊರಡಿಸಲಾಗಿದೆ. ಹಾಗೂ ಸದರಿ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಈ ಆದೇಶಕ್ಕನುಗುಣವಾಗಿ ನೀವು ಸದರಿ ಕಟ್ಟಡ ನಿರ್ಮಾಣದ ನಕ್ಷೆ ಉಲ್ಲಂಘಿಸಿ ನಿರ್ಮಿಸಿದ ಭಾಗಗಳನ್ನು ಹೊಡೆದು ಬಾಕಿ ಮಂಜೂರಾತಿ ನಕ್ಷೆಯಂತೆ ಸರಿಪಡಿಸಿ ವರದಿ ಮಾಡುವ ತನಕ ಮಂಜೂರಾತಿ ನಕ್ಷೆಯ ಹಾಗೂ ಕಟ್ಟಡ ಉಪವಿಧಿಗೆ ವಿರುದ್ಧವಾಗಿ ನಿರ್ಮಿಸುತ್ತಿರುವ ಕಟ್ಟಡದ ಕೆಲಸವನ್ನು ಈ ಆದೇಶ ಜಾರಿಯಾದ ತಕ್ಷಣವೇ ಸ್ಥಗಿತಗೊಳಿಸಬೇಕೆಂದು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಕಲಂ 321(1) ಹಾಗೂ 321(2)ರ ಪ್ರಕಾರ ಆದೇಶಿಸಿರುತ್ತೇನೆ.

ಮೇಲ್ಕಂಡ ತಾತ್ಕಾಲಿಕ ಆದೇಶವನ್ನು 7 ದಿನಗಳೊಳಗಾಗಿ ಪಾಲಿಸಲು ವಿಫಲರಾದಲ್ಲಿ ಅಥವಾ ಸೂಕ್ತ ದಾಖಲೆಗಳೊಂದಿಗೆ ತೃಪ್ತಿಕರವಾದ ಸಮಜಾಯಿಷಿ ನೀಡದಿರುವ ಪಕ್ಷದಲ್ಲಿ ಈ ತಾತ್ಕಾಲಿಕ ಆದೇಶವನ್ನು ಸದರಿ ಕಾಯ್ದೆ ಕಲಂ 321(3)ರಡಿಯಲ್ಲಿ ಸ್ಥಿರೀಕರಣಗೊಳಿಸಿ ಆದೇಶಿಸಲಾಗುವುದು. ಸದರಿ ಆದೇಶವನ್ನು ಜಾರಿಗೊಳಿಸಲು ಈ ಅಧಿನಿಯಮದ ಕಲಂ 462ರಂತೆ ಹಾಗೂ ಇತರೆ ಸೂಕ್ತ ಕಾನೂನಿನ ಅಂಶಗಳಂತೆ ನಿಮ್ಮ ವಿರುದ್ಧ ಕ್ರಮಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ ಹಾಗೂ ಈ ಬಗ್ಗೆ ಕೈಗೊಳ್ಳಲಾಗುವ ಯಾವುದೇ ಜಾರಿ ಕ್ರಮಗಳ ಖರ್ಚು ವೆಚ್ಚಗಳನ್ನು ಭರಿಸಲು ಸದರಿ ಕಾನೂನಿನ ಕಲಂ 463ರಂತೆ ನೀವೇ ಜವಾಬ್ದಾರರಾಗಿರುತ್ತೀರೆಂದು ಹಾಗೂ ನಿಮ್ಮಿಂದ ಸದರಿ ಖರ್ಚನ್ನು ವಸೂಲಿ ಮಾಡಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು.

1.ಸ್ವತ್ತಿನ ಮಾಲೀಕರ ಹೆಸರು ಮತ್ತು ವಿಳಾಸ

2.

ನಾನು ಈ ಕೆಳಕಂಡಂತೆ ತಾತ್ಕಾಲಿಕ ಆದೇಶ ಮಾಡಿರುತ್ತೇನೆ.

ತಾತ್ಕಾಲಿಕ ಆದೇಶ

ಮಾನ್ಯ ಆಯುಕ್ತರಿಂದ ಕೆ.ಎಂ.ಸಿ. ಕಾಯ್ದೆ ಅಡಿ ಅಧಿಕಾರ ಪ್ರತ್ಯಾಯೋಜನೆ ಹೊಂದಿದ ನಾನು ಮೇಲ್ಕಂಡ ಅಂಶ ಹಾಗೂ ವಿವರಗಳಿಂದ ------- ಸ್ವತ್ತಿನ ಕಟ್ಟಡದ ಮಾಲೀಕರಾದ ತಾವುಗಳು ಮಂಜೂರಾದ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಿಸುತ್ತಿರುತ್ತೀರಿ/ನಿರ್ಮಿಸಿರುತ್ತೀರಿ. ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976 ರ ನಿಯಮ ಮತ್ತು ಕಟ್ಟಡ ಉಪವಿಧಿಗಳನ್ನು ಉಲ್ಲಂಘಿಸಿ ನಿರ್ಮಾಣ ಮಾಡುತ್ತಿರುವ ಮೇಲಿನ ಕೋಷ್ಟಕದಲ್ಲಿನ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಿ ಕೆಎಂಸಿ ಕಾಯ್ದೆ ಹಾಗೂ ಅದರ ಅಡಿಯಲ್ಲಿ ರಚಿತವಾಗಿರುವ ನಿಯಮಾವಳಿ ಮತ್ತು ಬೈಲಾಗಳಿಗೆ ಒಳಪಡುವಂತೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡದ ಭಾಗಗಳನ್ನು ಕೂಡಲೇ ಕೆಡವಿಹಾಕಬೇಕೆಂದು ಆದೇಶಿಸಿದೆ.

ಈ ತಾತ್ಕಾಲಿಕ ಆದೇಶವನ್ನು ಪಾಲನೆ ಮಾಡುವವರೆಗೆ ಸದರಿ ಕಟ್ಟಡದ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಿ ಮುಂದುವರೆಸಬಾರದೆಂದು ನಿರ್ದೇಶಿಸಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು,
(   ) ಉಪ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

ಇವರಿಗೆ:-

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(4)

ಅನುಬಂಧ-5

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:

ಸಹಾಯಕ ಕಾರ್ಯಪಾಲಕ ಅಭಿಯಂತರರು,
__________ ಉಪ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು, ದಿನಾಂಕ:

ಇವರಿಗೆ,

1. ಸಹಾಯಕ ಕಾರ್ಯಪಾಲಕ ಅಭಿಯಂತರರು,
__________ ಉಪ ವಿಭಾಗ,
ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾವೇರಿ ಭವನ

2. ಸಹಾಯಕ ಕಾರ್ಯಪಾಲಕ ಅಭಿಯಂತರರು,
__________ ಉಪ ವಿಭಾಗ,
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ,
ಬೆಂಗಳೂರು.

ಮಾನ್ಯರೇ,

ವಿಷಯ:- ಕುಡಿಯುವ ನೀರು ಸಂಪರ್ಕ/ವಿದ್ಯುತ್ ಸರಬರಾಜು ಮಂಜೂರಾತಿಯನ್ನು ನೀಡದಿರಲು/ರದ್ದುಪಡಿಸುವ ಬಗ್ಗೆ.

ಉಲ್ಲೇಖ:- 1. ಈ ಕಛೇರಿ ಆದೇಶ ಸಂಖ್ಯೆ:_____ ದಿನಾಂಕ:______
2. ರಿಟ್ ಮೇಲ್ಮನವಿ ಸಂಖ್ಯೆ:1800/2008ರ ತೀರ್ಪು ದಿನಾಂಕ:01/12/2008.

****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:_____ರ ಸ್ವತ್ತಿನ ಸಂಖ್ಯೆ ___ ರಲ್ಲಿ ಪಾಲಿಕೆಯ ಕಟ್ಟಡ ಉಪವಿಧಿ ಹಾಗೂ ಕಟ್ಟಡ ನಕ್ಷೆ ಮಂಜೂರಾತಿ ಉಲ್ಲಂಘಿಸಿ ಕಟ್ಟಡಗಳನ್ನು ನಿರ್ಮಿಸುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ ಪಾಲಿಕೆಯು ಕೆ.ಎಂ.ಸಿ ಕಾಯ್ದೆ ಕಲಂ 321ರಡಿಯಲ್ಲಿ ಉಲ್ಲೇಖ (1)ರ ತಾತ್ಕಾಲಿಕ ಆದೇಶ ಕಲಂ 321(3)ರಡಿ ಸ್ಥಿರೀಕರಣ ಆದೇಶ ಹೊರಡಿಸಲಾಗಿರುತ್ತದೆ. (ಪ್ರತಿಯನ್ನು ಲಗತ್ತಿಸಿದೆ)

ಕಟ್ಟಡ ಉಪವಿಧಿ ಉಲ್ಲಂಘಿಸಿರುವ ಕಟ್ಟಡಗಳಿಗೆ ಕುಡಿಯುವ ನೀರು ಹಾಗೂ ವಿದ್ಯುತ್ ಸಂಪರ್ಕವನ್ನು ನೀಡುವ ಬಗ್ಗೆ ಉಲ್ಲೇಖ (2)ರ ರಿಟ್ ಮೇಲ್ಮನವಿಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು "In the circumstances, this Court is of the opinion, till the case is decided by the Karnataka Appellate Tribunal and till the occupancy certificate is obtained by the 2nd Respondent, the respondent No.3 and 4 shall not provide water and electicity to the 2nd respondent. On production of occupancy certificate by the 2nd respondent, 3rd and 4th respondent shall provide electricity and water connextion to the premises of the 2nd respondent. With the above observation, the writ petition is disposed of" ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುತ್ತದೆ. ಆದ್ದರಿಂದ ಮೇಲ್ಕಂಡ ವಿಳಾಸದ ಕಟ್ಟಡಕ್ಕೆ ಕುಡಿಯುವ ನೀರಿನ/ವಿದ್ಯುತ್ ತಾತ್ಕಾಲಿಕ/ಖಾಯಂ ಸಂಪರ್ಕವನ್ನು, ನೀಡಿದ್ದಲ್ಲಿ ಸ್ಥಗಿತಗೊಳಿಸಲು ಹಾಗೂ ಹೊಸದಾಗಿ ತಾತ್ಕಾಲಿಕ ಅಥವಾ ಖಾಯಂ ಸಂಪರ್ಕ ಮಂಜೂರಾತಿ ನೀಡದಿರಲು ಕೋರಿದೆ.

ಅನುಬಂಧ-4

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ/ಕಾರ್ಯಪಾಲಕ

ಸಂಖ್ಯೆ: ಅಭಿಯಂತರರ ಕಛೇರಿ ---------

ಬೆಂಗಳೂರು, ದಿನಾಂಕ: -----------

ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಕಲಂ 321(3)ರ ಪ್ರಕಾರ ಹೊರಡಿಸಿರುವ ಸ್ಥಿರೀಕರಣ ಆದೇಶ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ __________ ವಲಯದ ವಾರ್ಡ್ ಸಂಖ್ಯೆ: __________ ಸಂಖ್ಯೆ: ________________ ಬೆಂಗಳೂರು, ಇಲ್ಲಿ ಶ್ರೀ __________ ಆದ ನೀವು ವಸತಿ/ವಾಣಿಜ್ಯ/ಭಾಗಶಃ ವಾಣಿಜ್ಯ/ವಸತಿ ಮನೆ ಕಟ್ಟುತ್ತಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಟ್ಟಡದ ಬೈಲಾಗಳು ಹಾಗೂ ಇತರ ನಿಯಮಗಳನ್ನು ಉಲ್ಲಂಘಿಸಿ ಕಟ್ಟಡ ಕಟ್ಟುತ್ತಿರುವ/ಕಟ್ಟಿರುವ ಬಗ್ಗೆ ನಿಮಗೆ ಈ ಕಛೇರಿಯ ತಾತ್ಕಾಲಿಕ ಆದೇಶ ಸಂಖ್ಯೆ:__________, ದಿನಾಂಕ: __________ ರಲ್ಲಿ ತಿಳಿಸಲಾಗಿದೆ ಹಾಗೂ ಸದರಿ ಆದೇಶದ ಪ್ರತಿಯನ್ನು ಕಾರಣ ಕೇಳುವ ನೋಟೀಸ್‌ನೊಂದಿಗೆ ಜಾರಿ ಮಾಡಲಾಗಿದೆ.

ಈ ತಾತ್ಕಾಲಿಕ ಆದೇಶಕ್ಕೆ ಅನುಗುಣವಾಗಿ ನೀವು ಸಮಜಾಯಿಷಿ ನೀಡಿರುವುದಿಲ್ಲ/ನೀಡಿದ ಸಮಜಾಯಿಷಿಯು ತೃಪ್ತಿದಾಯಕವಾಗಿರುವುದಿಲ್ಲ. ಆದುದರಿಂದ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ಮತ್ತು ನಿಯಮ ಹಾಗೂ ಬೈಲಾಗಳನ್ನು ಉಲ್ಲಂಘಿಸಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವುದು ಪುನಃ ಪೂರ್ತಿಯಾಗಿ ದೃಢಪಟ್ಟಿರುತ್ತದೆ. ಆದುದರಿಂದ ತಾತ್ಕಾಲಿಕ ಆದೇಶವನ್ನು ಮರು ಆಲೋಚಿಲು ನಿರಾದಾರವಾಗಿದೆ ಎಂದು ಅಭಿಪ್ರಾಯದೊಂದಿಗೆ ಈ ಕೆಳಗೆ ಸಹಿ ಮಾಡಿರುವ ನಾನು ಈ ರೀತಿ ಆದೇಶ ಹೊರಡಿಸುತ್ತಿದ್ದೇನೆ.

<u>ಸ್ಥಿರೀಕರಣ ಆದೇಶ</u>

ಮೇಲ್ಕಂಡ ಅಂಶ ಹಾಗೂ ವಿವರಗಳಿಂದ ಕಟ್ಟಡದ ಮಾಲೀಕರಾದ ಶ್ರೀ __________, ಸಂಖ್ಯೆ: __________, __________ ಬೆಂಗಳೂರು ಇಲ್ಲಿ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ರಂತೆ ನಿಯಮ ಮತ್ತು ಬೈಲಾಗಳನ್ನು ಉಲ್ಲಂಘಿಸಿ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಕಟ್ಟಡದ ಭಾಗಗಳನ್ನು ಒಡೆದು ಹಾಕಿ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಮತ್ತು ಅದರಡಿಯಲ್ಲಿ ರಚಿತವಾಗಿರುವ ನಿಯಮಾವಳಿಗಳಿಗೆ ವಿರುದ್ಧವಾಗಿ ನಿರ್ಮಿಸುತ್ತಿರುವ ಕಟ್ಟಡದ ಭಾಗಗಳನ್ನು ಕೂಡಲೇ ಕೆಡವಿ ಹಾಕಬೇಕೆಂದು. ನಿರ್ದೇಶಿಸುತ್ತಾ, ಮಾನ್ಯ ಆಯುಕ್ತರಿಂದ ಕೆಎಂಸಿ ಕಾಯ್ದೆ ಅಡಿ ಅಧಿಕಾರ ಪ್ರತ್ಯಾಯೋಜನೆ ಹೊಂದಿದ ನಾನು ಅದರಂತೆ ದಿನಾಂಕ:__________ ರ ತಾತ್ಕಾಲಿಕ ಆದೇಶವನ್ನು ಸ್ಥಿರೀಕರಣಗೊಳಿಸಲಾಗಿದೆ. ಈ ಆದೇಶಕ್ಕನುಗುಣವಾಗಿ ಉಲ್ಲಂಘನೆಗಳನ್ನು ಸರಿಪಡಿಸಿ ವರದಿ ಮಾಡುವ ತನಕ ಕಟ್ಟಡ ಉಪವಿಧಿಗೆ ವಿರುದ್ಧವಾಗಿ ಕಾನೂನು ಬಾಹಿರವಾಗಿ ಕಟ್ಟುತ್ತಿರುವ ಕಟ್ಟಡದ ಕೆಲಸವನ್ನು ಈ ಆದೇಶ ಜಾರಿಯಾದ ತಕ್ಷಣದಿಂದಲೇ ಸ್ಥಗಿತಗೊಳಿಸತಕ್ಕದೆಂದು ಆದೇಶಿಸಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು

( ) ಉಪ ವಿಭಾಗ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

ಬೆಂಗಳೂರು.

ಆಯುಕ್ತರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅನುಬಂಧ-6

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:

ಸಹಾಯಕ ಕಾರ್ಯನಿರ್ವಾಹಕ/ಕಾರ್ಯಪಾಲಕ
ಅಭಿಯಂತರರ ಕಛೇರಿ ---------
ದಿನಾಂಕ: ---------------

ರವರಿಗೆ:

01. ಕಟ್ಟಡ ನಕ್ಷೆಯ ನೋಂದಾಯಿತ ವಿನ್ಯಾಸಗಾರರು/ಸ್ಟ್ರಕ್ಚರಲ್ ಇಂಜಿನಿಯರ್ಸ್
02. ಕಟ್ಟಡ ನಿರ್ಮಾಣದ ನೋಂದಾಯಿತ ಅಭಿಯಂತರರ
03. ಕಟ್ಟಡ ನಿರ್ಮಾಣದ ಮೇಲ್ವಿಚಾರಕರು

ತಿಳುವಳಿಕೆ ನೋಟಿಸ್--1

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ---- ವಲಯದ ವಾರ್ಡ್ ಸಂಖ್ಯೆ: ----- ಸ್ವತ್ತಿನ/ಪಿ.ಐ.ಡಿ ಸಂಖ್ಯೆ:. --------------- ಬೆಂಗಳೂರು, ಇಲ್ಲಿ ಸ್ವತ್ತಿನಲ್ಲಿ ಕಟ್ಟಡ ನಿರ್ಮಿಸಲು ಪಾಲಿಕೆಯಿಂದ ಕಟ್ಟಡ ನಕ್ಷೆ ಮಂಜೂರಾತಿಯನ್ನು ಸುವರ್ಣ ಪರವಾನಿಗೆ/ವಸತಿ/ವಾಣಿಜ್ಯ/ಭಾಗಶಃ ವಾಣಿಜ್ಯ/ವಸತಿ ಕಟ್ಟಡ ನಿರ್ಮಿಸಲು --------- ವಲಯ ನಗರ ಯೋಜನೆ ಕಛೇರಿ ಸಂಖ್ಯೆ: ----------------------------, ದಿನಾಂಕ: -----------ರಂತೆ ------ ಮಹಡಿಯ ವಸತಿ/ವಾಣಿಜ್ಯ ಉದ್ದೇಶಕ್ಕಾಗಿ ನಕ್ಷೆ ಮಂಜೂರಾತಿ ಪಡೆದು ಕಟ್ಟಡ ನಿರ್ಮಿಸಲಾಗುತ್ತಿದೆ.

ಮೇಲ್ಕಂಡಂತೆ ಕಟ್ಟಡ ನಕ್ಷೆ ಮಂಜೂರಾತಿ ಪಡೆದು ಸ್ವತ್ತಿನಲ್ಲಿ ಮಂಜೂರಾತಿ ನಕ್ಷೆ ಹಾಗೂ ಪಾಲಿಕೆಯ ಕಟ್ಟಡ ಉಪವಿಧಿಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿರುವುದು ಈ ಕಛೇರಿಯಿಂದ ದಿನಾಂಕ:-------- ರಂದು ನಡೆಸಿದ ಸ್ಥಳ ಪರಿವೀಕ್ಷಣೆ ಮತ್ತು ಕಟ್ಟಡದ ಅಳತೆಯಿಂದ ದೃಢಪಟ್ಟಂತೆ ಈ ಕಛೇರಿ ತಾತ್ಕಾಲಿಕ ಆದೇಶ ಸಂಖ್ಯೆ:------------ ದಿನಾಂಕ:----- ರಂದು ತಾತ್ಕಾಲಿಕ ಆದೇಶ ಹೊರಡಿಸಲಾಗಿದೆ.

ಮೇಲ್ಕಂಡಂತೆ ಘುಂಜೂರಾತಿ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡಿರುವುದು ಕೆ.ಎಂ.ಸಿ.ಕಾಯ್ದೆ ಹಾಗೂ ಅದರಿಂದ ರಚಿಸಲ್ಪ ಕಟ್ಟಡ ಉಪ ವಿಧಿಗಳಂತೆ ತಾವುಗಳು ಕಟ್ಟಡ ನಕ್ಷೆ ಮಂಜೂರಾತಿ ಘಡೆಯುವಾಗ ಪಾಲಿಕೆಗೆ ನೀಡಿರುವ ಪ್ರಮಾಣ ಪತ್ರದ ವಾಗ್ದಾನವನ್ನು ಉಲ್ಲಂಘಿಸಿದ್ದೀರಿ. ಕಟ್ಟಡ ಉಪವಿಧಿ ನಿಯಮ 8(i)ರ ಪ್ರಕಾರ ನೀವ್ರೂ ಜವಾಬ್ದಾರರು.

ಆದ್ದರಿಂದ ಕೆ.ಎಂ.ಸಿ. ಕಾಯ್ದೆ ಅಡಿ ರಚಿಸಲಾದ ಕಟ್ಟಡ ಉಪವಿಧಿ 7.1ರ ಪ್ರಕಾರ ನಿಮಗೆ ಈ ಮೂಲಕ ತಿಳುವಳಿಕೆ ನೀಡಿದೆ. ನೀವು ಮಂಜೂರಾತಿ ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಾಣವನ್ನು ಕೂಡಲೇ ತೆರವುಗೊಳಿಸಲು ಕಟ್ಟಡದ ಮಾಲೀಕರಿಗೆ ಸೂಚಿಸುವುದು.

ಮೇಲ್ಕಂಡ ತಿಳುವಳಿಕೆ ನೋಟಿಸ್ ತಲುಪಿದ 3 ದಿನಗಳೊಳಗಾಗಿ ಕ್ರಮಜರುಗಿಸುವುದು. ತಪ್ಪಿದಲ್ಲಿ ಕಟ್ಟಡ ಉಪವಿಧಿ 7.1ರ ಭ್ರಕಾರ ಮುಂದಿನ ಸೂಕ್ತ ಕ್ರಮಜರುಗಿಸಲಾಗುವುದೆಂದು ತಿಳಿಸಿದೆ.

ಆಯುಕ್ತರು
ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರು.

ಆದ್ದರಿಂದ ಮೇಲ್ಕಂಡ ಸ್ವತ್ತಿನಲ್ಲಿಯ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಹಾಗೂ ಕುಡಿಯುವ ನೀರು ಮತ್ತು ಒಳಚರಂಡಿ ತಾತ್ಕಾಲಿಕ/ಖಾಯಂ ಸಂಪರ್ಕಗಳನ್ನು ಸ್ಥಗಿತಗೊಳಿಸುವಂತೆ ಕೋರಿದೆ.

ಒಂದು ಪಕ್ಷ ಸಂಪರ್ಕ ಪಡೆಯಲು ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸುವ ಸಂದರ್ಭದಲ್ಲಿ ಪಾಲಿಕೆಯ ಸಂಬಂಧಪಟ್ಟ ಉಪವಿಭಾಗದ ಕಾಮಗಾರಿ ಕಛೇರಿಯಿಂದ ಕಟ್ಟಡ ಉಪವಿಧಿ ಉಲ್ಲಂಘನೆಗೆ ಸಂಬಂಧಿಸಿ ಪತ್ರವನ್ನು ಕಡ್ಡಾಯವಾಗಿ ಪರಿಗಣಿಸಿ ಅಪೇಕ್ಷಿಸುವ ಕ್ರಮದೊಂದಿಗೆ ಪಾಲಿಕೆ ವ್ಯಾಪ್ತಿಯಲ್ಲಿ ಕಾನೂನು ಬಾಹಿರವಾಗಿ ನಡೆಯುವ ಕಟ್ಟಡಗಳ ನಿರ್ಮಾಣಗಳನ್ನು ನಿಯಂತ್ರಿಸಲು ಪಾಲಿಕೆಯೊಂದಿಗೆ ಸಹಕರಿಸಲು ಈ ಮೂಲಕ ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು
----------- ಉಪ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಪ್ರತಿಯನ್ನು: ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರಿಗೆ ಮಾಹಿತಿಗಾಗಿ ಕಳುಹಿಸಿದೆ.
: ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಆಯುಕ್ತರು
...ಹತ್ ಬೆಂಗಳೂರು ಮಹಾನಗರ ಪಾಲಿಕೆ

ಅನುಬಂಧ - 7

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:

ಸಹಾಯಕ ಕಾರ್ಯನಿರ್ವಾಹಕ/ಕಾರ್ಯಪಾಲಕ
ಅಭಿಯಂತರರ ಕಛೇರಿ ---------
ದಿನಾಂಕ: ---------------

ರವರಿಗೆ:

01. ಕಟ್ಟಡ ನಕ್ಷೆಯ ನೋಂದಾಯಿತ ವಿನ್ಯಾಸಗಾರರು/ಸ್ಟ್ರಕ್ಚರಲ್ ಇಂಜಿನಿಯರ್ಸ್
02. ಕಟ್ಟಡ ನಿರ್ಮಾಣದ ನೋಂದಾಯಿತ ಅಭಿಯಂತರರ
03. ಕಟ್ಟಡ ನಿರ್ಮಾಣದ ಮೇಲ್ವಿಚಾರಕರು

ಎಚ್ಚರಿಕೆ ನೋಟಿಸ್ – 2

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ----- ವಲಯದ ವಾರ್ಡ್ ಸಂಖ್ಯೆ: ------ ಸ್ವತ್ತಿನ/ಪಿ.ಐ.ಡಿ ಸಂಖ್ಯೆ: ---------- ಬೆಂಗಳೂರು, ಇಲ್ಲಿ ಸ್ವತ್ತಿನಲ್ಲಿ ಕಟ್ಟಡ ನಿರ್ಮಿಸಲು ಪಾಲಿಕೆಯಿಂದ ಕಟ್ಟಡ ನಕ್ಷೆ ಮಂಜೂರಾತಿಯನ್ನು ಸುವರ್ಣ ಪರವಾನಿಗೆ/ವಸತಿ/ವಾಣಿಜ್ಯ/ಭಾಗಶಃ ವಾಣಿಜ್ಯ/ವಸತಿ ಕಟ್ಟಡ ನಿರ್ಮಿಸಲು -------- ವಲಯ ನಗರ ಯೋಜನೆ ಕಛೇರಿ ಸಂಖ್ಯೆ: --------------------, ದಿನಾಂಕ: -------- ರಂತೆ -------- ಮಹಡಿಯ ವಸತಿ/ವಾಣಿಜ್ಯ ಉದ್ದೇಶಕ್ಕಾಗಿ ನಕ್ಷೆ ಮಂಜೂರಾತಿ ಪಡೆದು ಸ್ವತ್ತಿನಲ್ಲಿ ಸ್ವತ್ತಿನಲ್ಲಿ ಮಂಜೂರಾತಿ ನಕ್ಷೆ ಹಾಗೂ ಪಾಲಿಕೆಯ ಕಟ್ಟಡ ಉಪವಿಧಿಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿರುವುದು ದೃಢಪಟ್ಟಿದ್ದು, ಈ ಕಛೇರಿ ಆದೇಶ ಸಂಖ್ಯೆ:---------- ದಿನಾಂಕ:------- ರಂದು ತಾತ್ಕಾಲಿಕ ಆದೇಶ ಹೊರಡಿಸಲಾಗಿರುತ್ತದೆ.

ಮಂಜೂರಾತಿ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡಿರುವುದು ಕೆ.ಎಂ.ಸಿ.ಕಾಯ್ದೆ ಹಾಗೂ ಅದರಿಂದ ರಚಿಸಲ್ಪಟ್ಟ ಕಟ್ಟಡ ಉಪ ವಿಧಿಗಳಂತೆ ಕಟ್ಟಡ ನಕ್ಷೆ ಮಂಜೂರಾತಿ ಪಡೆಯುವಾಗ ಪಾಲಿಕೆಗೆ ನೀಡಿರುವ ಪ್ರಮಾಣ ಪತ್ರದ ವಾಗ್ದಾನವನ್ನು ಉಲ್ಲಂಘಿಸಿದ್ದು, ಕಟ್ಟಡ ಉಪವಿಧಿ ನಿಯಮದ ಷೆಡ್ಯೂಲ್ iv-8ರ ಉಲ್ಲಂಘನೆಯಾಗಿರುವ ಬಗ್ಗೆ ಈ ಕಛೇರಿಯ ತಿಳುವಳಿಕೆ ನೋಟೀಸ್-1 ಸಂಖ್ಯೆ: ------- ದಿನಾಂಕ ------ ರಂತೆ ಜಾರಿ ಮಾಡಲಾಗಿರುತ್ತದೆ. ಇದರಲ್ಲಿ ನಿಮ್ಮನ್ನು ಮಂಜೂರಾತಿ ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಾಣವನ್ನು ಕೂಡಲೇ ತೆರವುಗೊಳಿಸಲು ಕಟ್ಟಡದ ಮಾಲೀಕರಿಗೆ ಸೂಚಿಸಲು ಮತ್ತು ತೆರವುಗೊಳಿಸುವುದನ್ನು ಖಾತ್ರಿಪಡಿಸಿಕೊಳ್ಳಲು ತಿಳಿಸಲಾಗಿತ್ತು.

ಮೇಲ್ಕಂಡ ತಿಳುವಳಿಕೆ ನೋಟಿಸ್ ತಲುಪಿದರೂ ಕೂಡ ಇದುವರೆಗೂ ಮೇಲ್ಕಂಡ ಉಲ್ಲಂಘನೆಯನ್ನು ಸರಿಪಡಿಸಿರುವುದು ಕಂಡುಬಂದಿರುವುದಿಲ್ಲ. ಆದ್ದರಿಂದ ಈ ನೋಟೀಸು ತಲುಪಿದ 3 ದಿನಗಳೊಳಗಾಗಿ ಕಟ್ಟಡದ ವ್ಯತಿರಿಕ್ತ ನಿರ್ಮಾಣದ ಭಾಗಗಳನ್ನು ಮಾಲೀಕರಿಂದ ತೆರವುಗೊಳಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮಗಳ ವಿರುದ್ಧ ಕಟ್ಟಡ ಉಪವಿಧಿ 7.1ರ ಪ್ರಕಾರ ಸೂಕ್ತ ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ಎಚ್ಚರಿಕೆ ನೀಡಲಾಗಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅನುಬಂಧ-8

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:

ಸಹಾಯಕ ಕಾರ್ಯನಿರ್ವಾಹಕ/ಕಾರ್ಯಪಾಲಕ
ಅಭಿಯಂತರರು ಅಭಿಯಂತರರ ಕಛೇರಿ__________
ದಿನಾಂಕ:__________

ರವರಿಗೆ,

ಮಾನ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಕಟ್ಟಡ ನಕ್ಷೆ ವಿನ್ಯಾಸ/ನಿರ್ಮಾಣ/ಮೇಲ್ವಿಚಾರಕರ ನೋಂದಣಿ ರದ್ದತಿಗೆ ಪ್ರಸ್ತಾವನೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ________ ವಲಯದ ವಾರ್ಡ್ ಸಂಖ್ಯೆ:_____ ಸ್ವತ್ತಿನ/ಪಿ.ಐ.ಡಿ ಸಂಖ್ಯೆ:________ ಬೆಂಗಳೂರು ಸ್ವತ್ತಿನಲ್ಲಿ ಕಟ್ಟಡ ನಿರ್ಮಿಸಲು ಪಾಲಿಕೆಯಿಂದ ಕಟ್ಟಡ ನಕ್ಷೆ ಮಂಜೂರಾತಿಯನ್ನು ಸುವರ್ಣ ಪರವಾನಿಗೆ/ವಸತಿ/ವಾಣಿಜ್ಯ/ಭಾಗಶಃ ವಾಣಿಜ್ಯ/ವಸತಿ ಕಟ್ಟಡ ನಿರ್ಮಿಸಲು __________ ವಲಯ ನಗರ ಯೋಜನೆ ಕಛೇರಿ ಸಂಖ್ಯೆ:______________, ದಿನಾಂಕ:_____ ರಂತೆ _____ ಮಹಡಿಯ ವಸತಿ/ವಾಣಿಜ್ಯ ಉದ್ದೇಶಕ್ಕಾಗಿ ನಕ್ಷೆ ಮಂಜೂರಾತಿ ಪಡೆದು, ಸ್ವತ್ತಿನಲ್ಲಿ ಮಂಜೂರಾತಿ ನಕ್ಷೆ ಹಾಗೂ ಪಾಲಿಕೆಯ ಕಟ್ಟಡ ಉಪವಿಧಿಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿರುವುದು ದೃಢಪಟ್ಟಿದ್ದು ಈ ಕಛೇರಿ ಆದೇಶ ಸಂಖ್ಯೆ: __________ ದಿನಾಂಕ:________ ರಂದು ತಾತ್ಕಾಲಿಕ ಆದೇಶ ಹೊರಡಿಸಲಾಗಿರುತ್ತದೆ.

ಮಂಜೂರಾತಿ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡಿರುವ ಕುರಿತು 1) ಕಟ್ಟಡ ನಕ್ಷೆಯ ನೋಂದಾಯಿತ ವಿನ್ಯಾಸಗಾರರು/ಸ್ಟ್ರಕ್ಚರಲ್ ಇಂಜಿನಿಯರ್/ಸಂಸ್ಥೆ________ 2) ಕಟ್ಟಡ ನಿರ್ಮಾಣದ ನೋಂದಾಯಿತ(ಗುತ್ತಿಗೆದಾರರ) ಅಭಿಯಂತರರು ಶ್ರೀ________ 3)ಕಟ್ಟಡ ನಿರ್ಮಾಣದ ಮೇಲ್ವಿಚಾರಕರಾದ ಶ್ರೀ. ________ ರವರಿಗೆ ಈ ಕಛೇರಿಯ ತಿಳುವಳಿಕೆ ನೋಟೀಸು--1 ಸಂಖ್ಯೆ:______ ದಿನಾಂಕ:______ ಹಾಗೂ ಎಚ್ಚರಿಕೆ ನೋಟೀಸ್ ಸಂಖ್ಯೆ:______ದಿನಾಂಕ:______ ರಂತೆ ನೋಟೀಸು ಜಾರಿ ಮಾಡಲಾಗಿದೆ.

ಆದರೆ ಸದರಿ ಕಟ್ಟಡದ ವ್ಯತಿರಿಕ್ತ ನಿರ್ಮಾಣದ ಭಾಗಗಳನ್ನು ತೆರವುಗೊಳಿಸಿ ಮಂಜೂರಾತಿ ನಕ್ಷೆಯಂತೆ ಕಟ್ಟಡ ನಿರ್ಮಿಸಲು ವಿಫಲರಾಗಿರುವುದಲ್ಲದೆ ಕೆ.ಎಂ.ಸಿ ಕಾಯ್ದೆ ಹಾಗೂ ಅದರಿಂದ ರಚಿಸಲ್ಪಟ್ಟ ಕಟ್ಟಡ ಉಪವಿಧಿಗಳಂತೆ ಕಟ್ಟಡ ನಕ್ಷೆ ಮಂಜೂರಾತಿ ಪಡೆಯುವಾಗ ಪಾಲಿಕೆಗೆ ನೀಡಿರುವ ಪ್ರಮಾಣ ಪತ್ರದ ವಾಗ್ದಾನವನ್ನು ಉಲ್ಲಂಘಿಸಿರುವುದರಿಂದ ಸದರಿಯವರಿಗೆ ಪಾಲಿಕೆಯು ನೀಡಿದ ನೋಂದಾಯಿತ ಪರವಾನಗಿಯನ್ನು ರದ್ದುಪಡಿಸಲು ಕೋರಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿಬಿಎಂಪಿ/ಜಂಟಿ ಆಯುಕ್ತರು(ಆರೋಗ್ಯ)/PR-F-852/15-16

ಆಯುಕ್ತರ ಕಛೇರಿ,
ನಗರಪಾಲಿಕೆ ಕಛೇರಿಗಳು, ನ.ರಾ.ಚೌಕ,
ಬೆಂಗಳೂರು, ದಿನಾಂಕ: 27-07-2015

ಸುತ್ತೋಲೆ

ವಿಷಯ:- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಖಾಲಿ ನಿವೇಶನಗಳಲ್ಲಿ ಕಸದ ರಾಶಿ, ಡೆಬ್ರಿಸ್‌ಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆಯನ್ವಯ ಕ್ರಮಕೈಗೊಳ್ಳುವ ಬಗ್ಗೆ.

* * * * *

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಹಲವಾರು ಖಾಲಿ ನಿವೇಶನಗಳಲ್ಲಿ ಕಸದ ರಾಶಿ, ಡೆಬ್ರಿಸ್‌ಗಳನ್ನು ಹಾಕಿರುವುದು ಕಂಡುಬಂದಿರುತ್ತದೆ. ಖಾಲಿ ನಿವೇಶನಗಳಲ್ಲಿಯ ಕಸದ ರಾಶಿ ಮತ್ತು ಭಗ್ನಾವಶೇಷ (Debris)ಗಳನ್ನು ತೆರವುಗೊಳಿಸುವ ಕುರಿತು ಸಂಬಂಧಪಟ್ಟ ಅಭಿಯಂತರರು ಹಾಗೂ ಆರೋಗ್ಯ ಪರಿವೀಕ್ಷಕರು ಹಾಗೂ ಅವರ ಮೇಲಾಧಿಕಾರಿಗಳು ಈ ಕೆಳಕಂಡಂತೆ ಕ್ರಮ ಜರುಗಿಸಲು ಸೂಚಿಸಿದೆ.

2. ಕೆಳಕಂಡಂತೆ ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976ರ ಕಲಂ 256, 257, 332, 333 ಹಾಗೂ 335 ರಡಿ ಆಯುಕ್ತರಿಗೆ ಅಧಿಕಾರ ನೀಡಲಾಗಿರುತ್ತದೆ.

- **ಕಲಂ 256: ಅಧಿಭೋಗದಾರರಿಂದ ಕಸ ಮತ್ತು ಹೊಲಸಿನ ಶೇಖರಣೆಯ ಬಗ್ಗೆ ಆದೇಶಿಸಿರುವ ಸಾರ್ವಜನಿಕ ನೋಟೀಸು**
- **ಕಲಂ 257: ಆವರಣದ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ರಾಶಿಗೂಡುವ ಕಸ ಅಥವಾ ಹೊಲಸನ್ನು ತೆಗೆದುಹಾಕುವುದು.**
- **ಕಲಂ 332: ಒಕ್ಕಲಿಲ್ಲದ ಕಟ್ಟಡಗಳು ಅಥವಾ ಭೂಮಿಗಳು;**
- **ಕಲಂ 333: ಹೊಲಸು ಅಥವಾ ಹಾನಿಕರ ಸಸ್ಯಗಳನ್ನು ತೆಗೆದುಹಾಕುವುದು;**
- **ಕಲಂ 335: ಕಟ್ಟಡಗಳು ಅಥವಾ ಭೂಮಿಗಳಿಗೆ ಬೇಲಿ ಹಾಕುವುದು ಮತ್ತು ಹಸಿರು ಬೇಲಿಗಳು ಮತ್ತು ಮರಗಳ ಸವರುವಿಕೆ:** ಕಮೀಷನರನು, ಸಾರ್ವಜನಿಕರ ಬೀದಿಗೆ ಸಮೀಪವಿರುವ ಯಾವುದೇ ಕಟ್ಟಡ ಅಥವಾ ಖಾಲಿ ಭೂಮಿಯ ಒಡೆಯ ಅಥವಾ ಅಧಿಭೋಗದಾರರನ್ನು:-

ಎ) ಕಮೀಷನರನಿಗೆ ಸಮಾಧಾನವಾಗುವಂತೆ ಅದಕ್ಕೆ ಬೇಲಿ ಹಾಕಲು; ಅಥವಾ

ಬಿ) ಕಮೀಷನರನು ನಿರ್ಧರಿಸಬಹುದಾದಂತೆ ಪಕ್ಕದಲ್ಲಿರುವ ರಸ್ತೆಯ ಮಟ್ಟದಿಂದ ಅಂಥ ಎತ್ತರವನ್ನು ಅವುಗಳ ಮೀರದ ಹಾಗೆ ಸದರಿ ಬೀದಿಯ ಅಂಚಿನಲ್ಲಿರುವ ಯಾವುದೇ ಹಸಿರು ಬೇಲಿಗಳನ್ನು ಕತ್ತರಿಸಿ ಸಮ ಮಾಡಲು ಅಥವಾ ಸವರಲು ಅಥವಾ

ಸಿ) ಸದರಿ ಬೀದಿಯ ಮೇಲೆ ಚಾಚಿಕೊಂಡಿರುವ ಮತ್ತು ಅದನ್ನು ಅಥವಾ ಸಂಚಾರದ ದೃಷ್ಟಿಯನ್ನು ಅಡ್ಡಿಪಡಿಸುವ ಅಥವಾ ಅದಕ್ಕೆ ಹಾನಿಪಡಿಸುವ ಯಾವುದೇ ಹಸಿರು ಬೇಲಿಗಳನ್ನು ಮತ್ತು ಮರಗಳನ್ನು ಕತ್ತರಿಸಲು ಮತ್ತು ಕತ್ತರಿಸಿ ಸಮ ಮಾಡಲು; ಅಥವಾ

ಡಿ) ಅದರ ಎತ್ತರ ಮತ್ತು ಇರುವಿಕೆಯ ಕಾರಣದಿಂದಾಗಿ ಅಪಾಯವನ್ನು ಉಂಟುಮಾಡುವ ಹಾಗೆ ಸಂಚಾರದ ದೃಷ್ಟಿಯನ್ನು ಅಡ್ಡಿಪಡಿಸುವ ಸುತ್ತುವರಿದಿರುವ ಗೋಡೆ ಅಥವಾ ಬೇಲಿಯನ್ನು ತಗ್ಗಿಸುವುದು.

3. ಮೇಲಿನ ಕಲಂ 256, 257, 332, 333 ಹಾಗೂ 335ರನ್ವಯ ಗಿಡಗಂಟೆ, ಕಸ ಹಾಗೂ ಡೆಬ್ರಿಸ್ ತುಂಬಿರುವ ಖಾಲಿ ನಿವೇಶನದ ಮಾಲೀಕರಿಗೆ ಕಲಂ 257ರಡಿ ಈ ಕೆಳಕಂಡಂತೆ ನಿರ್ದೇಶಿಸಿ ನೋಟೀಸನ್ನು ವಲಯ ಜಂಟಿ ಆಯುಕ್ತರು ನೀಡತಕ್ಕದ್ದು. ನೋಟೀಸಿನ ಮಾದರಿ ನಮೂನೆಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ.

ಎ) ಸದರಿ ನಿವೇಶನದಲ್ಲಿ ಇರುವಂತಹ ಗಿಡಗಂಟೆ, ಕಸದ ರಾಶಿ ಹಾಗೂ ಡೆಬ್ರಿಸ್‌ಗಳನ್ನು 3 ದಿನಗಳೊಳಗಾಗಿ ತೆರವುಗೊಳಿಸಲು,

ಬಿ) ಅಗತ್ಯವಿದ್ದಲ್ಲಿ ಸದರಿ ನಿವೇಶನದ ಸುತ್ತಲೂ ಕಾಂಪೌಂಡ್ ಗೋಡೆ ನಿರ್ಮಿಸಲು

4. ಸದರಿ ನೋಟೀಸನ್ನು ನೊಂದಾಯಿತ ಸ್ವೀಕೃತಿ ಅಂಚೆ (RPAD) ಮೂಲಕ ರವಾನಿಸುವುದು. ಜೊತೆಗೆ ಒಂದು ಪ್ರತಿಯನ್ನು ಸ್ವತ್ತಿನ ಮೇಲೆ ಅಂಟಿಸಿ ಮಹಜರ್ ಮಾಡಿ ಫೋಟೋ ತೆಗೆಯುವುದು.

5. ಪಾಲಿಕೆ ವತಿಯಿಂದ ಗಿಡಗಂಟೆ, ಕಸದ ರಾಶಿ ಹಾಗೂ ಡೆಬ್ರಿಸ್‌ನ್ನು ಕಸ ವಿಲೇವಾರಿ ಗುತ್ತಿಗೆದಾರರಿಂದ ಹಾಗೂ ಸಿಲ್ಟ್ ಟ್ರಾಕ್ಟರ್‌ನಿಂದ ತೆರವುಗೊಳಿಸಲು ಸಂಬಂಧಪಟ್ಟ ಸಹಾಯಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಕ್ರಮವಹಿಸುವುದು.

6. ಈ ತೆರವು ಕಾರ್ಯಕ್ಕೆ ಕಲಂ 257(ಬಿ)ರಡಿ ಕಛೇರಿ ಆದೇಶ ಸಂಖ್ಯೆ 4686 ದಿನಾಂಕ 21-7-15ರಲ್ಲಿ ನಿಗದಿಪಡಿಸಿದ ಶುಲ್ಕವನ್ನು ನಿವೇಶನದ ಪ್ರತಿ ಚದರ ಅಡಿಗೆ ರೂ.2.00 ರಂತೆ ಪ್ರತಿ ಬಾರಿ ಸ್ವಚ್ಛಗೊಳಿಸಿದ ಮೊತ್ತವನ್ನು ನಿವೇಶನದ/ಸ್ವತ್ತಿನ ಮಾಲೀಕರಿಂದ ವಸೂಲಿ ಮಾಡುವುದು. ಈ ರೀತಿಯಾಗಿ ತಗುಲಿದ ವೆಚ್ಚದ ಮೊತ್ತದ ವಿವರಗಳನ್ನು ಆನ್‌ಲೈನ್‌ನಲ್ಲಿ ಸ್ವತ್ತಿನ ಪಿ.ಐ.ಡಿ ಸಂಖ್ಯೆಯಡಿ ಕಂದಾಯ ರಶೀದಿಯಲ್ಲಿನ ಇತರೆ ಅಂಕಣದಲ್ಲಿ ದಾಖಲಿಸುವುದು ಹಾಗೂ ಈ ಶುಲ್ಕವನ್ನು ಕಲಂ 470 ರಂತೆ ಕಂದಾಯದ ಬಾಕಿಯಾಗಿ ವಸೂಲಿ ಮಾಡಲು ಸಂಬಂದಪಟ್ಟ ಕಂದಾಯ ಅಧಿಕಾರಿಗಳು ಕ್ರಮವಹಿಸುವುದು.

(ಎ) ಒಂದೆರಡು ಬಾರಿ ತೆರವುಗೊಳಿಸಿದಾಗಲೂ ತಾವಾಗಿ ತೆರವುಗೊಳಿಸದಿದ್ದ ಪಕ್ಷದಲ್ಲಿ ಅಂತಹ ಮಾಲೀಕರಿಗೆ ನೋಟೀಸು ಜಾರಿಯಾದ ನಿಗಧಿತ ಸಮಯದಲ್ಲಿ ತೆರವುಗೊಳಿಸಲು ವಿಫಲರಾದಲ್ಲಿ ಸಕ್ಷಮ ಪೋಲೀಸ್ ಠಾಣಾಧಿಕಾರಿಗೆ ಕಲಂ 462(2)ರಡಿ ಲಿಖಿತ ದೂರು ಸಲ್ಲಿಸುವುದು ಹಾಗೂ ಪಾಲಿಕೆಯು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆಯ 1976ರ ಕಲಂ 431ರ ಅಡಿಯಲ್ಲಿ ನಿಗಧಿಪಡಿಸಿದ ದಂಡವನ್ನು ವಿಧಿಸಲು ಕ್ರಮವಹಿಸುವುದು.

(ಬಿ) ಮೇಲ್ಕಂಡ ಪಾಲಿಕೆಯ ಸೂಚನೆ ಮತ್ತು ಆದೇಶವನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಯು ಮಾನ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 200ರ ಅಡಿಯಲ್ಲಿ ಖಾಸಗಿ ದೂರು ಸಲ್ಲಿಸತಕ್ಕದ್ದು.

7. ಈ ಮೇಲಿನ ಸೂಚನೆಗಳನ್ನು ಪಾಲಿಸಲು ಸಂಬಂಧಪಟ್ಟ ಅಭಿಯಂತರರು ಮತ್ತು ಆರೋಗ್ಯ ಪರಿವೀಕ್ಷಕರನ್ನು ಜವಾಬ್ದಾರರನ್ನಾಗಿಸಿ ಅವರುಗಳು ಈ ಬಗ್ಗೆ ದೂರುಗಳಿಗೆ ಅವಕಾಶ ನೀಡದಂತೆ ಕ್ರಮ ಜರುಗಿಸುವುದು.

(ಸಹಿ)

ಆಯುಕ್ತರು,

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು: ಮಾನ್ಯ ಆಡಳಿತಗಾರರ ಅವಗಾಹನೆಗೆ ಸಲ್ಲಿಸಿದೆ.

: ವಿಶೇಷ ಆಯುಕ್ತರು (ಯೋಜನೆ)/(ಘ.ತ್ಯಾ.ನಿ.)/ಅಪರ ಆಯುಕ್ತರು (ಆಡಳಿತ)ರವರಿಗೆ ಕಳುಹಿಸಿದೆ.

: ಅಪರ/ಜಂಟಿ ಆಯುಕ್ತರು (ಪಶ್ಚಿಮ/ದಕ್ಷಿಣ/ಪೂರ್ವ/ಯಲಹಂಕ/ದಾಸರಹಳ್ಳಿ/ಮಹದೇವಪುರ/ರಾಜರಾಜೇಶ್ವರಿನಗರ/ಬೊಮ್ಮನಹಳ್ಳಿ ವಲಯ) ರವರ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

: ಪ್ರಧಾನ ಅಭಿಯಂತರರು ಹಾಗೂ ಎಲ್ಲಾ ವಲಯದ ಮುಖ್ಯ ಅಭಿಯಂತರರಿಗೆ ಕಳುಹಿಸುತ್ತಾ ಕಾರ್ಯಪಾಲಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು/ಸಹಾಯಕ/ಕಿರಿಯ ಅಭಿಯಂತರರಿಗೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಕ್ರಮವಹಿಸುವುದು.

: ಉಪ ಆಯುಕ್ತರು (ಕಂದಾಯ)/ಕಂದಾಯ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

: ಪಾಲಿಕೆಯ ಎಲ್ಲಾ ವಕೀಲರಿಗೆ ಕಳುಹಿಸುತ್ತಾ ಪ್ರಕರಣಗಳಲ್ಲಿ ಕೂಡಲೇ ಸುತ್ತೋಲೆಯ ವಿಷಯದಲ್ಲಿ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

: ಕಾನೂನು ಕೋಶದ ಮುಖ್ಯಸ್ಥರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

: ಕಛೇರಿ ಪ್ರತಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ರವರ ಕಛೇರಿ, ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ಆವರಣ, ಎನ್. ಆರ್. ವೃತ್ತ, ಬೆಂಗಳೂರು

ಸಂಖ್ಯೆ:ಉ.ಆ.ಶಾ/ಪಿ ಎಸ್.ಆರ್/4686/15-16 ದಿನಾಂಕ: 21-07-2015

ಕಛೇರಿ ಆದೇಶ

ವಿಷಯ:- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರುವ ಖಾಲಿ ನಿವೇಶನಗಳಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡುವ ಕುರಿತು

ಉಲ್ಲೇಖ: ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಿಗಳನ್ನು ಚಲಾಯಿಸಿ ಆಡಳಿತಗಾರರ, ದಿನಾಂಕ: 16-07-2015 ರ ವಿಷಯದ ಸಂಖ್ಯೆ: 141/2015-16 ನಡವಳಿಗಳು

***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಘನತ್ಯಾಜ್ಯ ನಿರ್ವಹಣೆಯ ಕುರಿತು ಹಲವಾರು ಯೋಜನೆಗಳನ್ನು ಕೈಗೊಂಡಿದ್ದರೂ ಸಂಪೂರ್ಣವಾಗಿ ತ್ಯಾಜ್ಯವನ್ನು ಸಂಗ್ರಹಿಸಿ ಸಾಗಿಸಲು ಸಾಧ್ಯವಾಗಿರುವುದಿಲ್ಲ. ಮನೆಮನೆಯಿಂದ ತ್ಯಾಜ್ಯ ಸಂಗ್ರಹಣೆ ಮಾಡಿದರೂ ಕೂಡ ಕೆಲವೊಂದು ಪ್ರದೇಶಗಳ ಖಾಲಿ ನಿವೇಶನಗಳಲ್ಲಿ ತ್ಯಾಜ್ಯ, ಕಟ್ಟಡ ಭಗ್ನಾವಶೇಷಗಳನ್ನು ಬಿಸಾಡಿರುವುದು ಕಂಡುಬಂದಿರುತ್ತದೆ. ಬಹುತೇಕವಾಗಿ ಇಂತಹ ನಿವೇಶನಗಳು ಗಿಡಗಂಟೆಗಳಿಂದ ಕೂಡಿ ನಿವೇಶನದ ಮಾಲೀಕರ ನಿರ್ಲಕ್ಷ್ಯದಿಂದ ಚಿಕ್ಕ ತ್ಯಾಜ್ಯ ಶೇಖರಣಾ ಸ್ಥಳಗಳಾಗಿ ಬದಲಾವಣೆಗೊಳ್ಳುತ್ತಿದೆ. ಖಾಲಿ ನಿವೇಶನಗಳ ಮಾಲೀಕರು ನಿವೇಶನಗಳನ್ನು ಸ್ವಚ್ಛವಾಗಿಡದೇ ತ್ಯಾಜ್ಯವನ್ನು ಸಂಗ್ರಹಗೊಳ್ಳುತ್ತಿರುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ತೊಂದರೆ ಹಾಗೂ ನಗರ ಸೌಂದರ್ಯಕ್ಕೆ ಕೂಡ ಹಾನಿ ಉಂಟಾಗುತ್ತಿರುತ್ತದೆ. ಇಂತಹ ಖಾಲಿ ನಿವೇಶನಗಳನ್ನು ಗುರುತಿಸಿ ಸದರಿ ನಿವೇಶನಗಳ ಮಾಲೀಕರ ಮೇಲೆ ಸೂಕ್ತ ಕ್ರಮಕೈಗೊಳ್ಳುವ ಅವಶ್ಯವಿರುತ್ತದೆ. ಅದರಂತೆ ಖಾಲಿ ನಿವೇಶನಗಳ ಸ್ವಚ್ಛತೆ ಕಾಪಾಡಲು ಈ ಹಿಂದೆ ಸುತ್ತೋಲೆ ಸಂಖ್ಯೆ: ಉ.ಆ(ಕಂ)ಪಿ.ಆರ್/112/02-03, ದಿನಾಂಕ: 07-01-2003ರಲ್ಲಿ ಹಾಗೂ ಸುತ್ತೋಲೆ ಸಂಖ್ಯೆ: ಉ.ಆ(ಕಂ)ಪಿ.ಆರ್/296/10-11, ದಿನಾಂಕ: 07-06-2010 ರಲ್ಲಿ ಹೊರಡಿಸಲಾಗಿದ್ದರೂ ಸಹ ಸಮರ್ಪಕವಾಗಿ ಅನುಷ್ಠಾನಗೊಳಿಸಿರುವುದಿಲ್ಲ.

ಆದುದರಿಂದ ಖಾಲಿ ನಿವೇಶನಗಳಲ್ಲಿ ಸ್ವಚ್ಛತೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ರ ನಿಯಮ 463 ರ ಅಡಿಯಲ್ಲಿ ಹಾಗೂ ನಿಯಮ 256 ಮತ್ತು 257ರ ಅನ್ವಯ ಕಸ ಮತ್ತು ಹೊಲಸಿನ ಶೇಖರಣೆ ಬಗ್ಗೆ ಆಯುಕ್ತರು ರವರು ಸಾರ್ವಜನಿಕ ನೋಟೀಸ್‌ನ ಮೂಲಕ ನೋಟೀಸ್‌ನಲ್ಲಿ ನಿರ್ದಿಷ್ಟ ಪಡಿಸಿದ ಯಾವುದೇ ಬೀದಿ ಅಥವಾ ಆವರಣದಲ್ಲಿ ರಾಶಿಗೂಡುವ ಎಲ್ಲಾ ಕಸ ಮತ್ತು ಹೊಲಸನ್ನು ಅಂತಹ ಆವರಣದ ಮಾಲೀಕರು ಸಂಗ್ರಹಿಸಿ ಶೇಖರಿಸಿ ಸಾಗಿಸಲು ನೋಟೀಸ್‌ನಲ್ಲಿ ಅಗತ್ಯ ಪಡಿಸಬಹುದಾಗಿದ್ದು, ಅಥವಾ ಮಾಲೀಕರಿಗೆ ನೋಟೀಸ್ ಜಾರಿ ಮಾಡಿ ತರುವಾಯ ಅಂತಹ ಆವರಣದಲ್ಲಿ ರಾಶಿಗೂಡಿದ ಎಲ್ಲಾ ಕಸ ಮತ್ತು ಹೊಲಸನ್ನು ತೆಗೆದು ಹಾಕುವುದಕ್ಕಾಗಿ ನಿವೇಶನದ ಮಾಲೀಕರಿಗೆ ಸ್ಥಾಯಿ ಸಮಿತಿ ಮಂಜೂರಾತಿಯೊಂದಿಗೆ ನಿಯತಕಾಲಿಕ ಶುಲ್ಕವನ್ನು ವಿಧಿಸಬಹುದಾಗಿರುತ್ತದೆ.

ಸದರಿ ಅಧಿಕಾರವನ್ನು ವಲಯಗಳ ಆಯಾ ವಾರ್ಡಿನ ಸಹಾಯಕ ಅಭಿಯಂತರರು, ಆರೋಗ್ಯ ಪರಿವೀಕ್ಷಕರಿಗೆ ಅಧಿಕಾರ ಪ್ರತಿನಿಯೋಜನೆ ನೀಡಿ, ಖಾಲಿ ನಿವೇಶನದ ಮಾಲೀಕರು ನಿವೇಶನದ ಸ್ವಚ್ಛತೆಯನ್ನು ಕಾಪಾಡುವಲ್ಲಿ ವಿಫಲರಾದಲ್ಲಿ ಅಂತಹ ಮಾಲೀಕರಿಗೆ ಒಂದು ವಾರದೊಳಗೆ ಸ್ವಚ್ಛಗೊಳಿಸುವಂತೆ ನೋಟೀಸ್ ಜಾರಿ ಮಾಡುವುದು. ಮಾಲೀಕರ ವಿಳಾಸ ಗುರುತಿಸಲಾಗದ ಸಂದರ್ಭದಲ್ಲಿ ನಿವೇಶನದಲ್ಲಿ ನೋಟೀಸ್ ಜಾರಿಗೊಳಿಸಿರುವ ಫಲಕವನ್ನು ಪ್ರದರ್ಶಿಸುವುದು. ಒಂದು ವಾರದ ಕಾಲಾಮಿತಿಯಲ್ಲಿ ಸ್ವಚ್ಛಗೊಳಿಸದೇ ಇರುವ ಸಂದರ್ಭದಲ್ಲಿ ಆ ನಿವೇಶನದಲ್ಲಿರುವ ಗಿಡಗಂಟೆಗಳನ್ನು ಕಿತ್ತು ಹಾಕಿ ಅಲ್ಲಿ ಶೇಖರಿಸಿರುವ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಸದರಿ ಕಾರ್ಯವನ್ನು ಕೈಗೊಳ್ಳುವ ಸಂಧರ್ಬಗಳಲ್ಲಿ ಅಗತ್ಯವಾದ ಮಾರ್ಗಸೂಚಿಗಳು ಮತ್ತು ಚಾಲ್ತಿಯಲ್ಲಿರುವ ಘನತ್ಯಾಜ್ಯ ನಿರ್ವಹಣೆಯ ಟೆಂಡರ್ ಷರತ್ತುಗಳನ್ನು ಪಾಲಿಸತಕ್ಕದ್ದು. ಸದರಿ ಕಾರ್ಯನಿರ್ವಹಿಸಿರುವುದಕ್ಕೆ ನಿಖರ ದಾಖಲಾತಿಗಳನ್ನು (ಛಾಯಾಚಿತ್ರಗಳು) ಹೊಂದಿರಬೇಕು. ಇಂತಹ ಸ್ವಚ್ಛತೆ ಮತ್ತು ವಿಲೇವಾರಿಗಾಗಿ ಪ್ರತಿ ಚ. ಅಡಿ ಗೆ ರೂ.2.00 ಶುಲ್ಕವನ್ನು ವಿಧಿಸುವುದು. ಸ್ವಚ್ಛತೆ ಕೈಗೊಂಡು ನಿವೇಶನಗಳನ್ನು ನಿಯತಕಾಲಿಕ ಪರಿವೀಕ್ಷಿಸಿ ಪುನಃ ಆ ಸ್ವತ್ತುಗಳಲ್ಲಿ ತ್ಯಾಜ್ಯ ಶೇಖರಣೆಗೊಂಡಿದಲ್ಲಿ ಪುನಃ ಸ್ವಚ್ಛಗೊಳಿಸಿ ರೂ.2.00 ಚ. ಅಡಿಗೆ ಶುಲ್ಕ ವಿಧಿಸುವುದು. ಸದರಿ ಮೊತ್ತವನ್ನು ಮಾಲಿಕರು ಸಂದಾಯ ಮಾಡದೇ ಇದ್ದ ಪಕ್ಷದಲ್ಲಿ ಆಸ್ತಿ ತೆರಿಗೆ ಮೂಲಕ ವಸೂಲಿ ಮಾಡಲು ಆಯಾ ವಾರ್ಡ್‌ನ ಕಂದಾಯ ಅಧಿಕಾರಿಗಳಿಗೆ ಸೂಚಿಸುವುದು. ಕಂದಾಯ ಅಧಿಕಾರಿಗಳು ಸದರಿ ಮೊತ್ತವನ್ನು ಆಸ್ತಿ ತೆರಿಗೆ ಮೂಲಕ ವಸೂಲಿ ಮಾಡುವಂತೆ ಆದೇಶಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರವರಿಗೆ,
ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರು (ಪೂರ್ವ, ಪಶ್ಚಿಮ, ದಕ್ಷಿಣ, ಆರ್.ಆರ್ ನಗರ, ದಾಸರಹಳ್ಳಿ, ಬೊಮ್ಮನಹಳ್ಳಿ, ಮಹದೇವಪುರ ಮತ್ತು ಯಲಹಂಕ)

ಪ್ರತಿಯನ್ನು,
- ಮಾನ್ಯ ಆಡಳಿತಾಗಾರರ ಗಮನಕ್ಕೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
- ವಿಶೇಷ ಆಯುಕ್ತರು (ಘ.ತ್ಯಾ.ನಿ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
- ಜಂಟಿ ಆಯುಕ್ತರು (ಆ & ಘ.ತ್ಯಾ.ನಿ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
- ಕಛೇರಿ ಪ್ರತಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:

ಅಪರ/ಜಂಟಿ ಆಯುಕ್ತರು ರವರ ಕಛೇರಿ,
_________ ವಲಯ,
ಬೆಂಗಳೂರು, ದಿನಾಂಕ: ______.

ಕೆಎಂಸಿ ಕಾಯ್ದೆ ಕಲಂ 257ರಡಿ ಹೊರಡಿಸಿದ ನೋಟೀಸು

ಗೆ,
ಸ್ವತ್ತಿನ ಮಾಲೀಕರು,
____
____

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: _____ ಸ್ವತ್ತಿನ/ಪಿ.ಐ.ಡಿ ಸಂಖ್ಯೆ: _____ ಬೆಂಗಳೂರು, ಖಾಲಿ ಸ್ವತ್ತಿನಲ್ಲಿ ಕಟ್ಟಡ ಭಗ್ನಾವಶೇಷಗಳನ್ನು/ಗಿಡಗಂಟೆ/ಕಸ ಇನ್ನಿತರೇ ಅನುಪಯುಕ್ತ ವಸ್ತುಗಳು ಮತ್ತು ಗಲೀಜು ಶೇಖರಣೆಯಾಗಿದ್ದು/ಸುಗಮ ಸಂಚಾರಕ್ಕೆ ಅಡ್ಡಿಯುಂಟು ಮಾಡುವಂತೆ ಬೇಲಿ ಬೆಳೆದಿರುವುದು ದಿನಾಂಕ: ___ರ ಸ್ಥಳ ಪರಿವೀಕ್ಷಣೆಯಿಂದ ದೃಢಪಟ್ಟಿದೆ.

ಮೇಲ್ಕಂಡ ಉಲ್ಲಂಘನೆಯಿಂದ ನಗರದಲ್ಲಿ ಸಾಂಕ್ರಾಮಿಕ ರೋಗಗಳು ಹರಡಲು ಕಾರಣವಾಗಿರುತ್ತದೆ. ಈ ರೀತಿಯ ನಡುವಳಿಕೆ ಕೆಎಂಸಿ ಕಾಯ್ದೆಯ ಕಲಂ 257ರಡಿ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ತಮ್ಮ ವಿರುದ್ಧ ಕೆಎಂಸಿ ಕಾಯ್ದೆ ಕಲಂ 431 ರಡಿಯಲ್ಲಿ ದಂಡವನ್ನು ವಿಧಿಸಲು ಹಾಗೂ ಕ್ರಿಮಿನಲ್ ಸ್ವರೂಪದ ದೂರನ್ನು ನೀಡಬಹುದಾಗಿದೆ.

ಮೇಲಿನ ಅಡೆತಡೆಯನ್ನು ಈ ನೋಟೀಸು ತಲುಪಿದ 3 ದಿನಗಳೊಳಗಾಗಿ ತೆರವುಗೊಳಿಸುವುದು. ತಪ್ಪಿದಲ್ಲಿ ಸೂಕ್ತ ದೂರನ್ನು ದಾಖಲಿಸುವುದಲ್ಲದೆ ನಿವೇಶನವನ್ನು ಪಾಲಿಕೆ ವತಿಯಿಂದ ಸ್ವಚ್ಛಗೊಳಿಸಲಾಗುವುದು. ಇದರ ಬಾಬ್ತು ಕಲಂ 257(2)ರಡಿ ನಿಗದಿಪಡಿಸಿದ ಶುಲ್ಕವಾದ ನಿವೇಶನದ ವಿಸ್ತೀರ್ಣಕ್ಕೆ ಪ್ರತಿ ಚದರ ಅಡಿಗೆ ರೂ.2.00 ರಂತೆ ತೆರವು ಖರ್ಚಿನ ಹಣವನ್ನು ಒಂದು ವಾರದೊಳಗಾಗಿ ಆಯುಕ್ತರು, ಬಿಬಿಎಂಪಿ ರವರ ಖಾತೆಗೆ ಸಂದಾಯ ಮಾಡಿದ ರಶೀದಿ ನೀಡತಕ್ಕದ್ದು.

ತಪ್ಪಿದಲ್ಲಿ ಸದರಿ ಮೊತ್ತವನ್ನು ಕಲಂ 470ರಡಿ ನಿಮ್ಮಿಂದ ವಸೂಲಾಗುವ ಆಸ್ತಿ ತೆರಿಗೆ ಹಣದಲ್ಲಿ ಹೆಚ್ಚುವರಿಯಾಗಿ ಸೇರಿಸಿ ನಿಮ್ಮಿಂದ ವಸೂಲಿ ಮಾಡಲು ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.

ಜಂಟಿ ಆಯುಕ್ತರು (   ) ವಲಯ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಪರ/ಜಂಟಿ ಆಯುಕ್ತರು ರವರ ಕಛೇರಿ,

ಸಂಖ್ಯೆ:

__________ ವಲಯ,

ಬೆಂಗಳೂರು, ದಿನಾಂಕ: ______.

ಗೆ,

ಸ್ವತ್ತಿನ ಮಾಲೀಕರು,

____

____

ಕೆಎಂಸಿ ಕಾಯ್ದೆ ಕಲಂ 257 ರಡಿ ಹೊರಡಿಸಿದ ಆದೇಶ

ಉಲ್ಲೇಖ: ಈ ಕಛೇರಿಯಿಂದ ಕೆ.ಎಂ.ಸಿ. ಕಾಯ್ದೆ ಕಲಂ 257ರಡಿ ದಿನಾಂಕ ___ ರ ನೋಟೀಸು

* * * * *

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:____ ಸ್ವತ್ತಿನ/ಪಿ.ಐ.ಡಿ. ಸಂಖ್ಯೆ: ____ ಬೆಂಗಳೂರು. ಖಾಲಿ/ಸ್ವತ್ತಿನಲ್ಲಿ ಕಟ್ಟಡ ಭಗ್ನಾವಶೇಷಗಳನ್ನು/ಗಿಡಗಂಟೆ/ಕಸ ಮತ್ತು ಹೊಲಸಿನ ಶೇಖರಣೆಯನ್ನು ಮಾಡಿದ್ದು/ಸುಗಮ ಸಂಚಾರಕ್ಕೆ ಅಡ್ಡಿಯುಂಟು ಮಾಡುವಂತೆ ಬೇಲಿ ಬೆಳೆಸಿರುವುದು/ಶೇಖರಣೆಗೊಂಡಿರುವುದು ಸ್ಥಳ ಪರಿವೀಕ್ಷಣೆಯಿಂದ ದೃಢಪಟ್ಟಿರುತ್ತದೆ.

ಈಗಾಗಲೇ ಈ ಕಛೇರಿಯ ನೋಟೀಸು ದಿನಾಂಕ:____ರಂತೆ ಮೇಲ್ಕಂಡ ಸ್ವರೂಪದ ಅಡೆತಡೆಯನ್ನು 3 ದಿನಗಳೊಳಗಾಗಿ ತೆರವುಗೊಳಿಸಲು ಸೂಚಿಸಲಾಗಿಯೂ ತಾವು ಯಾವುದೇ ರೀತಿಯ ಕ್ರಮಕೈಗೊಂಡಿರುವುದಿಲ್ಲ.

ಮೇಲ್ಕಂಡ ಉಲ್ಲಂಘನೆಯಿಂದ ನಗರ ಸೌಂದರ್ಯ ಹಾಳಾಗುವುದರೊಂದಿಗೆ ಸಾಂಕ್ರಾಮಿಕ ರೋಗಗಳು ಹರಡಲು ಕಾರಣವಾಗಿರುತ್ತದೆ. ಈ ರೀತಿಯ ಉಲ್ಲಂಘನೆಯು ಕೆಎಂಸಿ ಕಾಯ್ದೆ ಕಲಂ 257ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ ಮೇಲಿನ ಕಾನೂನು ಬಾಹೀರ ಅಡೆತಡೆಗಳನ್ನು ತೆರವುಗೊಳಿಸಲು ವಿಫಲವಾಗಿರುವುದಾಗಿ ದೃಢಪಟ್ಟಿರುತ್ತದೆ.

ಆದೇಶ

ಮೇಲಿನ ಅಡೆತಡೆಯನ್ನು ತೆರವುಗೊಳಿಸಲು ವಿಫಲರಾಗಿರುವ ನಿಮ್ಮ ವಿರುದ್ಧ ಕೆಎಂಸಿ ಕಾಯ್ದೆ ಅಡಿ ಆಯುಕ್ತರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸದರಿ ಅಡೆತಡೆಯನ್ನು ಪಾಲಿಕೆಯು ತೆರವುಗೊಳಿಸಲು ಪಾಲಿಕೆಗೆ ತಗುಲಿದ ಖರ್ಚನ್ನು ಕಲಂ 257(2)ರಡಿ ನಿಗದಿಪಡಿಸಿದ ಶುಲ್ಕವಾದ ನಿವೇಶನದ ವಿಸ್ತೀರ್ಣಕ್ಕೆ ಪ್ರತಿ ಚದರ ಅಡಿಗೆ ರೂ.2 ರಂತೆ ಒಟ್ಟು ರೂ. ____/- ಗಳ ಶುಲ್ಕವನ್ನು ವಸೂಲಿ ಮಾಡಲು ____ ವಿಭಾಗದ ಕಂದಾಯ ಅಧಿಕಾರಿಗೆ ನಿರ್ದೇಶಿಸಿದೆ.

ಜಂಟಿ ಆಯುಕ್ತರು (   ) ವಲಯ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಪ್ರತಿಯನ್ನು: ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

: ಸಂಬಂಧಪಟ್ಟ ಅಭಿಯಂತರರಿಗೆ ಸ್ವತ್ತಿನ ಮಾಲೀಕರ ವಿರುದ್ಧ ದೂರು ದಾಖಲಿಸಲು ಕಳುಹಿಸಿದೆ.

1923/09

ಕರ್ನಾಟಕ ಸರ್ಕಾರ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ ಕೋಶ)

ಸಿಆಸುಇ 115 ಆರ್‌ಟಿಐ 2009

ಕರ್ನಾಟಕ ಸರ್ಕಾರದ ಸಚಿವಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
ದಿನಾಂಕ: 03-08-2009

ಸುತ್ತೋಲೆ

ವಿಷಯ:- ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಧೃಡೀಕೃತ ಪ್ರತಿ ನೀಡುವ ಬಗ್ಗೆ.

- - -

ದಿನಾಂಕ 27-06-2009ರಂದು ಮಾಹಿತಿ ಹಕ್ಕು ಅಧಿನಿಯಮ 2005ರ ಸಮಗ್ರ ಅನುಷ್ಠಾನ ಕುರಿತಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಕ್ರಿಯಾಕಟ್ಟೆಯ ಪದಾಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಸಂಘದ ಪದಾಧಿಕಾರಿಗಳು, ಮಾಹಿತಿ ಹಕ್ಕು ಅಧಿನಿಯಮ 2005ರಡಿಯಲ್ಲಿ ಮಾಹಿತಿ ಕೋರಿರುವ ಅರ್ಜಿಗಳಿಗೆ ಮಾಹಿತಿಯನ್ನು ನೀಡುವಾಗ ಕೆಲವು ಸಾರ್ವಜನಿಕ ಮಾಹಿತಿ ಅಧಿಕಾರಿಗಳು "ಈ ಪ್ರತಿಯನ್ನು ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ನೀಡಲಾಗಿದ್ದು ಇತರೆ ಯಾವುದೇ ದಾಖಲಾತಿಗೆ ಬಳಸತಕ್ಕದ್ದಲ್ಲ" ಹಾಗೂ "Certified Copy under RTI Act" ಎಂದು ಧೃಡೀಕರಿಸಿ ನೀಡಿರುವುದನ್ನು ಹಾಗೂ ಧೃಡೀಕೃತ ಪ್ರತಿಗಳ ಮೇಲೆ ಹಲವಾರು ಸಲ ಮೊಹರನ್ನು ಒತ್ತಿ ಧೃಡೀಕೃತ ಪ್ರತಿಯನ್ನು ವಿರೂಪಗೊಳಿಸಿರುವುದನ್ನು ಸಭೆಯ ಗಮನಕ್ಕೆ ತಂದಿರುವರು.

ಇನ್ನುಮುಂದೆ ಸಾರ್ವಜನಿಕರು ಮಾಹಿತಿ ಹಕ್ಕು ಅಧಿನಿಯಮ 2005ರಡಿಯಲ್ಲಿ ಮಾಹಿತಿ ಕೋರಿ ಸಲ್ಲಿಸಿದ ಅರ್ಜಿಗಳಿಗೆ ಮಾಹಿತಿ ನೀಡುವಾಗ ಮಾಹಿತಿಯು ಪಾರದರ್ಶಕವಾಗಿರತಕ್ಕದ್ದೆಂದು ಮತ್ತು ಧೃಡೀಕೃತ ಪ್ರತಿಗಳನ್ನು ಸಾಮಾನ್ಯ ಕಚೇರಿ ಮೊಹರಿನ ಮೂಲಕವೇ ಧೃಡೀಕರಿಸತಕ್ಕದ್ದೆಂದು ತಮ್ಮ ಆಡಳಿತಾಧೀನಕ್ಕೊಳಪಡುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳಿಗೆ, ಇಲಾಖಾ ಮುಖ್ಯಸ್ಥರುಗಳಿಗೆ, ನಿಗಮ/ಮಂಡಳಿಗಳಿಗೆ, ಸರ್ಕಾರಿ ಸ್ವಾಮ್ಯದ ಸಂಘ/ಸಂಸ್ಥೆಗಳಿಗೆ ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಸೂಚಿಸಲಾಗಿದೆ.

(ಬಿ. ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಜನಸ್ಪಂದನ ಕೋಶ-ಮಾಹಿತಿ ಹಕ್ಕು)

ಗೆ,
ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.

ಪ್ರತಿ ಮಾಹಿತಿಗಾಗಿ:

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.

..2/-

DPA 4 3243 ASU 09
1/9/09

KARNATAKA INFORMATION COMMISSION

KIC 96 APL 06

(7)

Ravindranath Guru /Vs/ PIO & E.E.,BMP B'lore

ORDER

23-05-2006

Appellant is present. On behalf of the Respondent Sri Mruthyunjaya, Superintending Engineer, B.M.P. and Sri D.V.Ananda, Assistant Executive Engineer are present. The respondent says that the desired information was sent to the Appellant on 16-05-06, which was received by the Respondent on 18-05-06. The Respondent is satisfied with the information received, but he represents to the Commission that this information has been supplied to him after 5 months and he has been put to considerable inconvenience. Further, the respondent has also asked him to pay Rs.100/- as cost of information.

2. Since the information has been supplied after lapse of 30 days no amount is payable by the Appellant. Further, during the oral arguments it was clearly brought out that the Bangalore Mahanagara Palike is not fully geared up to deal with large number of applications being received by them under the R.T.I.Act and these are not being processed properly. There have been several cases of long delays and in future the Commission may have no option but levy penalties on the SPIOs of the Commission. In view of the above, the Commission in exercise of its powers vested under section 19(8)(a) of the Act, requires the Bangalore Mahanagara Palike to set up a separate computerised cell to receive and monitor all the applications under the Right to Information Act. The Cell may work under one of the PIOs and act as a Central registry for all requests to Bangalore Mahanagara Palike under R.T.I.Act. On receipt of an application the call shall take immediate necessary action to either pass on the request for information to the concerned Officer who has the information or if the information is not available at one place to collect the information from various officers by invoking the provisions of Sections 5(4) and 5(5) of R.T.I.Act, to compile them and to make them available to the applicant within the stipulated time limits.

...2

3. The Bangalore Mahanagara Palike is also required to take immediate action to train its Senior Officers and specially the S.P.I.Os as regards the provisions of the R.T.I.Act so that they understand their responsibilities and respond to the requests made by the applicants at the earliest but within the time limits laid down in the Act.

4. The áppellant also pleaded that he was put to lot of inconvenience and incurred expenditure during this period in traveling to B.M.P.Office while his application was pending. The B.M.P. has neither disposed off his application nor his first appeal. Under the circumstances, the applicant can give a separate application seeking compensation from B.M.P. under the provisions of Section 19(8)(b) and the Commission would consider such a request on merits.

5. A copy of this order shall be sent to the Commissioner, B.M.P. by name for his taking necessary action in accordance with the directions and send a compliance report to the Commission within a month. The Appeal is posted to 03-0702006 for further hearing.

KARNATAKA INFORMATION COMMISSION

(K.A.THIPPESWAMY)
State Information Commissioner

(K.K.MISRA)
State Chief Information Commissioner

(8)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂ:ಬಿ12(5ಜಿ)ಪಿಆರ್/43/10-11

ಆಯುಕ್ತರವರ ಕಛೇರಿ
ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ:12-01-11

ಕಛೇರಿ ಆದೇಶ

ವಿಷಯ: ಶ್ರೀ ಬಿ. ಶಂಕರಪ್ಪ, ಜಂಟಿ ನಿರ್ದೇಶಕರು (ಸಾಂಖ್ಯಿಕ) ಇವರನ್ನು ನೋಡಲ್ ಅಧಿಕಾರಿಯನ್ನಾಗಿ ಕಾರ್ಯನಿರ್ವಹಿಸಲು ನೇಮಿಸುವ ಬಗ್ಗೆ.

******

ಶ್ರೀ ಬಿ. ಶಂಕರಪ್ಪ ಜಂಟಿ ನಿರ್ದೇಶಕರು(ಸಾಂಖ್ಯಿಕ) ಆಗಿ ಕಾರ್ಯನಿರ್ವಹಿಸುತ್ತಿರುವ ಇವರನ್ನು ಮಾಹಿತಿ ಹಕ್ಕು ಕಾಯ್ದೆ 2005ರ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಕೆಲಸ ಕಾರ್ಯಗಳ ಜೊತೆಯಲ್ಲಿ ಮಾಹಿತಿ ಹಕ್ಕು ಕಾಯ್ದೆ 2005ರ ಸೆಕ್ಷನ್ 4(1)(ಬಿ)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಮತ್ತಿತರ ವಿವರಗಳನ್ನು ಪಾಲಿಕೆಯ ವೆಬ್ ಸೈಟ್‌ನಲ್ಲಿ ಅಳವಡಿಸಲು ಹಾಗೂ ಆಗಿಂದಾಗ್ಗೆ ಸದರಿ ಮಾಹಿತಿಗಳನ್ನು ಪರಿಷ್ಕರಿಸುವ (Review / update) ಕಾರ್ಯನಿರ್ವಹಿಸಲು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿದೆ.

12/1

ಮಾನ್ಯ ವಿಶೇಷ ಆಯುಕ್ತರು(ಯೋಜನೆ)
ರವರ ಆದೇಶದಂತೆ)

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

12/1/11

12/1/11

ಪ್ರತಿಯನ್ನು:-

: ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
: ಮಾನ್ಯ ಉಪಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
: ಮಾನ್ಯ ಆಯುಕ್ತರು / ಅಪರ ಆಯುಕ್ತರು(ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
: ರಾಜ್ಯ ಮುಖ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿ ಕಟ್ಟಡ, ಬೆಂಗಳೂರು ರವರಿಗೆ ಕಳುಹಿಸಿದೆ.
: ಜಂಟಿ ನಿರ್ದೇಶಕರು, (ಸಾಂಖ್ಯಿಕ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
: [illegible] ಅಪರ / ಜಂಟಿ ಆಯುಕರುಗಳಿಗೆ ಕಳುಹಿಸಿದೆ.

ಸಂಚಾಲಕರು _ 9844758629

ದೇವಗಿರಿ ನಗೆ ಯೋಗ ಕೂಟ

1. ಗ್ರೀಟಿಂಗ್ಸ್ - ಹೀ-ಹೀ ಲಾಫ್ಟರ್ - ವಿನ್ ವಿನ್ ಲಾಫ್ಟರ್
2. ಕ್ರೋಧ ನಿವಾರಣೆ - ಬಿಸಿಗಡ್ಡೆ ಕಲೆ - ಪ್ರಾರ್ಥನೆ
3. A.C.C. - ಅಭಿನಂದನೆ, ಚಾಂಟಿಂಗ್, ಚೈಲ್ಡ್‌ಲೈಕ್.
4. ಚಾರ್ಜಿಂಗ್ ಆಫ್ ಬ್ಯಾಟರಿ - 5 ಸಲ
5. ಚಾರ್ಜಿಂಗ್ ಆಫ್ ಶಾಂತಿ - ಶಾಂತಿ, ಶಾಂತಿ, ಶಾಂತಿ ಹೀ - 3 ಸಲ
6. ಸುಖ ಪ್ರಾಣಾಯಾಮ - ಸ್ವಾಭಾವಿಕವಾದ ಉಸಿರಾಟ

II ರೌಂಡ್

1. ಚಂದ್ರನಾಡಿ ಕಪಾಲಭಾತಿ - ಬ್ರೀತಿಂಗ್ ಔಟ್ ಫ್ರಮ್ ಲೆಫ್ಟ್ ನಾಸ್ಟ್ರಿಲ್
2. ಸೂರ್ಯನಾಡಿ ಕಪಾಲಭಾತಿ - ಬ್ರೀತಿಂಗ್ ಔಟ್ ಫ್ರಮ್ ರೈಟ್ ನಾಸ್ಟ್ರಿಲ್
3. ಪೂರ್ಣ ಕಪಾಲಭಾತಿ - ಬ್ರೀತಿಂಗ್ ಔಟ್ ಫ್ರಮ್ ಬೋತ್ ನಾಸ್ಟ್ರಿಲ್
4. ಧ್ಯಾನ ಪ್ರಾಣಾಯಾಮ - ಲಾಂಗ ಬ್ರೀತಿಂಗ
5. ಬಸ್ತ್ರಿಕ - ಬ್ರೀತಿನ್ ಇನ್ ಬ್ರೀತ್ ಔಟ್ ರೈಸಿಂಗ ದ ಹ್ಯಾಂಡ್
6. ಬಾಕ್ಸಿಂಗ್ - ಬ್ರೀತ್ ಔಟ್ ಬೋತ್ ಸೈಡ್ ಹ್ಯಾಂಡ್ ಮೂವ್‌ಮೆಂಟ್
7. ಚಂದ್ರನ ಲೋಮ, ಸೂರ್ಯನ ಲೋಮ, ಅನುಲೋಮ, ವಿಲೋಮ, (ನಾಡಿಶುದ್ಧ ಪ್ರಾಣಾಯಾಮ)

III ರೌಂಡ್

1. ಜೂಲ ಲಾಫ್ಟರ್ - ಹರ್, ಯಾ, ರಿಡಿ ಲಾಫ್ಟರ್ - ಹಾ-ಹಾ-ಹಾ
2. ಆಕ್ಷನ್ ಪ್ರಕರ - I ಹೇ, ಹೇ, ಹಾ, ಹಾ, ಹಾ. II ಬಿಸ್ಕೆಟ್ (ಸಿಂಹ)
3. ಜಾಗಿಂಗ್ - ನಮಸ್ಕಾರ (ಲೆಫ್ಟ್ ರೈಟ್ ಹ್ಯಾಂಡದಿಂದ ಚಪ್ಪಾಳೆ)
4. ಬ್ರೀತಿಂಗ್ - ಕೈಗಳ ಹ್ಯಾಂಡಲಿ ನಮಸ್ಕಾರ ಹಿಂದಕ್ಕೆ
5. ಹಸ್ತ ಪಾರ್ಶ್ವಾಸನ - ಸ್ಕೈ ಲಾಫ್ಟರ್ - ಬ್ಯಾಕ ಸೈಡ ಇಂಟರ್‌ಲಾಕ ದ ಫಿಂಗರ್ಸ್
6. ಬಟರ್‌ಫ್ಲೈ -
7. ಚೈನೀಸ್ ಲಾಫ್ಟರ್ - ಚಿರ ಚು. ಗೋ
8. ಕರೆಂಟ್ ಲಾಫ್ಟರ್ - ಟಚ್ ಆಗಿ ಲಾಫ್
9. ಗಾರಿ ಜಾಂಟಿಲ್ - 3 ಪಾರ್ಟ್ನರ್

IV ರೌಂಡ್ ಕಾಲಿಗೆ ವ್ಯಾಯಾಮ

1. ವೆಲ್‌ಕಮ್ ಲಾಫ್ಟರ್ - (೧) ಹಾ ಹಾ, (೨) ಹೀ ಹೀ, ಲಾಫ್, ವಾಹ್
2. ವೈಟ್ ಲಿಫ್ಟಿಂಗ - ಹಮ್ಮಿಂಗ್‌ನಲ್ಲಿ ಹಾ. ಹಾ. ಹಾ ಜೊತೆಯಲ್ಲಿ (ಸ್ಟ್ರೆಚ್)
3. ಪಾದ ಹಸ್ತಾಸನ -
4. ಚೋಲಿ ಕ್ವೀನ್ - 2 ಸೈಡ 4x4
5. ಅರ್ಧ ಕಟಿ ಚಕ್ರಾಸನ - ಸೈಡ ಬೆಂಡಿಂಗ್ ಮುಂದಕ್ಕೆ ಬಾಗುವುದು 2 ಸೈಡ ಚಿತ್ರಾಸನ
6. ತ್ರಿಕೋನಾಸನ - 4 ಕೌಂಟಿಂಗ್
7. ಮಿಕ್ಸ್ ಸ್ವಿಂಗ್ ಎಡಕ್ಕೆ ಬಲಕ್ಕೆ
8. ಕಟಿ ಚಕ್ರಾಸನ.
9. ಸೊಂಟ ತಿರುಗಿಸುವುದು (ರುಬ್ಬು)
10. ವಜ್ರಾಸನ ಬ್ರೀತಿಂಗ್ - ಧೀರ್ಘವಾಗಿ ಉಸಿರು ತೆಗೆದುಕೊಳ್ಳುವುದು - ಉಸಿರನ್ನು ಬಿಡುವುದು

ಕರ್ನಾಟಕ ಸರ್ಕಾರ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಜನಸ್ಪಂದನ ಕೋಶ)

ಸಂಖ್ಯೆ:ಸಿಆಸುಇ:175:ಆರ್‌ಟಿಐ:2009

3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಗೋಪುರ,
ಬೆಂಗಳೂರು. ದಿನಾಂಕ:03.12.2009

(೧)

ಸುತ್ತೋಲೆ

ವಿಷಯ : ಮಾಹಿತಿ ಹಕ್ಕು ಅಧಿನಿಯಮ 2005 ರ ಅನುಷ್ಠಾನ ಕುರಿತಂತೆ ರಚಿತವಾಗಿರುವ ಉನ್ನತ ಮಟ್ಟದ ಸಮಿತಿಯ ಎರಡನೇ ಸಭೆಯ ನಡವಳಿಯ ಮೇಲೆ ಕ್ರಮದ ಕುರಿತು.

ಉಲ್ಲೇಖ : ದಿ: 07.11.2009 ರ ಉನ್ನತ ಮಟ್ಟದ ಸಮಿತಿ ಸಭೆಯ ನಡವಳಿ.

ದಿನಾಂಕ :07.11.2009 ರಂದು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಮಾಹಿತಿ ಹಕ್ಕು ಅಧಿನಿಯಮ-2005ರ ಸಮಗ್ರ ಅನುಷ್ಠಾನ ಕುರಿತಂತೆ ರಚಿತವಾಗಿರುವ ಉನ್ನತ ಮಟ್ಟದ ಸಮಿತಿ ಸಭೆಯ ನಡವಳಿಯ ನಿರ್ಣಯ ಸಂಖ್ಯೆ 19 ರಲ್ಲಿ ನಿರ್ಧರಿಸಿರುವಂತೆ ಸಚಿವಾಲಯ ಇಲಾಖೆಗಳು ಹಾಗೂ ಆ ಇಲಾಖೆಗಳ ಅಧೀನಕ್ಕೊಳಪಡುವ ಸಾರ್ವಜನಿಕ ಪ್ರಾಧಿಕಾರಗಳು ಅಂದರೆ, ಕ್ಷೇತ್ರ ಇಲಾಖೆಗಳು/ನಿಗಮ ಮಂಡಳಿಗಳು, ಅನುದಾನಿತ ಸಂಘ ಸಂಸ್ಥೆಗಳು ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 4(1) (ಎ), 4(1) (ಬಿ), 5 ರ ಅನುಷ್ಠಾನ ಕುರಿತಂತೆ ಸಂಬಂಧಿಸಿದ ಮಾಹಿತಿಗಳನ್ನು ಹಾಗೂ ಸಾರ್ವಜನಿಕ ಪ್ರಾಧಿಕಾರ, ಮೊದಲ ಮೇಲ್ಮನವಿ ಪ್ರಾಧಿಕಾರ, ಸಾರ್ವಜನಿಕ ಮಾಹಿತಿ ಅಧಿಕಾರಿಗಳು/ಸಹಾಯಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ, ವಿಳಾಸ, ಕಛೇರಿ ದೂರವಾಣಿ ಸಂಖ್ಯೆ ಮುಂತಾದ ವಿವರಗಳನ್ನು ಪ್ರಕಟಿಸತಕ್ಕದ್ದು ಹಾಗೂ ತಪ್ಪದೇ ತಮ್ಮ ತಮ್ಮ ಇಲಾಖೆಗಳು ಹೊಂದಿರುವ ವೆಬ್‌ಸೈಟ್‌ನಲ್ಲಿ ಅಳವಡಿಸಿ. ಪ್ರತಿ ವರ್ಷ ಡಿಸೆಂಬರ್ ಮಾಹೆಯಲ್ಲಿ ಕಾಲಕಾಲಕ್ಕೆ up-date ಮಾಡುವಂತ ಹಾಗೂ ಈ ಪ್ರಕ್ರಿಯೆಯ ಅನುಷ್ಠಾನದಲ್ಲಿ ವಿಳಂಬ/ ಬೇಜವಾಬ್ದಾರಿ/ಉದಾಸೀನತೆ ತೋರಿಸುವ ಅಧಿಕಾರಿ/ನೌಕರರನ್ನು ಗುರುತಿಸಿ ಅವರನ್ನೇ ಹೊಣೆಗಾರರನ್ನಾಗಿಸತಕ್ಕದ್ದೆಂದು ಸೂಚಿಸಿದೆ ಮತ್ತು ಈ ಕಾರ್ಯಕ್ಕಾಗಿ ಎನ್‌ಐಸಿಯ (ರಾಷ್ಟ್ರೀಯ ಮಾಹಿತಿ ಕೇಂದ್ರದ) ಸಹಾಯವನ್ನು ಪಡೆಯುವಂತೆ ಸೂಚಿಸಲಾಗಿದೆ ಹಾಗೂ ಈ ಎಲ್ಲಾ ಕಾರ್ಯಕ್ಕಾಗಿ ಸಚಿವಾಲಯದ ಪ್ರತಿಯೊಂದು ಇಲಾಖೆಗಳು ಉಪ ಕಾರ್ಯದರ್ಶಿ ಅಥವಾ ಉಪ ಕಾರ್ಯದರ್ಶಿಯವರಿಗಿಂತ ಮೇಲ್ಪಟ್ಟ ಅಧಿಕಾರಿಗಳನ್ನು ಇಲಾಖೆಯ Nodal Officer ಆಗಿ ನೇಮಿಸಿ ವರದಿಯನ್ನು ಸಿಆಸುಇ (ಜನಸ್ಪಂದನ)ಕ್ಕೆ ಕೂಡಲೇ ನೀಡುವಂತೆ ಸೂಚಿಸಲಾಗಿದೆ.

ನಡವಳಿಯ ನಿರ್ಣಯ ಸಂಖ್ಯೆ 21ರಲ್ಲಿ ನಿರ್ಧರಿಸಿರುವಂತೆ ಕಂದಾಯ ಇಲಾಖೆಯ ಎಲ್ಲಾ ಖಾಯಂ ದಾಖಲೆಗಳನ್ನು laminate ಮಾಡಿಸಬೇಕು ಮತ್ತು ಕಂದಾಯ ಇಲಾಖೆಯಲ್ಲಿರುವ ಎಲ್ಲಾ ದಾಖಲೆಗಳ ಪಟ್ಟಿಯನ್ನು ಕಡ್ಡಾಯವಾಗಿ ವೆಬ್‌ಸೈಟ್‌ನಲ್ಲಿ ಪ್ರಕಟ ಪಡಿಸಬೇಕು ಎಂದು ಸೂಚಿಸಲಾಗಿದೆ.

--2

ಕಂಡಿಕೆ 23ರಲ್ಲಿ ಸೂಚಿಸಿದಂತೆ ಮಾಹಿತಿ ಹಕ್ಕು ಅಧಿನಿಯಮ 2005ರಡಿ ಅರ್ಜಿದಾರರು ಅರ್ಜಿಗಳೊಂದಿಗೆ ಸಲ್ಲಿಸುವ ಪೋಸ್ಟಲ್ ಆರ್ಡರ್‌ಗಳಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿವರಗಳನ್ನು ನಮೂದಿಸದೇ ಇದ್ದರೂ ಸಹ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಅಂತಹ ಅರ್ಜಗಳನ್ನು ಸ್ವೀಕರಿಸಿ ಮಾಹಿತಿ ನೀಡುವಂತೆ ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಯು ಸೂಕ್ತ ನಮೂದುಗಳನ್ನು ದಾಖಲಿಸುವಂತೆಯೂ ಸೂಚಿಸಲಾಗಿದೆ.

ಈ ವಿಷಯವನ್ನು ತಮ್ಮ ಅಧೀನದಲ್ಲಿ ಬರುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರಿಗಳ, ಇಲಾಖಾ ಮುಖ್ಯಸ್ಥರುಗಳ ನಿಗಮ/ಮಂಡಳಿಗಳ, ಅನುದಾನಿತ ಸಂಘ ಸಂಸ್ಥೆಗಳ ಗಮನಕ್ಕೆ ತರುವಂತೆಯೂ ಸೂಚಿಸಿದೆ.

Despatched on 1-1-10

(ಎನ್.ಆರ್.ಜಗನ್ನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ ಕೋಶ-ಮಾಹಿತಿ ಹಕ್ಕು)

ಗೆ,

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು
2. ಎಲ್ಲ ಜಿಲ್ಲಾಧಿಕಾರಿಗಳು.
3. ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
4. ಇಲಾಖಾ ಮುಖ್ಯಸ್ಥರುಗಳು

ಪ್ರತಿ:

1) ಮಾನ್ಯ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3) ಮಾನ್ಯ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4) ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರ ಕಛೇರಿ, ನರಸಿಂಹರಾಜ ವೃತ್ತ, ಬೆಂಗಳೂರು-560002.

PSR(G)

ಸಂ.ಬೃ.ಬೆಂ.ಮ.ನ.ಪಾ/5697/2009-10. ದಿನಾಂಕ: 10-11-2009

"ಸುತ್ತೋಲೆ"

ವಿಷಯ:- ಉದ್ದಿಮೆ ಪರವಾನಗಿ ಮಂಜೂರು ಮಾಡುವ ಬಗ್ಗೆ ಪರಿಷ್ಕೃತ ಮಾರ್ಗಸೂಚಿ ಕುರಿತು.

ಉಲ್ಲೇಖ:-
1. ಈ ಕಛೇರಿಯ ಸುತ್ತೋಲೆ ಸಂ:ಬಿ12(5 ಹೆಚ್)ಪಿಆರ್/06 2007-08 ದಿನಾಂಕ:19-08-2008
2. ಸರ್ಕಾರದ ಪತ್ರದ ಸಂಖ್ಯೆ:ನಇ181 MNY 2008. ದಿನಾಂಕ:21-07-2008.
3. ಸರ್ಕಾರದ ಅಧಿಸೂಚನೆ ಸಂಖ್ಯೆ:ನಇ 220/ಎಂ.ಎಸ್.ಯು/2006(ಪಿ) ದಿನಾಂಕ:12-01-2008.
4. ಸರ್ಕಾರದ ಆದೇಶದ ಸಂಖ್ಯೆ:ಶಾ.ಇ.29/ಶಾಸನ/2008. ದಿನಾಂಕ:05-03-2008.

****

ಉಲ್ಲೇಖ (1)ರ ಸುತ್ತೋಲೆಯಲ್ಲಿ ಉದ್ದಿಮೆ ಪರವಾನಗಿ (Trade License) ಮಂಜೂರು ನೀಡುವಾಗ ಕಟ್ಟಡಗಳಿಗೆ ಸಕ್ಷಮ ಪ್ರಾಧಿಕಾರದಿಂದ ಸ್ವಾಧೀನ ಪ್ರಮಾಣ ಪತ್ರ [Occupancy Certificate (OC)] ನೀಡಲಾಗಿರುವ ಬಗ್ಗೆ ಖಚಿತಪಡಿಸಿಕೊಂಡು ಪರವಾನಗಿ ನೀಡಬೇಕೆಂಬ ಸೂಚನೆಯನ್ನು ನೀಡಲಾಗಿತ್ತು. ಅದರಂತೆ ಕ್ರಮವಹಿಸುತ್ತಿರುವುದರ ಪರಿಣಾಮವಾಗಿ ಬಹುಪಾಲು ವ್ಯಾಪಾರ ಮತ್ತು ಉದ್ದಿಮೆದಾರರು ಉದ್ದಿಮೆ ಪರವಾನಗಿ ಪಡೆಯಲು ಸಾಧ್ಯವಾಗದೆ ಅದರ ವ್ಯಾಪ್ತಿಯಿಂದ ಹೊರಗುಳಿಯುತ್ತಿರುವುದು ಕಂಡುಬರುತ್ತಿದೆ. ವಿಶೇಷವಾಗಿ ಹೊಸದಾಗಿ ಪಾಲಿಕೆ ವ್ಯಾಪ್ತಿಗೆ ಸೇರ್ಪಡೆಯಾದ 5 ಹೊಸ/ಹೊರ ವಲಯಗಳಲ್ಲಿ ಉದ್ದಿಮೆ ಪರವಾನಗಿ ನೀಡುವಿಕೆಯಲ್ಲಿ ಹಾಗೂ ಪಡೆಯುವಲ್ಲಿ ಅತ್ಯಂತ ಕಡಿಮೆ ಪ್ರಮಾಣ ಕಂಡುಬಂದಿರುತ್ತದೆ. ಈ ಹಿಂದೆ ಇದ್ದ ಪಂಚಾಯ್ತಿ, ಅಧಿಸೂಚಿತ ಪ್ರದೇಶ, ಪುರಸಭೆ ಮತ್ತು ನಗರ ಸಭೆಗಳಲ್ಲಿ ಕಟ್ಟಡಗಳಿಗೆ ಸ್ವಾಧೀನ ಪ್ರಮಾಣ ಪತ್ರ (OC) ನೀಡುವ ವ್ಯವಸ್ಥೆ ಇಲ್ಲದ ಕಾರಣ ಸದರಿ ಪ್ರದೇಶಗಳ ವ್ಯಾಪ್ತಿಯಲ್ಲಿರುವ ಹಾಗೂ ಖಾತೆ ಪಡೆದಿರುವ ಎಲ್ಲಾ ಕಟ್ಟಡಗಳು ಉದ್ದಿಮೆ ಪರವಾನಗಿ ಹೊಂದಲು ಅರ್ಹತೆ ಪಡೆಯುವುದಿಲ್ಲ. ಹಾಗೂ ಅಲ್ಲಿನ ಬಹುಪಾಲು ಕಟ್ಟಡಗಳು ಅನಧಿಕೃತವಾಗಿದ್ದು ಖಾಸಗಿ ಬಡಾವಣೆಗಳಲ್ಲಿ ಮತ್ತು ಕಂದಾಯ ನಿವೇಶನಗಳಲ್ಲಿ ಕಟ್ಟಡ ನಕ್ಷೆಯ ಮಂಜೂರಾತಿ ಪಡೆಯದೆ ನಿರ್ಮಾಣಗೊಂಡಿರುವ ಕಟ್ಟಡಗಳಾಗಿರುವುವಲ್ಲದೆ ಈಗಾಗಲೇ ಖಾತೆ ಹೊಂದಿರುವ ಕಟ್ಟಡಗಳಿಗೂ ಸ್ವಾಧೀನತಾ ಪ್ರಮಾಣ ಪತ್ರಗಳನ್ನು ಈ ಹಂತದಲ್ಲಿ ನೀಡಲು ಬರುತ್ತಿಲ್ಲ. ಅಂತಹ ಕಟ್ಟಡಗಳಲ್ಲಿ ಹಲವಾರು ವರ್ಷಗಳಿಂದ ಜನರು ವಾಸವಿರುವುದರ ಜೊತೆಗೆ ವಾಣಿಜ್ಯ ಉದ್ದಿಮೆಗಳನ್ನು ಸಹ ನಡೆಸುತ್ತಿರುವುದು ಕಂಡುಬಂದಿರುತ್ತದೆ. ಈ ಹಿಂದೆ ಇದ್ದ ಸ್ಥಳೀಯ ಸಂಸ್ಥೆಗಳು ಅಂತಹ ಕಟ್ಟಡಗಳಲ್ಲಿ ನಡೆಯುತ್ತಿದ್ದ ವ್ಯಾಪಾರ ಉದ್ದಿಮೆಗೆ ಹಲವಾರು ಪರವಾನಗಿಯನ್ನು ಸಹ ನೀಡಿರುತ್ತವೆ. ಈಗ ಇಂತಹ ಕಟ್ಟಡಗಳಿಗೂ ಸಹ ಸ್ವಾಧೀನತಾ ಪ್ರಮಾಣ ಪತ್ರದ ಅವಶ್ಯಕತೆಯಿದ್ದು ಅದನ್ನು ಪಡೆಯದ ಪಕ್ಷದಲ್ಲಿ ಅಂತಹ ಕಟ್ಟಡಗಳಲ್ಲಿ ನಡೆಸುತ್ತಿರುವ ವಾಣಿಜ್ಯ ಚಟುವಟಿಕೆಗಳಿಗೆ ಪರವಾನಗಿ ನೀಡಲು ಕಷ್ಟಸಾಧ್ಯವಾಗಿರುತ್ತದೆ. ಈ ಸುತ್ತೋಲೆಯ ಮಾರ್ಗಸೂಚಿಗಳಿಗೆ ಅನುಗುಣವಾಗಿ ಕ್ರಮ ವಹಿಸುವುದರಿಂದ ಬಿ.ಬಿ.ಎಂ.ಪಾಲಿಕೆಯ ಸಂಪನ್ಮೂಲದ ಮೇಲೆ ಪ್ರತಿಕೂಲ ಪರಿಣಾಮವನ್ನುಂಟುಮಾಡಿರುವುದು ಕಂಡುಬಂದಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಉಲ್ಲೇಖ(1)ರ ಸುತ್ತೋಲೆಯನ್ನು ಪುನರ್ ಪರಿಶೀಲಿಸುವುದು ಅಗತ್ಯವಾಗಿರುತ್ತದೆ. ಸದರಿ ಸುತ್ತೋಲೆಯ ಮಾರ್ಗಸೂಚಿಗಳು ಸರ್ಕಾರದ ಕಾನೂನು ಇಲಾಖೆಯು ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ನೀಡಿರುವ ಅಭಿಪ್ರಾಯದ ಪ್ರಥಮ ಅಂಕಣದ ಅಭಿಪ್ರಾಯದಲ್ಲಿ ವಿಶೇಷ ಸಂದರ್ಭಗಳಲ್ಲಿ ಸಕಾರಣ ನೀಡಿ ಕಟ್ಟಡವನ್ನು ಭಾಗಶಃ ಬಳಕೆಗೆ ಅನುಮತಿಸಬಹುದೆಂಬ ಅಭಿಪ್ರಾಯ ನೀಡಿರುವುದನ್ನು ಪರಿಗಣನೆಗೆ ತೆಗೆದುಕೊಂಡಲ್ಲಿ ಮೇಲೆ ತಿಳಿಸಿದ ಕಟ್ಟಡಗಳಲ್ಲಿ ನಡೆಸುವ

.....2

HO (South)

ವ್ಯಾಪಾರ ಹಾಗೂ ಉದ್ದಿಮೆಗಳು ಪೂರ್ಣವಾಗಿ ಕಾನೂನು ಬಾಹಿರವೆಂದು ಪರಿಗಣಿಸಲುಬರುವುದಿಲ್ಲ. ಕಾನೂನು ಇಲಾಖೆಯು ಈ ಮೇಲಿನ ಅಭಿಪ್ರಾಯವನ್ನು ನೀಡುವಾಗ ಪ್ರಧಾನವಾಗಿ ಕಟ್ಟಡ ನಿರ್ಮಾಣ ಬೈ-ಲಾಗಳಲ್ಲಿನ ನಿಯಮಗಳನ್ನು ಮಾತ್ರ ಪರಿಗಣನೆಗೆ ತೆಗೆದುಕೊಂಡಿರುತ್ತದೆ. ವ್ಯಾಪಾರ ಪರವಾನಗಿ ನೀಡುವ ಕುರಿತು ಪ್ರಸ್ತುತ ಜಾರಿಯಲ್ಲಿರುವ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ 1976ರ ಕಲಂ 353 ಮತ್ತು 354ರ ಅಂಶಗಳನ್ನು ಕಾನೂನು ಇಲಾಖೆಯು ಗಮನಕ್ಕೆ ತೆಗೆದುಕೊಂಡಿರುವುದು ಕಂಡುಬಂದಿರುವುದಿಲ್ಲ. ಈ ನಿಯಮಗಳ ಅಡಿಯಲ್ಲಿ ಪರವಾನಗಿ ಪಡೆಯಲು ಸ್ವಾಧೀನ ಪ್ರಮಾಣ ಪತ್ರ ಹೊಂದಿರಲೇಬೇಕೆಂಬ ಷರತ್ತು ವಿಧಿಸಿಲ್ಲವಾದುದರಿಂದ ಹಾಗೂ ಸದರಿ ಅಧಿನಿಯಮಕ್ಕೆ ಮಾಡಲಾದ ತಿದ್ದುಪಡಿ ಕಲಂ 108(ಎ)ರಂತೆ ಪ್ರಾರಂಭಿಕ ಮತ್ತು ಸ್ವಾಧೀನ ಪ್ರಮಾಣ ಪತ್ರ ಪಡೆದ ಕಟ್ಟಡಗಳು ಹಾಗೂ ಪಡೆಯದ ಕಟ್ಟಡಗಳ ಮೇಲೆ ತೆರಿಗೆ ವಿಧಿಸಿ, ಅವುಗಳಿಗೆ ನಮೂನೆ 'ಎ' ಮತ್ತು 'ಬಿ' ವಹಿಗಳಲ್ಲಿ ದಾಖಲೆ ನಿರ್ವಹಿಸಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ಸ್ವಾಧೀನ ಪ್ರಮಾಣ ಪತ್ರ ಪಡೆಯದೆ ಇರುವ ಕಟ್ಟಡಗಳಿಗೂ 'ಬಿ' ನಮೂನೆಯ ವಹಿಯಲ್ಲಿ ಸ್ವಾಧೀನದಾರರೆಂಬ ದಾಖಲೆ ನಮೂದಿಸಿ, ಮತ್ತು ತೆರಿಗೆ ಪಾವತಿಸಿ, ಅವುಗಳ ಬಳಕೆಯನ್ನು ಮುಂದುವರೆಸಲು ಅವಕಾಶ ನೀಡಿರುವುದರಿಂದ ಈ ಸ್ವತ್ತುಗಳಲ್ಲಿ ವಹಿವಾಟು, ವ್ಯಾಪಾರ ಅಥವಾ ಉದ್ದಿಮೆಯ ಚಟುವಟಿಕೆಗಳಿಗೂ ನಿಯಂತ್ರಣ ಬೇಕಾಗುತ್ತದೆ. ಹಾಗೂ ಅನಧಿಕೃತ ಮತ್ತು ಮಂಜೂರಾದ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಲ್ಪಟ್ಟ ಕಟ್ಟಡಗಳನ್ನು ಕೆಲವು ನಿಬಂಧನೆಗಳೊಂದಿಗೆ ಸಕ್ರಮಗೊಳಿಸುವ ಸಲುವಾಗಿ ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಅಧಿನಿಯಮಕ್ಕೆ ತಿದ್ದುಪಡಿ ತರಲಾಗಿದೆ. ಅದರ ಅನುಷ್ಠಾನಕ್ಕಾಗಿ ನಿಯಮಗಳ ರಚನೆಯ ಪ್ರಕ್ರಿಯೆಯು ಸಹ ಜಾರಿಯಲ್ಲಿರುತ್ತದೆ. ಈ ಕಾರಣಗಳಿಂದ ಮತ್ತು ಪಾಲಿಕೆಯ ಸಂಪನ್ಮೂಲ ಕ್ರೂಢೀಕರಣದ ದೃಷ್ಟಿಯಿಂದ ಸ್ವಾಧೀನ ಪ್ರಮಾಣ ಪತ್ರ (O.C) ಹೊಂದದೆ ಇರುವ ಕಟ್ಟಡಗಳಲ್ಲಿ ನಡೆಯುತ್ತಿರುವ ವ್ಯಾಪಾರ ಮತ್ತು ಉದ್ದಿಮೆಗಳನ್ನು ಸಹ ಕೆಲವು ಷರತ್ತುಗಳೊಂದಿಗೆ ವ್ಯಾಪಾರ ಪರವಾನಗಿಯ ವ್ಯಾಪ್ತಿಗೆ ತರುವ ಅಂಶವನ್ನು ಮನಗಂಡು ಉಲ್ಲೇಖ (1)ರ ಸುತ್ತೋಲೆಯನ್ನು ಈ ಮೂಲಕ ಹಿಂದಕ್ಕೆ ಪಡೆಯಲಾಗಿದೆ ಹಾಗೂ ಉದ್ದಿಮೆ ಪರವಾನಗಿ ನೀಡಲು ಈ ಕೆಳಕಂಡ ಷರತ್ತು/ಸೂಚನೆಗಳನ್ನು ನೀಡಲಾಗಿದೆ.

ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಬರುವ ಒಟ್ಟಾರೆ ಕಟ್ಟಡಗಳ ಪೈಕಿ ಅನಧಿಕೃತವಾಗಿ ಸ್ವಾಧೀನವಲ್ಲಿರುವ ಸರ್ಕಾರಿ ಅಥವಾ ಸಾರ್ವಜನಿಕ ಜಾಗಗಳು ಅಥವಾ ಕಟ್ಟಡಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಕಟ್ಟಡಗಳಲ್ಲಿ ನಡೆಸುತ್ತಿರುವ 2007ರ ಸುವರ್ಣ ವ್ಯಾಪಾರ ಪರವಾನಗಿ ಕೈಪಿಡಿಯಲ್ಲಿ (ಕೈಪಿಡಿ) ನಿರ್ದಿಷ್ಟಪಡಿಸಲಾಗಿರುವ ವ್ಯಾಪಾರ, ಉದ್ದಿಮೆ ಮತ್ತು ವಾಣಿಜ್ಯ ಚಟುವಟಿಕೆಗಳನ್ನು ಉದ್ದಿಮೆ ಪರವಾನಗಿಯ ವ್ಯಾಪ್ತಿಗೆ (Trade License Net) ಒಳಪಡಿಸತಕ್ಕದ್ದು.

2. ಪರವಾನಗಿ ಕೈಪಿಡಿಯಲ್ಲಿ ನಿರ್ದಿಷ್ಟ ಪಡಿಸಿರುವ ವಾಣಿಜ್ಯ ಚಟುವಟಿಕೆಯು ಬಿ.ಬಿ.ಎಂ.ಪಿ./ಬಿ.ಡಿ.ಎ/ಹಿಂದಿನ ನಗರ ಸಭೆ, ಪುರಸಭೆ, ಪಂಚಾಯ್ತಿ ಅಥವಾ ಅಧಿಸೂಚಿತ ಪ್ರದೇಶ ಸಮಿತಿಗಳಿಂದ ಸ್ವಾಧೀನ ಪತ್ರ ಪಡೆದಿರುವ ಕಟ್ಟಡದಲ್ಲಿ ನಡೆಯುತ್ತಿದ್ದರೆ ಅದಕ್ಕೆ ಕೈಪಿಡಿಯಲ್ಲಿ ನಿರ್ದಿಷ್ಟಪಡಿಸಿದ ಧರವನ್ನಷ್ಟೇ ವಿಧಿಸಿ ಉದ್ದಿಮೆ ಪರವಾನಗಿಯನ್ನು ನೀಡಲು ಕ್ರಮವಹಿಸುವುದು.

3. ಪರವಾನಗಿ ಕೈಪಿಡಿಯಲ್ಲಿ ನಿರ್ದಿಷ್ಟಪಡಿಸಿರುವ ವಾಣಿಜ್ಯ ಚಟುವಟಿಕೆಯು ಸ್ವಾಧೀನ ಪ್ರಮಾಣ ಪತ್ರ ಪಡೆಯದೆ ಇರುವ ಕಟ್ಟಡವಲ್ಲಿದ್ದು, ಆ ಕಟ್ಟಡಕ್ಕೆ ಬಿ.ಬಿ.ಎಂ.ಪಿಯ ಖಾತೆಯನ್ನು ('ಎ ಖಾತೆ) ನೀಡಲಾಗಿದ್ದರೆ ಅಂತಹ ವಾಣಿಜ್ಯ ಚಟುವಟಿಕೆಗಳಿಗೂ ಕೈಪಿಡಿಯಲ್ಲಿ ನಿರ್ದಿಷ್ಟ ಪಡಿಸಿದ ದರವನ್ನಷ್ಟೇ ವಿಧಿಸಿ ಉದ್ದಿಮೆ, ವ್ಯಾಪಾರ ಪರವಾನಗಿಯನ್ನು ನೀಡಲು ಕ್ರಮವಹಿಸುವುದು.

4. ಪರವಾನಗಿ ಕೈಪಿಡಿಯಲ್ಲಿ ನಿರ್ದಿಷ್ಟಪಡಿಸಿರುವ ವಾಣಿಜ್ಯ ಚಟುವಟಿಕೆಯು ಸ್ವಾಧೀನ ಪ್ರಮಾಣ ಪತ್ರ ಪಡೆಯಲು ಅರ್ಹವಾಗದಿರುವಂತಹ ಕಟ್ಟಡಗಳಲ್ಲಿ ಅಂದರೆ ಮಂಜೂರಾದ ನಕ್ಷೆಗೆ ವ್ಯತಿರಿಕ್ತವಾಗಿ ಅಥವಾ ಅನಧಿಕೃತವಾಗಿ ನಿರ್ಮಾಣವಾಗಿರುವ ಕಟ್ಟಡಗಳಲ್ಲಿ ನಡೆಯುತ್ತಿದ್ದರೆ ಅಂತಹ ವಾಣಿಜ್ಯ ಚಟುವಟಿಕೆಗಳಿಗೆ ಸುವರ್ಣ ಪರವಾನಗಿ ಕೈಪಿಡಿಯಲ್ಲಿ ನಿರ್ದಿಷ್ಟ ಪಡಿಸಿದ ಶುಲ್ಕದ ಜೊತೆಗೆ ಸಾಂಕೇತಿಕವಾಗಿ ರೂ.500/-ಗಳನ್ನು ದಂಡ ವಿಧಿಸಿ ತಾತ್ಕಾಲಿಕ ಉದ್ದಿಮೆ ವ್ಯಾಪಾರ ಪರವಾನಗಿ ನೀಡುವುದು ಹಾಗೂ ಅಂತಹ ಉದ್ದಿಮೆ ಪರವಾನಗಿಯ ಮೇಲೆ "ಈ ಪರವಾನಗಿಯು ಉದ್ದಿಮೆ/ವಾಣಿಜ್ಯ ಚಟುವಟಿಕೆ ನಡೆಸಲು ಮಾತ್ರ ತಾತ್ಕಾಲಿಕವಾಗಿ ದಂಡಸಹಿತ ನೀಡಿದ ಅನುಮತಿಯೇ ವಿನಹ ಅಕ್ರಮ ಕಟ್ಟಡದ ಸಕ್ರಮೀಕರಣವೆಂದು ಭಾವಿಸತಕ್ಕದ್ದಲ್ಲ" ಎಂಬ ಷರಾವನ್ನು ದಪ್ಪ ಅಕ್ಷರಗಳಲ್ಲಿ ಮೊಹರು ಒತ್ತುವ ಮೂಲಕ ನಮೂದಿಸಬೇಕು.

5. ವ್ಯಾಪಾರ ಪರವಾನಗಿಗಳನ್ನು ನೀಡುವಾಗ ನಿಗಧಿತ ನಮೂನೆಯ ಅರ್ಜಿಯ ಜೊತೆಗೆ ಬಿ.ಬಿ.ಎಂ.ಪಿ.ಯಿಂದ ಪಡೆದ ಇತ್ತೀಚಿನ 'ಎ' ಅಥವಾ 'ಬಿ' ಖಾತೆಯ ಪ್ರತಿ, ತೆರಿಗೆ ಪಾವತಿಸಿದ ರಶೀದಿಯ ಪ್ರತಿ, ಬಾಡಿಗೆ ಕಟ್ಟಡವಾಗಿದ್ದರೆ ಬಾಡಿಗೆ ಕರಾರು ಪತ್ರದ ಪ್ರತಿ ಅಥವಾ ಕಟ್ಟಡ ಮಾಲೀಕರಿಂದ ಪಡೆದ ಒಪ್ಪಿಗೆ ಪತ್ರದ ಪ್ರತಿ, ವಾಯು/ಜಲ/ಶಬ್ದಮಾಲಿನ್ಯವನ್ನು ಉಂಟುಮಾಡುವ ಬೃಹತ್ ಉದ್ಯಮವಾಗಿದ್ದರೆ, ನಿಯಮಾನುಸಾರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪಡೆದ ನಿರಾಕ್ಷೇಪಣೆ ಪತ್ರದ (NOC) ಪ್ರತಿಗಳನ್ನು ಕಡ್ಡಾಯವಾಗಿ ಪಡೆಯುವುದು.

......3

6. ಪರವಾನಗಿ ನೀಡಿದ ನಂತರ ಸಂಬಂಧಿತ ಕಡತಗಳನ್ನು ವಲಯ ಅಥವಾ ಉಪ ವಲಯ ಕಛೇರಿಯ ದಾಖಲೆ ಕೋಣೆಗೆ ಕಡ್ಡಾಯವಾಗಿ ವರ್ಗಾಯಿಸುವುದು. ಉದ್ದಿಮೆ ಪರವಾನಗಿ ಕಡತಗಳನ್ನು 'ಸಿ' ವರ್ಗದ ಕಡತಗಳಾಗಿ ವರ್ಗೀಕರಿಸಿ, ವಲಯ ಕಛೇರಿಯ ದಾಖಲೆ ಕೋಣೆಯಲ್ಲಿ ಸುರಕ್ಷಿತವಾಗಿ ನಿಗಧಿತ ಅವಧಿಯವರೆಗೆ ಕಾಯ್ದಿರಿಸಲು ಕ್ರಮ ವಹಿಸುವುದು.

7. ಪರವಾನಗಿ ನೀಡಿದ ನಂತರ ಈ ಸಂಬಂಧ ಮಂಜೂರಾದ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡಗಳ ವಿರುದ್ಧ ಕಾಮಗಾರಿ ಇಲಾಖಾ ವತಿಯಿಂದ ತೆಗೆದುಕೊಳ್ಳುವ ಕ್ರಮವನ್ನು ಕಾಯ್ದಿರಿಸಿ ಅಥವಾ ನ್ಯಾಯಾಲಯದ ಆದೇಶಗಳೇನಾದರು ಬಂದಲ್ಲಿ ಪರವಾನಗಿಯನ್ನು ರದ್ದುಪಡಿಸುವ ಷರತ್ತಿಗೊಳಪಡಿಸಿ ಕಾಯ್ದೆ ಅಡಿ ಪರವಾನಗಿ ನೀಡಲು ಕ್ರಮ ವಹಿಸುವುದು.

ಮೇಲ್ಕಂಡ ಮಾರ್ಗ ಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಲು ಎಲ್ಲಾ ವಲಯದ ಅಪರ/ಜಂಟಿ/ಉಪ ಆಯುಕ್ತರುಗಳು, ಆರೋಗ್ಯಾಧಿಕಾರಿಗಳು, ಮತ್ತು ಆರೋಗ್ಯ ವೈದ್ಯಾಧಿಕಾರಿಗಳಿಗೆ ಸೂಚಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ಇವರ ಮಾಹಿತಿಗಾಗಿ ಸಲ್ಲಿಸಿದೆ.
2. ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3. ಅಪರ ಆಯುಕ್ತರು (ಆಡಳಿತ)ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4. ಜಂಟಿ ಆಯುಕ್ತರು (ಆರೋಗ್ಯ)ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
5. ಮಾನ್ಯ ಆಡಳಿತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿಕಳುಹಿಸಿದೆ.
6. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
7. ಎಲ್ಲಾ ವಲಯಗಳ ಉಪ ಆಯುಕ್ತರುಗಳು ಮತ್ತು ಉಪ ಆಯುಕ್ತರು (ಆರೋಗ್ಯ)ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಕಳುಹಿಸಿದೆ.
8. ಮುಖ್ಯ ಆರೋಗ್ಯಾಧಿಕಾರಿಗಳು ಬಿ.ಬಿ.ಎಂ.ಪಿ ಇವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಎಲ್ಲಾ ವಲಯಗಳ ಆರೋಗ್ಯಾಧಿಕಾರಿಗಳು/ಉಪ ಆರೋಗ್ಯಾಧಿಕಾರಿಗಳು ಮತ್ತು ಆರೋಗ್ಯ ವೈದ್ಯಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10. ಎಲ್ಲಾ ಹಿರಿಯ ಆರೋಗ್ಯ ನಿರೀಕ್ಷಕರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
11. ಕಛೇರಿ ಪ್ರತಿ, ದಾಖಲೆ ಕೋಣೆಯ ಪ್ರತಿ ಮತ್ತು ಬಿಡಿ ಪ್ರತಿಗಳು.

<u>ಬೆಂಗಳೂರು ಮಹಾನಗರ ಪಾಲಿಕೆ</u>

ಸಂಖ್ಯೆ: [illegible]/2355/04[illegible]

ಆಯುಕ್ತರವರ ಕಛೇರಿ,
ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ:23-2-2005.

<u>ಸುತ್ತೋಲೆ</u>

(11)

ವಿಷಯ: ವಾಣಿಜ್ಯ ಕಟ್ಟಡಗಳ ನೆಲಮಾಳಿಗೆ ಪ್ರದೇಶವನ್ನು ವಾಹನ ನಿಲ್ದಾಣಕ್ಕಾಗಿಯೇ ಮೀಸಲಿಡುವ ಬಗ್ಗೆ.

****

ವಾಹನ ನಿಲ್ದಾಣಕ್ಕೆಂದು ಮೀಸಲಿಟ್ಟಿದ್ದ ನೆಲಮಾಳಿಗೆ ಪ್ರದೇಶದಲ್ಲಿ ಹೋಟೆಲ್ ಉದ್ದಿಮೆ ನಡೆಸಲು ನೀಡಿರುವ ಪರವಾನಗಿಗಳನ್ನು 1999-2000 ರ ಸಾಲಿನಿಂದ ನವೀಕರಸಬಾರದೆಂದು; ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಗಳು ನಿರ್ಣಯಿಸಿರುತ್ತವೆ. 1999-2000 ರ ಸಾಲಿನಿಂದ ನೆಲಮಾಳಿಗೆ ಹೋಟೆಲ್‌ಗಳಿಗೆ ನೀಡಿದ್ದ ಪರವಾನಗಿಗಳನ್ನು ನವೀಕರಿಸದಿದ್ದ ಕ್ರಮವನ್ನು ಪ್ರಶ್ನಿಸಿ ಹೂಡಿದ್ದ ಡಬ್ಲ್ಯು.ಪಿ;10297/99 ಮತ್ತು ಇತರೆ ಮೊಕದ್ದಮೆಗಳು ದಿನಾಂಕ: 6-8-99 ರಂದು ಇತ್ಯರ್ಥವಾಗಿರುತ್ತವೆ. ನ್ಯಾಯಾಲಯದ ಸದರೀ ಆದೇಶವನ್ನು ಪ್ರಶ್ನಿಸಿ ವಿಭಾಗೀಯ ನ್ಯಾಯ ಪೀಠದ ಮುಂದೆ ಹೂಡಿದ್ದ ಡಬ್ಲ್ಯು.ಎ: 6063/99ರ ಮೇಲ್ಮನವಿಗಳು ದಿನಾಂಕ:20-1-2000 ರಂದು ವಜಾ ಆಗಿರುತ್ತವೆ.

<u>ನ್ಯಾಯಾಲಯದ ಪರಿಣಾಮಕಾರಿ ಆದೇಶದ ಭಾಗ ಈ ಕೆಳಕಂಡಂತೆ ಇರುತ್ತದೆ.</u>

(1) "It is declared that the places ear-marked for car parking in the plan sanctioned for the construction of a building cannot be permitted to be deviated for purposes other than car parking and no one is entitled to seek for grant or renewal of a trade licence to carry on any commercial activity in such place and the Authoritiesofthe Corporation are entitled to demolish the constructions, if any, made in contravention of the sanctioned plan, in accordance with law and after giving an apportunity to the parties who are likely to be affected an account of such demolition."

(2) "In respect of the building constructed subsequent to 27th April 1984 no one is entitledto seek for a Trade Licence to run hotel ect., if the establishment of such business venture would result in contravention of bye-law No:21 of the building bye-laws."

<u>ವಿಭಾಗೀಯ ನ್ಯಾಯಪೀಠವು ಅವಲೋಕಿಸಿರುವ ಅಂಶಗಳು ಈ ರೀತಿ ಇರುತ್ತವೆ.</u>

" Renewal of Licence has to be done on the same terms as if a fresh license is to be granted".

" Illegality commited in granting the Trade Licence cannot be permitted to be continued especially when it is against the interest of the public in general or which can bead to loss of human life or property in the case of fire or which can result in creating un-hygienic condition"

ವಾಹನ ನಿಲ್ದಾಣಕ್ಕೆಂದು ನಕ್ಷೆ ಮಂಜೂರಾಗಿರುವ ಪ್ರದೇಶವನ್ನು ವಾಹನ ನಿಲ್ದಾಣಕ್ಕಲ್ಲದೆ ಬೇರೆ ಯಾವುದಕ್ಕೂ ಉಪಯೋಗಿಸಬಾರದು-ಯಾವ ಉದ್ದೇಶಕ್ಕಾಗಿ ನಕ್ಷೆ ಮಂಜೂರಾಗಿದೆಯೋ ಆ ಉದ್ದೇಶಕ್ಕಲ್ಲದೆ ಬೇರೆ ಯಾವುದಕ್ಕೂ ಉಪಯೋಗಿಸಬಾರದು ಹಾಗೂ ದಿನಾಂಕ:27-4-1984ರ ನಂತರ ನಿರ್ಮಾಣವಾಗಿರುವ ಯಾವುದೇ ಕಟ್ಟಡದ ನೆಲಮಾಳಿಗೆಯಲ್ಲಿ ಹೋಟೆಲ್ ಉದ್ದಿಮೆ ನಡೆಸಲು ಪರವಾನಗಿ ನೀಡಬಾರದು ಎಂಬುದು ನ್ಯಾಯಾಲಯದ ಸ್ಪಷ್ಟ ಹಾಗೂ ನಿರ್ಧಿಷ್ಟ ಆದೇಶ. ಅದರಂತೆ ಬೈಲಾ 21(ಸಿ) ಪ್ರಕಾರ ಹೋಟೆಲ್ ಉದ್ದಿಮೆಯನ್ನು ನಡೆಸಲು ನಿರ್ಬಂಧಿಸಲಾಗಿದೆ.

ಅಲ್ಲದೆ, ನಿಯಮಾವಳಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಕಟ್ಟಡದ ಭಾಗವನ್ನು ಹೊಡೆದು ಹಾಕಲು ಕೆ.ಎಂ.ಸಿ. ಕಾಯ್ದೆ ಕಲಂ 321ರ ಅನ್ವಯ ಜರುಗಿಸುವ ಕ್ರಿಯೆಯು ಅಂತ್ಯಗೊಂಡಿದ್ದು; ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಯಾವುದೇ ನಿರ್ಬಂಧವಿರುವುದಿಲ್ಲ.

ಆದುದರಿಂದ, ವಾಹನ ನಿಲ್ದಾಣಕ್ಕೆಂದು ಮೀಸಲಿಟ್ಟಿದ್ದ ಕಟ್ಟಡದ ನೆಲಮಾಳಿಗೆ ಪ್ರದೇಶವನ್ನು ಖಡಾಖಂಡಿತವಾಗಿ ವಾಹನ ನಿಲ್ದಾಣಕ್ಕಾಗಿಯೇ ಮೀಸಲಿಡಲು ನಿಯಂತ್ರಿಸಬೇಕೆಂದು ಸೂಚಿಸಿದೆ. ಹಾಗೂ 2005-06ರ ಸಾಲಿನಲ್ಲಿ ನೆಲಮಾಳಿಗೆ ಪ್ರದೇಶದಲ್ಲಿ ಹೋಟೆಲ್ ಉದ್ದಿಮೆ ನಡೆಸಲು ಪರವಾನಗಿ ನವೀಕರಿಸಬಾರದೆಂದು ನಿರ್ದೇಶಿಸಿದೆ. ಆದರೂ ಯಾವುದೇ ಕಾರಣದಿಂದ ನೆಲಮಾಳಿಗೆ ಪ್ರದೇಶಗಳಲ್ಲಿ ಪರವಾನಗಿ ನೀಡಿದ್ದೇ ಆದರೆ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುವುದು. ನ್ಯಾಯಾಲಯಗಳ ಆದೇಶ/ಸರ್ಕಾರದ ಆದೇಶಗಳೇನೆ ಇದ್ದರು ಅಂತಹ ಪ್ರಕರಣಗಳನ್ನು ಅಪರ ಆಯುಕ್ತರು (ಹಣಕಾಸು) ರವರ ಮುಖಾಂತರ ಚರ್ಚಿಸಿ, ಇತ್ಯರ್ಥಪಡಿಸಲು ಆಯುಕ್ತರ ವಿವೇಚನೆಗೆ ಬಿಡುವುದು.

ಆಯುಕ್ತರು,
ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:-
ಮುಖ್ಯ ಆರೋಗ್ಯಾಧಿಕಾರಿಯವರು/ವಲಯ ಆರೋಗ್ಯಾಧಿಕಾರಿಯವರು/
ಎಲ್ಲಾ ಉಪ ಆರೋಗ್ಯಾಧಿಕಾರಿಯವರಿಗೆ.
ಎಲ್ಲಾ ಆರೋಗ್ಯ ವೈದ್ಯಾಧಿಕಾರಿ, ಇವರುಗಳಿಗೆ ಕಳುಹಿಸುತ್ತಾ, ಈ ಸುತ್ತೋಲೆಯ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸೂಚಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

/06/07-08

ಆಯುಕ್ತರವರ ಕಛೇರಿ,
ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 19-08-2008

ಸುತ್ತೋಲೆ

ವಿಷಯ: Occupancy Certificate ಇಲ್ಲದ ಕಟ್ಟಡಗಳಿಗೆ ಆರೋಗ್ಯ ಪರವಾನಗಿ (Trade License) ಮಂಜೂರು ಮಾಡುವ ಕುರಿತು.

ಉಲ್ಲೇಖ: 1. ರಾಜ್ಯ ಮಾಹಿತಿ ಆಯೋಗ ಸಂಖ್ಯೆ: ಕೆಐಸಿ 631 ಸಿಪಿಎಂ 2007. ದಿನಾಂಕ: 18-05-2007ರ ಆದೇಶ.
2. ಸರ್ಕಾರದ ಪತ್ರದ ಸಂಖ್ಯೆ: ನಅಇ 181 ಎಂಎನ್‌ವೈ 2008, ದಿನಾಂಕ: 21-07-2008.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Occupancy Certificate ಇಲ್ಲದ ಕಟ್ಟಡಗಳಿಗೆ ಆರೋಗ್ಯ ಪರವಾನಗಿ (Trade License) ಮಂಜೂರು ಮಾಡುವ ಕುರಿತು ಉಲ್ಲೇಖ-1ರ ಆದೇಶದ ಮೇರೆಗೆ ಸರ್ಕಾರದ ಕಾನೂನು ಇಲಾಖೆಗೆ ಅಭಿಪ್ರಾಯ ಕೋರಲಾದಂತೆ, ಸದರಿ ಇಲಾಖೆಯು ಈ ಕೆಳಕಂಡ ಅಭಿಪ್ರಾಯ ನೀಡಿರುತ್ತದೆ.

"The grant of Trade License would per se amount to authorization of occupation of building Rule-5.7 of Building Bye-Laws 2003. Occupancy of building by any person is not permitted in the absence of issuance of Occupancy Certificate be the competent authority.

However partial occupancy can be granted by the authority in exceptional cases after recording reasons. It is thus mandatory on the part of the authority to consider the feasibility of allowing partial occupancy by recording reasons. Thus it follows that in the absence of grant of Occupancy Certificate or specific order for partial occupation, the Trade License cannot be granted legally".

ಮೇಲ್ಕಂಡ ಅಭಿಪ್ರಾಯದಂತೆ, ಎಲ್ಲಾ ವಲಯ ಅಪರ / ಜಂಟಿ ಆಯುಕ್ತರುಗಳು, ಆರೋಗ್ಯಾಧಿಕಾರಿಗಳು, ಆರೋಗ್ಯ ವೈದ್ಯಾಧಿಕಾರಿಗಳು, ಇನ್ನೂ ಮುಂದೆ ಆರೋಗ್ಯ ಪರವಾನಗಿ (Trade License) ಮಂಜೂರು ಮಾಡುವಾಗ ಕಟ್ಟಡಕ್ಕೆ ಸಕ್ಷಮ ಪ್ರಾಧಿಕಾರದಿಂದ Occupancy Certificate ನೀಡಲಾಗಿರುತ್ತದೆಯೆಂಬ ಬಗ್ಗೆ ಖಚಿತ ಪಡಿಸಿಕೊಳ್ಳಲು ಸೂಚಿಸಿದೆ.

19/8/08
ವಿಶೇಷ ಆಯುಕ್ತರು (ಆಡಳಿತ),
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು : ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಯೋಜನೆ)/(ಸಂಪನ್ಮೂಲ ಮತ್ತು ಹಣಕಾಸು) ರವರಿಗೆ ಕಳುಹಿಸಿದೆ.
: ಎಲ್ಲಾ ವಲಯ ಅಪರ/ಜಂಟಿ ಆಯುಕ್ತರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ರಾಜ್ಯ ಮಾಹಿತಿ ಆಯುಕ್ತರು, ರಾಜ್ಯ ಮಾಹಿತಿ ಆಯೋಗ, ಗೇಟ್ ನಂ. 1, 3ನೇ ಹಂತ, 3ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-1. ರವರ ಅವಗಾಹನೆಗೆ ಸಲ್ಲಿಸಿದೆ.

(52)

(13)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಶೇಷ ಆಯುಕ್ತರು (ಯೋಜನೆ) ರವರ ಕಛೇರಿ, ಎನ್.ಆರ್. ವೃತ್ತ, ಬೆಂಗಳೂರು – 560 002.

ಸಂಖ್ಯೆ: ವಿ.ಆ(ಯೋ)/ಪಿಆರ್/8151 /2012-13 ದಿನಾಂಕ: 02-02-2013

ಕಛೇರಿ ಆದೇಶ

ವಿಷಯ: ವಸತಿ (ಮುಖ್ಯ) ಭೂ ಉಪಯೋಗ ಹೊಂದಿರುವ ನಿವೇಶನಗಳಲ್ಲಿ ವಸತಿ ಉಪಯೋಗ ಹೊರತುಪಡಿಸಿ ಇತರೇ ಉಪಯೋಗಗಳಿಗೆ ದಿನಾಂಕ: 25-01-2012 ರ ನಂತರ ನೀಡಿರುವ ನಕ್ಷೆ ಮಂಜೂರಾತಿಯನ್ನು ಹಿಂಪಡೆಯುವ ಬಗ್ಗೆ.

ಉಲ್ಲೇಖ: 1) ರಿಟ್ ಅರ್ಜಿ ಸಂಖ್ಯೆ: 3676/2008 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 25-01-2012 ರಂದು ನೀಡಿರುವ ಮಧ್ಯಂತರ ಆದೇಶ

2) ಕಛೇರಿ ಆದೇಶ ಸಂಖ್ಯೆ: ವಿಆ(ಯೋ)/ಪಿಆರ್/8151/12-13, ದಿನಾಂಕ: 08-11-2012

3) ರಿಟ್ ಅರ್ಜಿ ಸಂಖ್ಯೆ: 3676/2008 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 13-12-2012 ರಂದು ನೀಡಿರುವ ದಿನದ ಆದೇಶ

* * * * * *

ವಿಷಯಕ್ಕೆ ಸಂಬಂಧಿಸಿದಂತೆ ಪರಿಷ್ಕೃತ ಮಾಸ್ಟರ್ ಪ್ಲಾನ್ – 2015 ರಲ್ಲಿ ವಸತಿ (ಮುಖ್ಯ) ಎಂದು ವರ್ಗೀಕರಿಸಿರುವ ಪ್ರದೇಶದಲ್ಲಿ ವಸತಿ ಉಪಯೋಗವನ್ನು ಹೊರತುಪಡಿಸಿ ಬೇರಾವುದೇ ಉಪಯೋಗಗಳಿಗೆ ಅನುಮತಿ ನೀಡಬಾರದೆಂದು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 25-01-2012 ರಂದು ಮಧ್ಯಂತರ ಆದೇಶವನ್ನು ಹೊರಡಿಸಿದ್ದು, ಸದರಿ ದಾವೆಯ ಪ್ರಕ್ರಿಯೆಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇನ್ನೂ ಪ್ರಗತಿಯಲ್ಲಿದ್ದು ಇತ್ಯರ್ಥವಾಗಿರುವುದಿಲ್ಲ. ಹಾಗಾಗಿ, ದಿನಾಂಕ: 25-01-2012 ರ ನಂತರ ವಸತಿ (ಮುಖ್ಯ) ಭೂ ಉಪಯೋಗ ಹೊಂದಿರುವ ನಿವೇಶನಗಳಲ್ಲಿ ವಸತಿ ಉಪಯೋಗ ಹೊರತುಪಡಿಸಿ ಇತರೇ ಉಪಯೋಗಗಳಿಗೆ ನೀಡಿರುವ ನಕ್ಷೆ ಮಂಜೂರಾತಿಗಳನ್ನು ಹಿಂಪಡೆದು ಸದರಿ ಮಾಹಿತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. ಸದರಿ ದಾವೆಯ ವಿಚಾರಣೆಯನ್ನು ದಿನಾಂಕ: 13-12-2012 ರಂದು ನಡೆಸಿ, ದಿನಾಂಕ: 25-01-2012 ರ ಮಧ್ಯಂತರ ಆದೇಶಕ್ಕೆ ಮುಂದುವರೆದು ಸ್ಪಷ್ಟೀಕರಣವನ್ನು ನೀಡಿದ್ದು, ಈ ಕೆಳಕಂಡಂತೆ ಇರುತ್ತದೆ.

We direct that the BBMP shall not permit or grant any change of land user in the following areas i.e., Malleshwaram, Richmond Town, Vasanthanagar, Jayanagar, Vijayanagar, Vishweshwarapura, Rajajinagar and R.T.Nagar. In addition thereto, the residential areas mentioned and shown in CDP 1995, regardless of whether they are subsequently depicted as residential main or residential mized are also included. This order shall also apply to other residential areas regardless of the nomenclature used in the Revised Master Plan of 2015. Any building plans that have been sanctioned or trade licenses or change of land user that has been allowed subsequent to our order dated: 25-01-2012 shall be recalled.

PR/3036/12-13
13/2/13

C1
circular file
13/2/13

ಆದ್ದರಿಂದ, ರಿಟ್ ಅರ್ಜಿ ಸಂಖ್ಯೆ: 3676/2008, ದಿನಾಂಕ: 13-12-2012 ರಂದು ದಿನದ ಆದೇಶದಲ್ಲಿ ನೀಡಿರುವ ಮುಂದುವರೆದ ಸ್ಪಷ್ಟೀಕರಣದಂತೆ ದಿನಾಂಕ: 25-01-2012 ರ ಮಧ್ಯಂತರ ಆದೇಶದ ನಂತರ ವಸತಿ (ಮುಖ್ಯ) ಮತ್ತು ವಸತಿ (ಮಿಶ್ರ) ಉಪಯೋಗಗಳಿಗೆ ಹೊಂದಿಕೊಂಡಿರುವ ನಿವೇಶನಗಳಲ್ಲಿ ವಸತಿ ಉಪಯೋಗ ಹೊರತುಪಡಿಸಿ ಇತರೇ ಉಪಯೋಗಗಳಿಗೆ ಕೇಂದ್ರ ಕಛೇರಿ ನಗರ ಯೋಜನೆ ಶಾಖೆ ಹಾಗೂ ಆಯಾ ವಲಯ ಕಛೇರಿಗಳಲ್ಲಿ ನೀಡಿರುವ ನಕ್ಷೆ ಮಂಜೂರಾತಿಗಳನ್ನು ಕೂಡಲೇ ಹಿಂಪಡೆದು, ಹಿಂಪಡೆದಿರುವ ಆದೇಶದೊಂದಿಗೆ ವಿವರವಾದ ವರದಿಯನ್ನು ಕೂಡಲೇ ಅಪರ ನಿರ್ದೇಶಕರು (ನಗರ ಯೋಜನೆ) ರವರ ಕಛೇರಿಗೆ ಕಳುಹಿಸಲು ಹಾಗೂ ವಸತಿ (ಮುಖ್ಯ) ಮತ್ತು ವಸತಿ (ಮಿಶ್ರ) ಭೂ ಉಪಯೋಗದ ವ್ಯಾಪ್ತಿಯ ನಿವೇಶನಗಳಲ್ಲಿ ಇನ್ನು ಮುಂದೆ ವಸತಿ ಉದ್ದೇಶದ ಕಟ್ಟಡಗಳಿಗೆ ಮಾತ್ರ ನಕ್ಷೆ ಮಂಜೂರಾತಿ ನೀಡತಕ್ಕದೆಂದು ಈ ಮೂಲಕ ಸೂಚಿಸಿದೆ.

ಇದನ್ನು ಅತೀ ಜರೂರೆಂದು ಪರಿಗಣಿಸುವುದು.

11/2/13

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಮಾನ್ಯ ಆಯುಕ್ತರವರ ಅವಗಾಹನಗೆ ತರಲು ಮಾನ್ಯ ಆಯುಕ್ತರವರ ಆಪ್ತಶಾಖೆಗೆ ಕಳುಹಿಸಿದೆ.
2. ಪ್ರಧಾನ ಅಭಿಯಂತರವರ ಮಾಹಿತಿಗಾಗಿ ಕಳುಹಿಸಿದೆ.
3. ಅಪರ ಆಯುಕ್ತರು / ಜಂಟಿ ಆಯುಕ್ತರು (ಪೂರ್ವ / ಪಶ್ಚಿಮ / ದಕ್ಷಿಣ)/ ಬೊಮ್ಮನಹಳ್ಳಿ/ ಬ್ಯಾಟರಾಯನಪುರ/ ದಾಸರಹಳ್ಳಿ / ಮಹದೇವಪುರ / ರಾಜರಾಜೇಶ್ವರಿನಗರ) ರವರಿಗೆ ಮಾಹಿತಿಗಾಗಿ ಕಳುಹಿಸುತ್ತಾ, ಕ್ರಮ ವಹಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಸೂಚಿಸಿದೆ.
4. ಅಪರ ನಿರ್ದೇಶಕರು (ನಗರ ಯೋಜನೆ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
5. ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ ಮತ್ತು ದಕ್ಷಿಣ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ .
6. ಸಹಾಯಕ ನಿರ್ದೇಶಕರುಗಳು (ನಗರ ಯೋಜನೆ) (ಪೂರ್ವ / ಪಶ್ಚಿಮ / ದಕ್ಷಿಣ / ಬೊಮ್ಮನಹಳ್ಳಿ / ಬ್ಯಾಟರಾಯನಪುರ / ದಾಸರಹಳ್ಳಿ / ಮಹದೇವಪುರ / ರಾಜರಾಜೇಶ್ವರಿನಗರ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

Certified Copy
K. Madhu Kumar 20/3/16
ಪ್ರಧಾನ ಅಭಿಯಂತರರ ತಾಂತ್ರಿಕ ಸಹಾಯಕರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

6915/1

(14)

Raja Venkatesh Prasad

IN THE HIGH COURT OF KARNATAKA AT BANGALORE

DATED THIS THE 19TH DAY OF FEBRUARY 2014

PRESENT

THE HON'BLE MR.D.H.WAGHELA, CHIEF JUSTICE

AND

THE HON'BLE MRS.JUSTICE B.V.NAGARATHNA

WRIT PETITION NO. 3676/2008 &
WRIT PETITION NOS.43472-43474/2011 (GM-RES-PIL)

BETWEEN :

1. CITIZENS' ACTION FORUM
NO.31/1, I FLOOR
M K PUTTALINGAIAH ROAD
PADMANABHANAGARA
BANGALORE-560070
REPRESENTED BY ITS SECRETARY
LT. COL. MATHEW THOMAS (RETD)

2. LT. COL. MATHEW THOMAS (RETD)
S/O LATE SHRI T P JOHN
AGE: 70 YEARS, SECRETARY
CITIZENS' ACTION FORUM
NO.30/1, 1ST FLOOR
M K PUTTALINGAIAH ROAD
PADMANABHANAGARA
BANGALORE-560070

3. SADASHIVANAGAR RESIDENTS' WELFARE
ASSOCIATION, NO.457, 11TH MAIN ROAD
R M V EXTENSION, SADASHIVANAGAR
BANGALORE-560080
REP BY ITS HONORARY SECRETARY
MR B K JAGADISHCHANDRA, IFS (RETD)

4. MR B K JAGADISCHANDRA
SECRETARY, SRWA, AGE: 69 YEARS
S/O LATE SHRI B N KAPPANNA
438, 11TH MAIN ROAD, RMV EXTENSION

SADASHIVANAGAR
BANGALORE-560080

5. MAJ. GEN. M K PAUL (RETD) AVSM
S/O LATE MR. NRIPENDRA KISHORE PAUL
AGED 74 YEARS, PAST PRESIDENT
DEFENCE COLONY RESIDENTS' ASSOCIATION
'DEVALAYA", 3RD MAIN ROAD
DEFENCE COLONY, BANGALORE-560038

6. MR XERXES DESAI S/O MR SAPUE DESAI
AGED 71 YEARS, RETD. CHIEF EXECUTIVE
TITAN GROUP OF COMPANIES &
PRESIDENT, DEFENCE COLONY
RESIDENTS' ASSOCIATION, 41, 4TH MAIN
3RD CROSS, DEFENCE COLONY
INDIRANAGAR, BANGALORE-560038

7. AIR VICE-MARSHAL (RETD)
S KRISHNASWAMY AVSM
S/O LATE MR K R SRINIVASAN
AGED 77 YEARS
RETIRED SENIOR IAF OFFICER
A1, "VIJAYASRINIVAS"
218, 3RD MAIN, DEFENCE COLONY
INDIRANAGAR, BANGALORE-560038

8. MR J R KAPUR S/O MR N D KAPUR
AGED 80 YEARS
FORMER GENERAL MANAGER, HAL
2973, 5TH CROSS, 13TH MAIN
HAL 2ND STAGE, BANGALORE-560008

9. GP. CAPT. K BHASKARAN
S/O LATE MR. KUNHAMBU, AGED 76 YEARS
RETIRED SENIOR AIR FORCE OFFICER
FORMER PRESIDENT, HAL 2ND STAGE
CIVIC AMENITIES & CULTURAL ASSOCIATION
3019, 12-B MAIN, HAL 2ND STAGE
BANGALORE-560008

MR. S SHYAM SUNDAR, IFS (RETD)
S/O MR. S VENKATA RAO, AGED 76 YEARS
FORMER PRINCIPAL CHIEF CONSERVATOR OF
FORESTS, GOVT. OF KARNATAKA &

FORMER PRESIDENT, HAL 2ND STAGE
CIVIC AMENITIES & CULTURAL ASSOCIATION
2989/D, 12^{TH} MAIN, HAL 2^{ND} STAGE
BANGALORE-560008

11. MR P P R NAIR
S/O LATE MR K K R PANICKER
AGED 72 YEARS
FORMER SPECIAL SECRETARY
MINISTRY OF HOME AFFAIRS
GOVERNMENT OF INDIA
3367/B, 13TH MAIN ROAD
HAL 2ND STAGE, BANGALORE-560008

12. MR S N S MURTHY, IPS (RETD)
S/O LATE MR S NARAYANA RAO
AGED 72 YEARS
FORMER DG & IGP, KARNATAKA STATE
AND FORMER PRESIDENT, HAL 2^{ND} STAGE
CIVIC AMENITIES AND CULTURAL ASSOCIATION
NO. 3367/C, 13^{TH} MAIN ROAD, HAL 2^{ND} STAGE
BANGALORE-560008

13. DR B R PAI
S/O LATE MR RAMA BHASKAR PAI
AGED 63 YEARS, FORMER DIRECTOR
NATIONAL AEROSPACE LABORATORIES
1078, 12^{TH} MAIN ROAD, HAL 2^{ND} STAGE
BANGALORE-560008

14. DR R BALASUBRAMANIAM
S/O LATE DR. K RAMAKRISHNA IYER
AGED 64 YEARS
DIRECTOR AND SCIENTIFIC ADVISER
NATIONAL AEROSPACE LABORATORIES (RETD)
808, MAYURAPRIYA, 7^{TH} MAIN, I CROSS
HAL 2^{ND} STAGE, BANGALORE-560008

15. MR. KUMAR RANGANATHAN
S/O CDR T V RANGANATHAN
AGED 40 YEARS
SENIOR MANAGER, INTEL CORPN.,
15, DEFENCE COLONY, INDIRANAGAR
BANGALORE-560038

16. MR S JANARDHAN
S/O LATE MR SUBRAMANIAN SESHADRI
AGED 75 YEARS
FORMERLY SCIENTIST AT
NATIONAL AEROSPACE LABORATORIES
BANGALORE (1960 - 1991) AND
CHIEF MODERATOR FOR NATIONAL
COMPUTING CENTRE, UK (1991-1999)
1196, 13TH MAIN, HAL 2ND STAGE
BANGALORE-560008

17. MR. RAVINDRANATH GURU
S/O LATE MR. MAHESHCHANDER GURU
AGED 64 YEARS, 593, DUNDUBHI, 24TH CROSS
BSK II STAGE, BANGALORE -560070

18. PANDURANGANAGAR RESIDENTS' WELFARE ASSOCIATION (REGD.)
NEAR WATER TANK, 5TH MAIN ROAD
PANDURANGANAGAR, IIM POST
BANNERGHATTA ROAD, BANGALORE-560076
REP BY ITS SECRETARY SRI K.P. BHAT

19. SRI K.P. DINESH KUMAR
PRESIDENT, PANDURANGANAGAR RESIDENTS' WELFARE ASSOCIATION (REGD.),
NEAR WATER TANK, 5TH MAIN ROAD
PANDURANGANAGAR, IIM POST
BANNERGHATTA ROAD, BANGALORE-560076

20. SRI K.P. BHAT, SECRETARY
PANDURANGANAGAR RESIDENTS' WELFARE ASSOCIATION (REGD)
NEAR WATER TANK, 5TH MAIN ROAD
PANDURANGANAGAR, IIM POST
BANNERGHATTA ROAD
BANGALORE-560076
(PETITIONER NOS.18 TO 20 ARE IMPLEADED V/O DATED 22.02.2010)

... PETITIONERS

(BY SRI ADITYA SONDHI, ADV., FOR P-1 TO P17;
SRI V.B. SHIVAKUMAR, ADV., FOR P-18 TO 20)

AND :

1. STATE OF KARNATAKA
DEPARTMENT OF URBAN DEVELOPMENT
M S BUILDING, BANGALORE-560001
REP BY ITS SECRETARY

2. BANGALORE DEVELOPMENT AUTHORITY
T CHOWDAIAH ROAD, KUMARA PARK WEST
BANGALORE-560020
REPRESENTED BY ITS COMMISSIONER

3. BANGALORE METROPOLITAN REGIONAL
DEVELOPMENT AUTHORITY, NO.1
ALI ASKAR ROAD, BANGALORE-560052
REPRESENTED BY ITS COMMISSIONER

4. BRUHAT BANGALORE MAHANAGARA PALIKE
N R SQUARE, BANGALORE-560002
REPRESENTED BY ITS COMMISSIONER
(R-4 IMPLEADED V/O DATED 16.8.12)

... RESPONDENTS

(BY SMT. NILOUFER AKBAR, AGA FOR R-1;
SRI D N NANJUNDA REDDY, SENIOR COUNSEL FOR
SRI RAVI G SABHAHIT, ADV., FOR R-2;
SRI S.G. PANDIT, ADV., FOR R-3;
SRI SUBRAMANYA .R, ADV., FOR M/S.ASHOK
HARANAHALLI ASSOCIATES, ADVS., FOR R-4;
SRI A RAVISHANKAR, ADV., FOR IMPLEADING
APPLICANT ON I.A.NO.II/13 & I.A.NO.IV/13;
SRIYUTHS SIDDAPPA, SUNIL & NITIN, ADVS., FOR
IMPLEADING APPLICANT ON I.A.V/13;
SRI K.SHASHIKIRAN SHETTY, ADV., FOR M/S.SHETTY &
HEGDE ASSOCIATES, ADVS., FOR APPLICANTS IN
I.A.NO.X/13 & I.A.NO.XIII/13)

THESE WRIT PETITIONS ARE FILED UNDER ARTICLES 226 AND 227 OF THE CONSTITUTION OF INDIA PRAYING TO QUASH THE REVISED MASTER PLAN 2015 FORMULATED BY THE SECOND RESPONDENT INCLUDING THE ZONING REGULATIONS FRAMED THEREUNDER AND ALL ILLEGAL PERMISSIONS GRANTED SUBSEQUENT TO THE SAID PLAN VIDE ANNEXURE-S AND ETC.,

THESE WRIT PETITIONS COMING ON FOR FINAL DISPOSAL THIS DAY, NAGARATHNA .J MADE THE FOLLOWING:

ORDER

1. These writ petitions assail the Revised Master Plan 2015 formulated by the 2nd respondent –Bangalore Development Authority (BDA) and approved by the 1st respondent –State (a copy of the Master Plan is produced at Annexure-S). The State Government's order dated 25.06.2007 (Annexure-G), approving the Master Plan 2015 is also assailed. Consequential directions are also sought by the petitioners. Though the writ petitions were filed in the year 2008 and the matters were listed on several dates, on 25.01.2012, an interim order was passed by this Court. The same reads as under:-

> "We have heard the learned counsel for the parties. On 17.11.2011, we had permitted the objections to be filed on behalf of respondent no.1, within two weeks, subject to payment of costs. Objections are not on the record. Learned counsel for the petitioners has drawn our attention to the report of the Committee chaired by Dr.A.Ravindra. The first paragraph of the Highlights reads as follows;
>
> *"1. Change of land use has been curtailed for small properties on small roads. The notion of*

ancillary use of a property has also been done away with. These two provisions have caused much pain to communities, by mixing up commercial development in what should be residential areas only."

